ಬಿಡಿಎ/ಬಿಎಲ್‌ಎಸ್‌ಸಿಎಂ/ಬಿಫಿನ್‌ಟೆಕ್/ಬಿಸಿಹೆಚ್‌ಎನ್/ಬಿಎ&ಎಫ್/

ಬಿಎಇಡಿಪಿ/ಬಿಟಿಟಿಎಂ/ಬಿಸಿಎಸ್‌ಪಿ/ಬಿಸಿಟಿಟಿ/ಬಿಆರ್‌ಎಂ

ಮೊದಲನೆಯ ಸೆಮಿಸ್ಟರ್, ಕನ್ನಡ ಭಾಷಾ ಪಠ್ಯ ಪುಸ್ತಕ

# ವಾಣಿಜ್ಯ ವಿಶ್ಲೇಷಣಾ ಸಂಪದ-೧

(ಆಧುನಿಕ ಕನ್ನಡ ಸಾಹಿತ್ಯ)


ಪ್ರಧಾನ ಸಂಪಾದಕರು

**ಡಾ. ಎಂ.ಜಿ. ಮಂಜುನಾಥ್**

ಸಂಪಾದಕರು

**ಡಾ. ರುದ್ರೇಶ ಅದರಂಗಿ**

**ಡಾ. ಶೀಲವಂತ ಸಂಜೀವಕುಮಾರ್**

**ಡಾ. ಪ್ರೇಮಾವತಿ ಎಸ್.ಕೆ.**

**ಡಾ. ಆರ್. ವಾದಿರಾಜು**



**ಬೆಂಗಳೂರು ನಗರ ವಿಶ್ವವಿದ್ಯಾಲಯ**

**ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು**

A Prescribed Text Book for I Semester
BDA/BLSCM/BFinTec/BCHN/BA&F/BAEDP/BTTM/BCSP/BCTT/BRM :

Chief Editer : Dr. M.G. MANJUNATH

Editers : Dr. Rudresh Adarangi
Dr. Sheelwant Sanjeevakumar
Dr. Premavati S K
Dr. R Vadiraju

© ಕಾಯ್ದಿರಿಸಿದೆ

ಸಲಹಾ ಸಮಿತಿ

ಡಾ. ಎಂ.ಜಿ. ಮಂಜುನಾಥ

ಡಾ. ಎಸ್.ಎಲ್. ಮಂಜುನಾಥ

ಡಾ. ಬಿ.ಎನ್. ಪೂರ್ಣಿಮ

ಡಾ. ಸುವರ್ಣ ಸಂಗಣ್ಣ ಹುಡೇದ

ಪ್ರೊ. ಬೊಮ್ಮೆಗೌಡ

ಡಾ. ಮನೋನ್ಮನಿ

ಡಾ. ಪಿ. ಬೆಟ್ಟೇಗೌಡ

ಡಾ. ಎನ್.ಆರ್. ಚಂದ್ರೇಗೌಡ

ಪ್ರಥಮ ಅಂತರ್ಜಾಲ ಪ್ರಕಟಣೆ : ೨೦೨೪

## ಪರಿವಿಡಿ:


**ಕಾವ್ಯ ಭಾಗ :**

| | | |
|---|---|---|
| 1. ಕನಸಿನೊಳಗೊಂದು ಕಣಸು | : ದ.ರಾ. ಬೇಂದ್ರೆ | 02 |
| 2. ದೇವರು ರುಜುಮಾಡಿದನು | : ಕುವೆಂಪು | 05 |
| 3. ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ | : ಕೆ.ಎಸ್. ನರಸಿಂಹಸ್ವಾಮಿ | 08 |
| 4. ಕಲ್ಲಾಗು, ಕಲ್ಲಾಗು! | : ಎಂ. ಗೋಪಾಲಕೃಷ್ಣ ಅಡಿಗ | 13 |
| 5. ಕಾಲ ನಿಲ್ಲುವುದಿಲ್ಲ | : ಚನ್ನವೀರ ಕಣವಿ | 18 |
| 6. ಸುಟ್ಟಾವು ಬೆಳ್ಳಿಕಿರಣ | : ಡಾ. ಸಿದ್ಧಲಿಂಗಯ್ಯ | 24 |
| 7. ನಾವು ಹುಡುಗಿಯರೇ ಹೀಗೆ | : ಪ್ರತಿಭಾ ನಂದಕುಮಾರ್ | 27 |
| 8. ಅಮೃತಮತಿಯ ಸ್ವಗತ | : ಎಚ್.ಎಲ್. ಪುಷ್ಪಾ | 30 |

**ಕಥಾ ಭಾಗ :**

| | | |
|---|---|---|
| 1. ಪಂಜರದ ಗಿಣಿ | : ಯು.ಆರ್. ಅನಂತಮೂರ್ತಿ | 33 |
| 2. ಒಂದು ಬಾಗಿಲು | : ಪಿ. ಲಂಕೇಶ್ | 44 |
| 3. ಅವ್ವ | : ಬೆಸಗರಹಳ್ಳಿ ರಾಮಣ್ಣ | 62 |

**ಪ್ರಬಂಧ ಭಾಗ :**

| | | |
|---|---|---|
| 1. ದೀಪಾವಳಿಯ ನೆನಪುಗಳು | : ಹಾ.ಮಾ. ನಾಯಕ | 73 |
| 2. ಮಳೆಗಾಲದ ಚಕ್ರ | : ಕೆ.ಪಿ. ಪೂರ್ಣಚಂದ್ರ ತೇಜಸ್ವಿ | 86 |
| 3. ಸ್ನೇಹಕ್ಕೆ ಯಾವ ಸರಹದ್ದು | : ನೇಮಿಚಂದ್ರ | 100 |

| | |
|---|---|
| ಎರಡನೆ ಸೆಮಿಸ್ಟರ್ ಪತ್ಯ ಮಾಹಿತಿ | 105 |
| ಪ್ರಶ್ನೆಪತ್ರಿಕೆ ಸ್ವರೂಪ | 117 |
| ಪತ್ಯ ಸಂಪಾದಕರು | 118 |

# ಕಾವ್ಯ ಭಾಗ:

## 1. ಕನಸಿನೊಳಗೊಂದು ಕಣಸು

–ದ.ರಾ. ಬೇಂದ್ರೆ

ತಾಯಿ ಮಕ್ಕಳ ಸಂವಾದ

(ಈಗಿನ ಕನ್ನಡ ನಾಡಿನ ಮತ್ತು ಕನ್ನಡಿಗರ ಸ್ಥಿತಿಯ ಚಿತ್ರ)

"ಯಾರು ನಿಂದವರಲ್ಲಿ ತಾಯೆ" ಎಂಬೆ
"ಯಾರು ಕೇಳುವರೆನೆಗೆ ಯಾಕೆ ತಂದೆ?"
"ಬೇಸರದ ದನಿಯೇಕೆ ಹೆಸರ ಹೇಳಲ್ಲ."
"ಹೆಸರಾಗಿಯೂ ಕೂಡ ಹೇಳ ಹೆಸರಿಲ್ಲ"
"ನೀನಾರ ಮನೆಯವಳು ಮುತ್ತೈದೆ ಹೇಳು"
"ನಾನಾರ ಮನೆಯವಳೋ ಬಯಲನ್ನೆ ಕೇಳು."
"ಆಪ್ತರಿಲ್ಲವೆ ನಿನಗೆ ಇಷ್ಟರಿಲ್ಲೇ?"
"ಗುಪ್ತರಾದರೋ ಏನೋ ಇಷ್ಟರಲ್ಲೇ!"
"ಇರುವರೇ ಇದ್ದರೆ ಮಕ್ಕಳೆಂಬುವರು?"
"ಇರುವರೆಂದರು ಕೂಡ ಯಾರು ನಂಬುವರು?"
"ಮನೆಯಿಲ್ಲವೇ ಇರಲು ಪರದೇಶಿಯೇನು?"
"ಮನೆಯು ಮುನಿದೆದ್ದಿರಲು ಯಾ ದೇಶವೇನು?"
"ನಿನ್ನ ಮಾತಿನಲಿಹುದು ಒಡಪಿನಂದ!"
"ನನ್ನ ಹತ್ತಿರದೊಂದೆ ಉಳಿದಿಹುದು ಕಂದ"
"ರಾಜಮುಖಿ ನಿನ್ನಲ್ಲಿ ರಾಜಕಳೆಯಿಹುದು."

"ಸಾಜಮಾದರು ಪಕ್ಷವಿದು ವದ್ಯವಹುದು!"
"ಯಾವುದಾದರು ನಾಡದೇವಿಯೇ ನೀನು"
"ಭಾವುಕರ ಕಂಗಳಿಗೆ ದೇವಿಯೇ ನಾನು"
"ಈಗ ಬಂದಿಹುದೇಕೆ ಏನು ಬೆಸನ?"
"ಯೋಗವಿಲ್ಲದೆ ತಿಳಿಯದೆನ್ನ ವ್ಯಸನ!"
"ಹಾದಿ ಯಾವುದು ಹೇಳು, ಯಾವ ಯೋಗ?"
"ಆದಿ ಅಂತವು ಇಲ್ಲದಂಥ ತ್ಯಾಗ!"
"ಬೇಡಬಂದಿಹೆ ಏನು ಏನಾದರೊಂದು?"
"ಬೇಡಿದರೆ ಬೇಡಿದುದ ಕೊಡುವೆಯಾ ಇಂದು?"
"ಅಹುದು ಕೊಡುವೆನು ಎಂದು ನಾನೆನ್ನಬಹುದೆ?"
"ಬಹುದು–ಗಿಹುದಿನ ಶಂಕೆ! ವೀರನಹುದೆ?"
"ಹಿಂಜರಿವ ಅಂಜಿಕೆಯು ಹಿಡಿದಿಹುದು ಕೈಯ"
ಮುಂಜರಿವ ಹುರುಪಿನೊಡ ಮುಂದೆ ಬಾರಯ್ಯ"
"ಇಲ್ಲೆನ್ನಲಾರೆ ನಾನಹುದೆನ್ನಲಮ್ಮೆ!"
"ಬಲ್ಲವರು ದೈವವನು ಪರಕಿಸುವರೊಮ್ಮೆ!?"
"ಚಂಡಿ ಚಾಮುಂಡಿ ಪೇಳ್ ಬೇಕಾದುದೇನು?"
"ಗಂಡಸಾದರೆ ನಿನ್ನ ಬಲಿ ಕೊಡುವೆಯೇನು?

* * *

ಮನವು ನಡುಗಿತು ತನುವು ನವಿರಿಗೊಳಗಾಯ್ತು:
ನೆನವು–ನುಗ್ಗಿತು–ಹೊರಗೆ ಕಂಡೆ–ಬೆಳಗಾಯ್ತು.

* * *

**ಅಂಬಿಕಾತನಯದತ್ತ** : ಕನ್ನಡ ಕಾವ್ಯದ ಸೊಬಗು–ಸೊಗಸು ಹೆಚ್ಚಿಸಿದ ಕವಿ 'ಅಂಬಿಕಾತನಯದತ್ತ' ಕಾವ್ಯನಾಮದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರನ್ನು

'ವರಕವಿ', 'ಗಾರುಡಿಗ' ಎಂದು ಗುರುತಿಸಲಾಗುತ್ತದೆ. ತಂದೆ ರಾಮಚಂದ್ರ ತಾಯಿ ಅಂಬವ್ವ. ಧಾರವಾಡದಲ್ಲಿ 1896ರ ಜನವರಿ 31ರಂದು ಜನಿಸಿದರು. ಬೇಂದ್ರೆ ಅವರಿಗೆ ಮೈಸೂರು ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯ ಡಾಕ್ಟರೇಟ್ ಪದವಿ ನೀಡಿ ಗೌರವಿಸಿವೆ. ಶಿವಮೊಗ್ಗದಲ್ಲಿ ನಡೆದ 27ನೇ ಕನ್ನಡ ಸಾಹಿತ್ಯ ಸಮ್ಮೇಳನ (1943) ಅಧ್ಯಕ್ಷತೆ ವಹಿಸಿದ್ದರು. ಅರಳು ಮರಳು ಕವನಸಂಗ್ರಹಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ (1956) ನಾಕುತಂತಿಗೆ ಜ್ಞಾನಪೀಠ ಪ್ರಶಸ್ತಿ (1974) ದೊರಕಿದವು. ಬೇಂದ್ರೆಯವರು 1981ರ ಅಕ್ಟೋಬರ್ 26ರಂದು ಮುಂಬಯಿಯಲ್ಲಿ ನಿಧನರಾದರು.

ಕೃಷ್ಣಕುಮಾರಿ, ಸಖೀಗೀತ, ಉಯ್ಯಾಲೆ, ಗರಿ, ನಾದಲೀಲೆ, ಅರುಳುಮರುಳು ಇತ್ಯಾದಿ 25 ಕವನ ಸಂಕಲನಗಳು. ಸಾಹಿತ್ಯ ಮತ್ತು ವಿಮರ್ಶೆ, ಕಾವ್ಯೋದ್ಯೋಗ, ಸಾಹಿತ್ಯ ವಿರಾಟ ಸ್ವರೂಪ, ನಾಕುತಂತಿ, ನಿರಾಭರಣ ಸುಂದರಿ, ಶಾಂತಲಾ (ಅನುವಾದ) ಇತ್ಯಾದಿಗಳನ್ನು ರಚಿಸಿದ್ದಾರೆ.

**ಪದಗಳ ಅರ್ಥ :** ಒಡಮು= ಒಗಟು, ಸಾಜಮಾದರು= ಸತ್ಯವಾದರು, ಪಕ್ಷ=15ದಿನಗಳ ಅವಧಿ, ಬೆಸನ= ಕಾರ್ಯ, ವ್ಯಸನ= ಹವ್ಯಾಸ,

## 2. ದೇವರು ರುಜು ಮಾಡಿದನು

–ಕುವೆಂಪು

ದೇವರು ರುಜು ಮಾಡಿದನು:
ರಸವಶನಾಗುತ ಕವಿ ಅದ ನೋಡಿದನು!

ಬಿತ್ತರದಾಗಸ ಹಿನ್ನೆಲೆಯಾಗಿರೆ
ಪರ್ವತದೆತ್ತರ ಸಾಲಾಗೆಸೆದಿರೆ
ಕಿಕ್ಕಿರಿದಡವಿಗಳಂಚಿನ ನಡುವೆ
ಮೆರೆದಿರೆ ಜಲಸುಂದರಿ ತುಂಗೆ
ದೇವರು ರುಜು ಮಾಡಿದನು:
ರಸವಶನಾಗುತ ಕವಿ ಅದ ನೋಡಿದನು!

ನದಿ ಹರಿದಿತ್ತು; ಬನ ನಿಂತಿತ್ತು;
ಬಾನ್ ನೀಲಿಯ ನಗೆ ಬೀರಿತ್ತು.
ನಿರ್ಜನ ದೇಶದ ನೀರವ ಕಾಲಕೆ
ಖಗರವ ಪುಲಕಂ ತೋರಿತ್ತು.
ಹೂಬಿಸಿಲಲಿ ಮಿರುಗಿರೆ ನಿರಿವೊನಲು
ಮೊರೆದಿರೆ ಬಂಡೆಗಳಲ್ಲಿ ನೀರ್ತೊದಲು
ರಂಜಿಸೆ ಇಕ್ಕೆಲದಲಿ ಹೊಮ್ಮಳಲು
ಸಿಬ್ಬಲುಗುಡ್ಡೆಯ ಹೊಳೆಯಲಿ ಮೀಯುತ
ಕವಿಮನ ನಾಕದಿ ನೆಲಸಿತ್ತು;
ಮಧು ಸೌಂದರ್ಯದ ಮಧುರ ಜಗತ್ತು
ಹೃದಯ ಜಿಹ್ವೆಗೆ ಜೇನಾಗಿತ್ತು!

ದೃಶ್ಯ ದಿಗಂತದಿನೊಮ್ಮೆಯೆ ಹೊಮ್ಮಿ
ಗಿರಿವನ ಪಟದಾಕಾಶದಲಿ
ತೇಲುತ ಬರಲ್ಕೆ ಬಲಾಕಪಂಕ್ತಿ
ಲೇಖನ ರೇಖಾನ್ಯಾಸದಲಿ,
ಅವಾಙ್ಮಯ ಛಂದಃಪ್ರಾಸದಲಿ,
ಸೃಷ್ಟಿಯ ರಚನೆಯ ಕುಶಲಕೆ ಚಂದಕೆ
ಜಗದಚ್ಚರಿಯಂದದ ಒಪ್ಪಂದಕೆ
ಚಿರಚೇತನ ತಾನಿಹೆನೆಂಬಂದದಿ
ಬೆಳ್ಳಕ್ಕಿಯ ಹಂತಿಯ ಆ ನೆವದಿ
ದೇವರು ರುಜು ಮಾಡಿದನು
ರಸವಶನಾಗುತ ಕವಿ ಅದ ನೋಡಿದನು.

**ಕುವೆಂಪು** : ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರ ಕಾವ್ಯನಾಮ "ಕುವೆಂಪು". 1904ರ ಡಿಸೆಂಬರ್ 29 ರಂದು ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು. ತಂದೆ ವೆಂಕಟಪ್ಪ ಗೌಡರು, ತಾಯಿ ಸೀತಮ್ಮ. ಕುವೆಂಪುರವರ "ಬಿಗಿನರ್ಸ್ ಮ್ಯೂಸ್" ಎಂಬ ಇಂಗ್ಲೀಷ್ ಕವನಸಂಕಲನ ಭಾರತ ಭೇಟಿಗೆ ಬಂದಿದ್ದ ಐರಿಶ್ ಕವಿ ಜೇಮ್ಸ್ ಕಸಿನ್ಸ್ ರವರ ಮೆಚ್ಚುಗೆಗೆ ಪಾತ್ರವಾಗಿತ್ತು. ನಂತರ ಅವರ ಸಲಹೆಯಂತೆ ಕನ್ನಡದಲ್ಲಿ ಬರೆಯಲಾರಂಭಿಸಿದ ಕುವೆಂಪು ರವರು ಬರೆದ ಮೊದಲ ಕನ್ನಡ ಕವನ ಸಂಕಲನ "ಅಮಲನ ಕಥೆ". ಚಿಕ್ಕಂದಿನಿಂದಲೇ ಮಲೆನಾಡಿನ ಪರಿಸರದಲ್ಲಿ ಬೆಳೆದ ಕುವೆಂಪುರವರಿಗೆ ಅಪಾರವಾದ ಪರಿಸರ ಪ್ರೇಮ. ಅವರ ಪರಿಸರ ಪ್ರೀತಿಯೇ ಅವರ ಕಾವ್ಯದಲ್ಲಿ ಜೀವಂತವಾಗಿ ಮೇಳೈಸಿದೆ. ಕುವೆಂಪು ಅವರ ಕಾದಂಬರಿಗಳಾದ "ಕಾನೂರು ಸುಬ್ಬಮ್ಮ ಹೆಗ್ಗಡತಿ" ಮತ್ತು "ಮಲೆಗಳಲ್ಲಿ ಮದುಮಗಳು" ಭಾರತೀಯ ಸಾಹಿತ್ಯ ಪ್ರಪಂಚದಲ್ಲೇ ಶ್ರೇಷ್ಠ

ಕೃತಿಗಳೆಂಬ ಪ್ರಶಂಸೆಗೆ ಪಾತ್ರವಾಗಿವೆ. ಕನ್ನಡಕ್ಕೆ ಮೊದಲ ಜ್ಞಾನಪೀಠವನ್ನು ತಂದು ಕೊಟ್ಟ ಹಿರಿಮೆಯನ್ನು ಹೊಂದಿದ ಇವರ "ಶ್ರೀ ರಾಮಾಯಣದರ್ಶನಂ" ಮಹಾಕಾವ್ಯ ಸಂಸ್ಕೃತ ಮತ್ತು ಹಿಂದಿ ಭಾಷೆಗೆ ಅನುವಾದಗೊಂಡಿದೆ. ಇವರು "ಬೆರಳ್ಗೆ ಕೊರಳ್", "ಶೂದ್ರ ತಪಸ್ವಿ", "ಸ್ಮಶಾನ ಕುರುಕ್ಷೇತ್ರಂ", "ರಕ್ತಾಕ್ಷಿ", "ಜಲಗಾರ" ಮೊದಲಾದ ನಾಟಕಗಳನ್ನು ಬರೆದಿದ್ದಾರೆ. ಜೊತೆಗೆ" ಕೊಳಲು", "ಅಗ್ನಿಹಂಸ", "ಅನಿಕೇತನ", "ಅನುತ್ತರಾ", "ಇಕ್ಷು ಗಂಗೋತ್ರಿ", "ಕಥನ ಕವನಗಳು", "ಕಲಾಸುಂದರಿ", "ಕಿಂಕಿಣಿ", "ಕೃತ್ತಿಕೆ", "ಜೇನಾಗುವ", "ನವಿಲು", "ಪಕ್ಷಿಕಾಶಿ", "ಚಿತ್ರಾಂಗದಾ" ಮೊದಲಾದ ಕವನ ಸಂಕಲನಗಳು, "ರಾಮಕೃಷ್ಣ ಪರಮಹಂಸ", "ಸ್ವಾಮಿ ವಿವೇಕಾನಂದ" ಜೀವನ ಚರಿತ್ರೆಗಳನ್ನೂ ಇವರು ಬರೆದಿದ್ದಾರೆ. "ನೆನಪಿನ ದೋಣಿಯಲ್ಲಿ" ಕುವೆಂಪುರವರ ಆತ್ಮಕಥೆ.

ಇವರ ಶ್ರೀ ರಾಮಾಯಣ ದರ್ಶನಂ ಕೃತಿಯು ಕನ್ನಡಕ್ಕೆ ಪ್ರಪ್ರಥಮ ಜ್ಞಾನಪೀಠ ಪ್ರಶಸ್ತಿಯನ್ನು ದೊರಕಿಸಿ ಕೊಟ್ಟಿತು. ಭಾರತ ಸರ್ಕಾರದ ಪದ್ಮವಿಭೂಷಣದಿಂದಲೂ ಪುರಸ್ಕೃತಗೊಂಡ ಇವರು 'ಜೈ ಭಾರತ ಜನನಿಯ ತನುಜಾತೆ' ಕನ್ನಡ ನಾಡ ಗೀತೆಯನ್ನು ರಚಿಸಿದ ಮೇರು ಕವಿ. "ಅಭಿನವ ವಾಲ್ಮೀಕಿ" ಎಂದೇ ಜನಮಾನಸದಲ್ಲಿ ಪ್ರಸಿದ್ಧರಾದ ಕುವೆಂಪುರವರು 1994 ನವೆಂಬರ್ 11ರಂದು ಮೈಸೂರಿನ ತಮ್ಮ ನಿವಾಸ ಉದಯರವಿಯಲ್ಲಿ ನಿಧನರಾದರು.

**ಪದಗಳ ಅರ್ಥ :** ಬಿತ್ತರ=ವಿಸ್ತಾರ, ನಿರ್ಜನ=ಜನರಿಲ್ಲದ, ನೀರವ=ಮೌನ, ಖಗ=ಪಕ್ಷಿ, ರವ=ಶಬ್ದ, ನಾಕ=ಸ್ವರ್ಗ, ಬಲಾಕ=ಕೊಕ್ಕರೆ, ಹಂತಿ=ಸಾಲು.

## 3. ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ

–ಕೆ.ಎಸ್. ನರಸಿಂಹಸ್ವಾಮಿ

ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ;
ತೊಡಿಸದಿರು ಚಂದ್ರಕಿರೀಟವನು.
ಕೊರಳಿಗೆ ಭಾರ ನನಗೆ ನಕ್ಷತ್ರಮಾಲಿಕೆ;
ನಾನೊಲ್ಲೆ ದೊರೆತನವನು.

ಹಂಗಿಸದಿರು ನನ್ನ 'ಮಗು, ಮಗು, ಮಗು' ಎಂದು;
ಭಂಗಿಸದಿರು ನನ್ನ ಬಲವನು.
ನಿನಗೆ ದೊರೆತನವಿಂದು ಬೇಸರವಾಯಿತೆಂದು
ವಹಿಸದಿರು ನನಗೆ ಅದನು.

ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ;
ಕಾಣಲಿ ಬಿಡು ನಿನ್ನ ಪೌರುಷ ಜ್ವಾಲೆ.
ಮುದ್ದಿನಲಿ ಹೇಡಿತನವನು ಊಡದಿರು ನನಗೆ;
ವಜ್ರವಾಗಲಿ ನಿನ್ನ ಒಲುಮೆ.

ಎಷ್ಟು ಕಾಲದ ಮೇಲೆ ಇಷ್ಟೊಂದು ಅಭಿಮಾನ?
ಅರ್ಥವಾಗದು ನಿನ್ನ ರೀತಿ.
ಅಂದು ಬೇಡದ ಕಂದ. ಇಂದು ಅದೆ ಆನಂದ–
ಸ್ವಾರ್ಥತೆಯೆ ನಿನ್ನ ನೀತಿ?

ತಾಯಿ ಹೇಳಿದಳು: ನೀನೆಂದೊ ಸೋಕಿದೆಯಂತೆ
ಅವಳ ಮೋಹನ ಭುಜವನು.
ನಾನಾಗ ಅಚ್ಚರಿಯ ನಡುವೆ ಹುಟ್ಟಿದೆನಂತೆ
ಮುತ್ತಿಡುವ ಭೂ–ಧ್ವಜವನು.

ಮರುಭೂಮಿಯಲಿ ನನಗೆ ಮುಗಿಲು ತೊಟ್ಟಿಲ ಕಟ್ಟಿ
ಹಿಮ ಬೆಂಕಿ ಬಿರುಗಾಳಿ ಬೀಸಿ
ಯಾವ ಹರುಷವೊ ತಾಯ್ಗೆ ನನ್ನಂಥ ಮಗ ಹುಟ್ಟಿ!
ಹೊರೆದಳಂತಮೃತವನೆ ಸೂಸಿ.

ಮಳೆ ಮಳೆ ಕಡಲೆಲ್ಲ ಹಾಡಿ ನನ್ನ ಕರೆಯೆ,
ಬೆಳೆ ಬದುಕೆಲ್ಲ ನೆಲದ ಚೆಲುವ ತೆರೆಯೆ,
ತಾಯಿ ನನ್ನನು ಹಿಡಿದು ಬೆಟ್ಟ ಬೆಟ್ಟದ ಮೇಲೆ
ಮುಗಿಲ ಮದ್ದಲೆಗೊಲಿದು ಕುಣಿದಳಂತೆ.

ದೇಶದೇಶದ ಬಿಸಿಲ ನನ್ನ ಕೆನ್ನೆಗೆ ತಳ್ಳಿ
ಕೂಸುಮರಿ ಮಾಡಿ ಬಾಂದಳದಲಿ
ಪರ್ವತಾರಣ್ಯಗಳ ಸಿಂಹಶಿಬಿರಗಳಲ್ಲಿ
ನನ್ನ ಬೆಳೆಸಿದಳಂತೆ ಅಗ್ನಿ ಕುವರಿ.

ನೀನಂದು ನನ್ನ ನೋಡಿರಬೇಕು, ನಸುನಕ್ಕು
ಕೈಬೀಸಿ ನಾ ನಿನ್ನ ಕರೆದೆ.

ನಿನಗಂಥ ರಾಜಾಧಿರಾಜನೆನ್ನುವ ಸೊಕ್ಕು!
ನನ್ನ ಮೈ ಮುಟ್ಟದೆಯೆ ನಡೆದೆ.

ತಾಯಂದಳಂತೆ: 'ಪುಟ್ಟಾಣಿ, ಅವರನು ಕೂಗು,
ಅಂಬೆಗಾಲಿಡುತ ಆ ಮುಂದೆ ಹೋಗು'
ಅದ ಕೇಳಿ ಕೇಳದವನಂತೆ ಸರಿಯಲು ನೀನು,
ಬಲು ನೊಂದಳಂತೆ: 'ಎಂಥವರು ಇವರು.'

'ತಾಯಿ ದೇವರು' ಎಂದು ತಾರೆಗಳು ಹಾಡಿದವು
'ಆಕೆ ಮಾಯೆಯೆ' ಎಂದರರಿಯದವರು.
ಅವಳ ಪ್ರೇಮದ ಸವಿಯ ನೀನು ಕಂಡಿರಬಹುದು.
ಆ ವಸುಂಧರೆಯ ಮಗ ನಾನು ಕೇಳಿದೆನು.

ನಾ ನಿನ್ನ ಕಾಣದೆಯೆ ಬೆಳೆದೆ; ನಾ ಕಂಡಿಹೆನು
ತಾಯ ಸಂಪ್ರೀತಿಯನು, ಚೆಲುವನು.
ತನ್ನ ಮಗ ಬೆಳೆದು ತಂದೆಯ ಬಲವ ಗಳಿಸುವನು
ಎಂದವಳು ನಂಬಿರುವಳು.

ನಿನ್ನ ಹಂಗಿಲ್ಲದೆಯೆ ನಾ ಬಾಳುವುದ ಕಲಿಸು;
ನೊಂದು ಮಾಗಲಿ ಜೀವ ಎಂದು ಹರಸು;
ನಿನ್ನ ಕುರಿಯದ ನನ್ನ ದಾರಿಗೆಡರನು ನಿಲಿಸು;
ನಡೆದಂತೆ ದಾರಿಯನು ಬಿಚ್ಚಿ ಬೆಳಸು.

ಮಗನ ಕಾಡುವ ತಂದೆ ನೀನಾಗು, ಹಗೆಯಾಗು,
ಹಣ್ಣಾಗಿಸೆನ್ನುಸಿರನು.
ನಿನ್ನ ಬಂಡೆಯ ಮೇಲೆ ನನ್ನ ನೆತ್ತರ ಹನಿಸು;
ಕಾಣಲ್ಲಿ ನಿನ್ನ ಹೆಸರನು!

ಬಂದ ಬಾಗಿಲು ಮಣ್ಣು: ಬಿಡುವ ಬಾಗಿಲು ಮಣ್ಣು,
ನಡುವೆ ಕಾಪಾಡುವುದು ತಾಯ ಕಣ್ಣು.
ಈ ಕಣ್ಣ ಸೆರೆಯ ಕಲ್‌ಕೋಟೆಯೆಲ್ಲಾ ಹೊನ್ನು;
ನನ್ನ ಕೈ ಬಿಡುವುದೇ ನಿನಗೆ ಚೆನ್ನು.

'ಮುಪ್ಪಿರದ ಸಾವಿರದ ನಿನ್ನ ದೊರೆತನವೆಂದು
ಮುಗಿದೀತು' ಎಂದು ಕಾದಿಲ್ಲ ನಾನು.
'ಬೆಳೆದ ಮಗ ಹೊರಲಿ ನೊಗ, ಕೇಳಿಬಿಡುವೆನೆಂದು'
ಭ್ರಮೆಗೊಂಡು ಬಂದಿರುವೆ ನೀನು!

**ಕೆ.ಎಸ್. ನರಸಿಂಹಸ್ವಾಮಿ :** ಇಪ್ಪತ್ತನೆಯ ಶತಮಾನದ ಪ್ರಮುಖ ಕವಿ, ಜನಿಸಿದ್ದು 26ಜನವರಿ 1915ರಂದು ಮಂಡ್ಯ ಜಿಲ್ಲೆಯ ಕಿಕ್ಕೇರಿಯಲ್ಲಿ. ತಂದೆ ಸುಬ್ಬರಾಯರು ತಾಯಿ ನಾಗಮ್ಮ. ವರ್ಡ್ಸ್‌ವರ್ತ್, ರಾಬರ್ಟ್‌ಬರ್ನ್ಸ್ ರಂಥವರಿಂದ ಪ್ರಭಾವಿತರಾಗಿದ್ದ ಇವರು ತಾವು ವಿದ್ಯಾರ್ಥಿಯಾಗಿದ್ದಾಗಲೇ ಕವನಗಳನ್ನು ರಚಿಸತೊಡಗಿದ್ದರು. ಅವರ ಕಬ್ಬಿಗನ ಕೂಗು ಎಂಬ ಮೊದಲ ಕವನ 14–1–1933 ರ ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾಯಿತು. ಇವರು ಅಧಿಕೃತವಾಗಿ ಕಾವ್ಯಜಗತ್ತನ್ನು ಪ್ರವೇಶಿಸಿದ್ದು ಮೈಸೂರು ಮಲ್ಲಿಗೆ(1949) ಕವನ ಸಂಕಲನದೊಂದಿಗೆ. ಅಂದಿನಿಂದ ಅವರು ಹಲವು ಸಂಕಲನಗಳನ್ನು ಹೊರತಂದಿದ್ದಾರೆ. ಅವುಗಳೆಂದರೆ ಐರಾವತ(1945), ದೀಪದ ಮಲ್ಲಿ(1947), ಉಂಗುರ(1949),

ಇರುವಂತಿಗೆ(1952), ಶಿಲಾಲತೆ(1959), ಮನೆಯಿಂದ ಮನೆಗೆ(1960), ತೆರೆದಬಾಗಿಲು(1976), ನವಪಲ್ಲವ(1983), ದುಂಡುಮಲ್ಲಿಗೆ(1986), ಎಂಬ ಕವನ ಸಂಕಲನಗಳನ್ನೂ, ಮಲ್ಲಿಗೆ ಮಾಲೆ ಎಂಬ ಸಮಗ್ರ ಕವನಗಳ ಸಂಗ್ರಹ ಪ್ರಕಟಿಸಿದ್ದು, ಇದರಲ್ಲಿ ಎಂಟು ಅಪ್ರಕಟಿತ ಕವನಗಳನ್ನು ಸೇರಿಸಲಾಗಿದೆ.

ಇವರಿಗೆ ಹಲವಾರು ಪ್ರಶಸ್ತಿಗಳು ಬಂದಿವೆ. ರಾಜ್ಯ ಮತ್ತು ಕೇಂದ್ರಸಾಹಿತ್ಯ ಅಕಾಡಮಿ ಪ್ರಶಸ್ತಿ, ರಾವ್ ಬಹದ್ದೂರ್ ಪ್ರಶಸ್ತಿಗಳು ಲಭಿಸಿವೆ.

**ಪದಗಳ ಅರ್ಥ :** ಊಡು=ಕುಡಿ, ತಿನ್ನು, ಕುಡಿಸು, ಲೇಪಿಸು. ವಸುಂಧರೆ=ಭೂಮಿ.

# 4. ಕಲ್ಲಾಗು, ಕಲ್ಲಾಗು!

**–ಎಂ. ಗೋಪಾಲಕೃಷ್ಣ ಅಡಿಗ**

1

ಕಲ್ಲಾಗು, ಕಲ್ಲಾಗು! ಬಾಳ ಬಿರುಗಾಳಿಯಲಿ
ಅಲ್ಲಾಡದೆಯೇ ನಿಲ್ಲು ನಿಲ್ಲು, ಜೀವ!
ನೆಲೆಯಿಲ್ಲದಲೆದಾಟ ಎನಿತುವರೆಗೆ? ಬಯಲು
ದೊರೆಯ ಬೆಂಗಡೆಯೋಟ ಯಾವ ಸುಖಕೆ?

ಮೆಲುಪುತಣುಪುಗಳ ಸುಖಸಂಭ್ರಮದ ಬಾಳುವೆಯ
ಬಯಕೆಯನು ಬಿಸುಡಯ್ಯ ನೀನು ದೂರ!

ಹುಲ್ಲುಗಿಡಗಳಿಗಿಲ್ಲ ಇಲ್ಲಿ ತಾಣ:
ಬಳ್ಳಿಹೂಗಳ ಬಾಳಿಗಿಲ್ಲ ಮಾನ;
ಕಲ್ಲಿಗೊಂದೇ ಇಲ್ಲಿ ಸ್ಥಾನ, ಮಾನ!

2

ಗಿಡಮರಗಳನು ತೂಗಿ ತೂಗಿ ತೊತ್ತಳದುಳಿದು
ಹೂಬಳ್ಳಿಗಳನ್ನು ಹುಟ್ಟಳಿಯೇ ಹೊಡೆದು,
ಎಲ್ಲವನು ಮಣ್ಣೂಡಿಸುವೆನೆಂದು ಬೊಬ್ಬಿರಿದು
ಬಿರುಗಾಳಿ ಬಂದು ಮೊರೆಮೊರೆಯಬಹುದು;
ಹುಬ್ಬುಗಂಟಿಕ್ಕಿ ಗುಡುಗುಡಿಸಿ ಬಾನ್ ಸಿಡಿಸಿಡಿದು
ಸಿಡಿಲಾಗಿ ಬಂದು ಬಂದೆರಗಬಹುದು;
ಕಾಳಮೇಘಾಳಿ ರೋಷಾಗ್ನಿಯಲಿ ಕುದಿಕುದಿದು

ಮಳೆಯಾಗಿ ಬಂದು ತಳ್ವೊಯ್ಯಲಿಹುದು:
ಮುನಿದ ಬಿಡುಗಣ್ಣರಂಭೋದತೂಣೀರದಿಂ
ಮಿಂಚುಗಳ ಬಾಣಗಳನೆಸೆಯಬಹುದು;

ಆದರೂ ಬೆದರದಿರು ನೀನೊಳಗು ಹೊರಗು!
ಅಳುಕದೆಯೆ, ಬಳುಕದೆಯೆ, ನಿಲ್ಲು ಕೊನೆವರೆಗು!

3

ಬಳಿಯ ಕೋಗಿಲೆ ಕೂಗಿ ಕರೆಯಬಹುದು:
ಅಳಿಮಾಲೆ ಬಂದು ಮೊರೆಮೊರೆಯಬಹುದು:
ಮೆಲ್ಲೆಲರು ಬಂದು ಮೈದಡಹಬಹುದು:
ಚೆಲುವಾಗಿ, ಒಲವಾಗಿ ಹೂವದೊಂದು
ಬಲವಾಗಿ ಮನಸೆಳೆಯಲೆಳೆಸಬಹುದು!

ಆದರೂ ಬದಲದಿರು, ಕದಲದಿರು, ನೀನು!
ಮೋಹಮಾಯೆಗೆ ಸಿಲುಕದೆಯೆ ನಿಲ್ಲು, ನಿಲ್ಲು!

4

ಹೂವಾಗಿ ತನ್ನೆದೆಯ ಮಧುರಮಕರಂದವನು
ದಿಕ್ಕು ದಿಕ್ಕಿಗೆ ಚೆಲ್ಲುವಾಸೆ:
ಮುಗಿಲಾಗಿ ಹನಿಯಾಗಿ ಜಗದ ಕಂಬನಿಯಾಗಿ
ಮಣಿಯಾಗಿ ಕುಣಿಯುವಾಸೆ:
ಅಳಿಯಾಗಿ ಗಿಳಿಯಾಗಿ ನೂರಾರು ಬಗೆಯಾಗಿ

ನಗೆಯಾಗಿ ನಲಿಯುವಾಸೆ:–
ನಿನ್ನೊಳಿರಬಹುದಯ್ಯೊ, ಮಾಡಲೇನು?
ಅದು ಮುಗಿಲಹೂವದನು ಮುಡಿವೆಯೇನು?

5

ಮೃದುವಾಯ್ತು, ಕುಸುಮಕೋಮಲವಾಯ್ತು ಮನ: ಜೀವ
ಕಾರುಣ್ಯರಸಕೆ ಸೆಲೆಯಾಯ್ತು, ಹೃದಯ:
ಬಾಳು ಸಂಸ್ಕೃತಿಮಧುರ; ಕಾವ್ಯನಂದನದ ಚಿರ
ಸಂಚಾರಿಯಾದೆ, ಹೇ ಮತ್ತ ಮಧುಪ!
ಅವನಲ್ಲಿ, ಇವನಲ್ಲಿ, ಅದರಲ್ಲಿ, ಇದರಲ್ಲಿ
ತನ್ನ ತನವನು ಕಂಡುಕೊಂಡ ಭೂಪ!

ಸಚರಾಚರದ ಬಾಳಿನಾಳದಲಿ ಮುಳುಮುಳುಗಿ
ಬಂತು ಅಂತಃಕರಣ: ಅಯ್ಯೋ ಪಾಪ!
ಆದರೇನಂತೆ ಮನವಾಯ್ತು ಅಬಲ:
ಗಾಳಿಗೊಡ್ಡಿದ ತಳಿರಿನಂತೆ ಚಪಲ!
ಇದು ವಿಧಿಯ ನಿಷ್ಠುರದ ರಾಜ್ಯಭಾರ–ಇಲ್ಲಿ
ಮೃದುತೆ ಬಲಹೀನತೆಗೆ ಸಂಚಕಾರ!

6

ಅಕ್ಕಟಾ! ಬೇಕಾದುದೇನು, ಬಂದೀ ಭವದಿ?
ಮರುಳುಕರುಳಿನ ಕುರುಡುಕುಣಿತವಲ್ಲ!
ತನುಮನವನುಕ್ಕಾಗಿ ಕಾಯಿಸುವ ದುರ್ದಮ್ಯ

ಶಕ್ತಿ: ಬಯಲಾಸೆಗಳ ಗುಣಿತವಲ್ಲ!
ಅದಕಾಗಿ ಕಲ್ಲಾಗು ಕಠಿನ, ಕಠಿನ!
ಮಿದುವಾಗಬೇಡ: ಹಾ! ಜತನ, ಜತನ!

7

ಕಲ್ಲಾಗು, ಕಲ್ಲಾಗು! ಬಾಳ ಬಿರುಗಾಳಿಯಲಿ
ಅಲ್ಲಾಡದಿರು ನಿಲ್ಲು, ನಿಲ್ಲು. ಜೀವ!
ಎನಿತುವರೆಗೀ ಬರಿಯ ಬವಣೆಯಕಟಾ!–ಬಾಳಿ
ಗಿಲ್ಲ ಸ್ಥಿರತೆಗು ಮಿಗಿಲು ಮಿರುಪ ಮಕುಟ:

ಕರಗದಿರು ಬಿಸಿಗಿಟ್ಟ ಬೆಣ್ಣೆಯಂತೆ,
ರವಿಕಿರಣ ಮುದ್ದಿಡುವ ಮಂಜಿನಂತೆ,
ಬಾಡದಿರು ನೆಲಕಿಳಿದ ಮಲರಿನಂತೆ,
ಬಾಗದಿರು ತೊನೆತೊನೆವ ಬಳ್ಳಿಯಂತೆ:
– ಕಲ್ಲಾಗು, ಕಲ್ಲಾಗು!

**ಎಂ. ಗೋಪಾಲಕೃಷ್ಣ ಅಡಿಗ :** ಕನ್ನಡದಲ್ಲಿ ನವ್ಯಕಾವ್ಯಕ್ಕೆ ನಾಂದಿ ಹಾಡಿದ ಮೊಗೇರಿ ಗೋಪಾಲಕೃಷ್ಣ ಅಡಿಗ ಅವರನ್ನು 'ಒಂದು ಜನಾಂಗದ ಕಣ್ಣು ತೆರೆಸಿದ ಕವಿ' ಎಂದು ಗುರುತಿಸಲಾಗುತ್ತಿತ್ತು. ಅಡಿಗರು 1918ರ ಫೆಬ್ರುವರಿ 18ರಂದು ಜನಿಸಿದರು. ತಂದೆ ರಾಮಪ್ಪ ಮತ್ತು ತಾಯಿ ಗೌರಮ್ಮ.

ಮೈಸೂರಿನ ಶಾರದಾವಿಲಾಸ್ ಕಾಲೇಜಿನಲ್ಲಿ ಉಪನ್ಯಾಸಕ (1948–52), ಸೈಂಟ್ ಫಿಲೋಮಿನಾ ಕಾಲೇಜಿನಲ್ಲಿ (1952–54) ಸಾಗರದ ಎಲ್.ಬಿ. ಕಾಲೇಜಿನಲ್ಲಿ ಮತ್ತು

ಉಡುಪಿಯ ಪೂರ್ಣಪ್ರಜ್ಞಾ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿ ಇವರು ಕಾರ್ಯನಿರ್ವಹಿಸಿದ್ದರು. ಅನಂತರ ನ್ಯಾಷನಲ್ ಬುಕ್ ಟ್ರಸ್ಟಿನ ನಿರ್ದೇಶಕ(1971) ಆಗಿದ್ದರು. ಇದಾದ ನಂತರ 1971ರಲ್ಲಿ ಜನಸಂಘದ ಅಭ್ಯರ್ಥಿಯಾಗಿ ಸಂಸತ್ತಿನ ಚುನಾವಣೆಗೆ ಸ್ಪರ್ಧಿಸಿದ್ದರು. ಸಿಮ್ಲಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡೀಸ್‌ನಲ್ಲಿ ರಿಸರ್ಚ್ ಫೆಲೋ ಆಗಿ ಕೆಲಸಮಾಡಿದರು.

ಸಾಕ್ಷಿ ಎಂಬ ತ್ರೈಮಾಸಿಕವನ್ನು ಕೆಲಕಾಲ ನಡೆಸಿದ ಇವರು ಕನ್ನಡದಲ್ಲಿ ಶ್ರೇಷ್ಠ ಕವನಗಳನ್ನೂ ವಿಮರ್ಶಾಕೃತಿಗಳನ್ನೂ ಬರೆದಿದ್ದಾರೆ. ಇವರ ಸೇವೆಗೆ ಮೆಚ್ಚಿ ಹಲವಾರು ಪ್ರಶಸ್ತಿಗಳು ಬಂದಿವೆ. ರಾಜ್ಯ ಸರಕಾರ 'ವರ್ಧಮಾನ' ಕವನ ಸಂಕಲನಕ್ಕೆ ಪ್ರಶಸ್ತಿ(1973), ಕೇಂದ್ರ ಸರಕಾರದ ಪ್ರಶಸ್ತಿ(1974), ಕರ್ನಾಟಕ ಸರಕಾರ ಪಂಪ ಪ್ರಶಸ್ತಿ(1993), ಮಧ್ಯಪ್ರದೇಶ ಸರಕಾರದ ಕಬೀರ್ ಸಮ್ಮಾನ ಪ್ರಶಸ್ತಿ ಇವರಿಗೆ ಲಭಿಸಿತ್ತು. 1979ರಲ್ಲಿ ಧರ್ಮಸ್ಥಳದಲ್ಲಿ ನಡೆದ 51ನೇ ಕನ್ನಡ ಸಾಹಿತ್ಯ ಸಮ್ಮೇಳನ (1979) ಅಧ್ಯಕ್ಷತೆ ವಹಿಸಿದ್ದರು. ಅಡಿಗರು 1992ರ ನವೆಂಬರ್ 14ರಂದು ನಿಧನರಾದರು.

ಮುಖ್ಯ ಕೃತಿಗಳು: ಭಾವತರಂಗ, ಕಟ್ಟುವೆವು ನಾವು, ನಡೆದುಬಂದ ದಾರಿ, ಭೂಮಿಗೀತ, ಚಂಡಮದ್ದಲೆ, ವರ್ಧಮಾನ ಇತ್ಯಾದಿ ಕವನಸಂಕಲಗಳು. ಅನಾಥೆ, ಆಕಾಶದೀಪ (ಕಾದಂಬರಿಗಳು), ಮಣ್ಣಿನ ವಾಸನೆ, ವಿಚಾರಪಥ, ಕನ್ನಡದ ಅಭಿಮಾನ (ಗದ್ಯ ಲೇಖನಗಳು), ಹುಲ್ಲಿನ ದಳಗಳು, ಭೂಗರ್ಭಯಾತ್ರೆ, ಇತಿಹಾಸಚಿತ್ರ (ಅನುವಾದಗಳು).

# 5. ಕಾಲ ನಿಲ್ಲುವುದಿಲ್ಲ

**–ಚನ್ನವೀರ ಕಣವಿ**

1

ಈ ಕಾಲನೆಂಬುವ ಪ್ರಾಣಿ
ಕೈಗೆ ಸಿಕ್ಕರೆ ಚೆನ್ನಾಗಿ ಥಳಿಸಬೇಕೆಂದಿದ್ದೆ;
ಎಲ್ಲೊ ತಲೆಮರೆಸಿಕೊಂಡು ಓಡಾಡುತ್ತಿದ್ದಾನೆ.
ಆಕಾಶದಲ್ಲಿ ಮಿಂಚಿ,
ಭೂಕಂಪದಲ್ಲಿ ಗದಗದ ನಡುಗಿ,
ಜ್ವಾಲಾಮುಖಿಯೊಳಗೆ ಸಿಡಿದು ನುಚ್ಚುನೂರಾಗಿ,
ನದಿನದಿಯ ಗರ್ಭವ ಹೊಕ್ಕು, ಮಹಾಪೂರದಲಿ ಹೊರಬಂದು
ನಮ್ಮೆದೆಯಲ್ಲಿ ತುಡಿವ ತಬಲವಾಗಿದ್ದಾನೆ.
ಹಿಡಿಯಿರೋ ಅವನ
ಗಡಿಯಾರದಲ್ಲವನ ಹಿಡಿದು ಗಾಣವಾಡಿಸಲು
ಹೆಣಗಿದ್ದೇವೆ.
ಹೊತ್ತು ಬಂದಾಗ ಕತ್ತೆಯ ಕಾಲು ಹಿಡಿದು
ಒದೆಸಿಕೊಂಡಿದ್ದೇವೆ.
ತುಡಿವೆದೆಗೆ ಕಿವಿಗೊಟ್ಟು, ಮಿಡಿವ ನಾಡಿಯ
ಹಿಡಿದು ನೋಡಿದ್ದೇವೆ;
ಒಳಹೊರಗೆ ಉಸಿರು ಆಡುತ್ತಿದೆ ನಿರಾಯಾಸ.
'ಬಯಲು ಆಲಯದೊಳಗೋ? ಆಲಯವು ಬಯಲೊಳಗೋ?'
ಕೊನೆಗೊಮ್ಮೆ ಅವನೇ ಎಲ್ಲ ಬಗೆಹರಿಸುತ್ತಾನೆ,
ಯಾರಿಗೂ ಅವಸರವಿಲ್ಲ ತಾನೆ?
ಈ ಕುದುರೆಯೇರಿ, ಲಗಾಮು ಬಿಗಿ ಹಿಡಿದು

ಸವಾರಿ ಮಾಡುವುದಷ್ಟು ಸುಲಭವಲ್ಲ.
ನಮ್ಮೆದೆಯ ಮೇಲೆಯೇ ಕಾಲಿಟ್ಟು ಓಡಿಹೋಗುವುದ
ನಾವೆಷ್ಟು ಸಲ ಅನುಭವಿಸಿಲ್ಲ?
ಸೆಕೆಂಡು, ಮಿನಿಟು, ತಾಸುಗಳ ಹಾಸು –ಹೊಕ್ಕಿನಲಿ
ಅಲ್ಲೊಂದು ಇಲ್ಲೊಂದು ಬಣ್ಣದ ನೂಲು
ಬೆತ್ತಲೆ ಬದುಕ ಸುತ್ತಿ ತೋರಿಸುತ್ತಿದೆ ಡೌಲು.
ಹೆಜ್ಜೆಯಿಟ್ಟಲ್ಲೆಲ್ಲ ಚೋಲಿಹಿಡಿದಿದೆ ಮಣ್ಣು
ಧುಮುಕುತಿದೆ ನೀರು,
ಮೈಸುತ್ತಿ ಒಳಹೊಕ್ಕು ನೋಡಿದೆ ಗಾಳಿ,
ಹದ್ದು ಮೀರಿದೆ ಬಯಲು–
ಬೆಳಕು–ಕತ್ತಲೆ ಕುಂಡದಲ್ಲಿ ಮುಳುಗೇಳುತಿಹೆವು ದಿನವೊಂದಕ್ಕು
ನಿದ್ದೆ ತಿಳಿದೆದ್ದಾಗ ಭೂಮಿಯಾಕಾಶಕ್ಕೆ ದೊಡ್ಡ ಬಿರುಕು.

2

ಸದಾ ಅದೇ ಸೂರ್ಯಚಂದ್ರರ ಸುಪರಿಚಿತ ಮೋರೆ,
ನಮ್ಮಂತೆಯೇ ಅವರಿಗೂ ತಿರುಗುವದೊಂದೆ ಹೋರೆ.
ಆದರೂ ಆಗೀಗ ಈಚೆಯ ದಡಕ್ಕು ಹಾಯುವದು ಬೆಳಕಿನ ತೆರೆ.
ಒಡಮುರಿದೆದ್ದು ನಾಲ್ಕೂ ಕಡೆಗೆ ಕೈ ಚಾಚಿ
ನಿಂತಲ್ಲೆ ಬೇರು ಬಿಟ್ಟಿವೆ ವೃಕ್ಷ
(ಅಗೆದು ನೋಡಲೆ ಬೇಕೆ?)
ಹರಡಿಕೊಂಡಿದೆ ಹಸಿರು ಸಂಸಾರ
ನಮಗು ಅದಕೂ ನಿತ್ಯ ಹೊಕ್ಕು ಬಳಕೆ.
ಆರು ಋತುಗಳು ಬಂದು ಆರೈಕೆ ಮಾಡುವವು
ಯಾವುದೋ ಹಾರೈಕೆ ಎದೆಯೊಳಿಟ್ಟು;

ತತ್ತಿಯೊಡೆದು ರೆಕ್ಕೆ ಬಲಿತಾಗ ಹಾರುವುವು ಗೂಡು ಬಿಟ್ಟು.
ದೂರದಲ್ಲಿಯೆ ಸಾಲು ನಿಂತ ಪರ್ವತ ಶಿಖರ
ಆಗಿಲ್ಲ ಭೂಮಿಗೆ ಭಾರ.
ತೇಲುತಿವೆ ಅಂತರಾಳದಲಿ ನೂರು ಗೋಲ.
ಸೋತು ತಲೆಬಾಗಿಲ್ಲ ಆಕಾಶ,
ಮೂಲೆ ಹಿಡಿದು ತೂಕಡಿಸಿಲ್ಲ ಗಾಳಿ,
ಒಳಗು ಹೊರಗೂ ಹರಿದು ಸ್ವಚ್ಛವಾಗಿದೆ ನೀರು
ಅಣೆಕಟ್ಟೆಗೂ ಕೆಳಗೆ ಆರುಪಾರು.
ಎತ್ತಿನ ಬಂಡಿಯಿಳಿದು, ಬಸ್ಸಿನ ದಾರಿ ಕಾಯ್ದು, ಕಾರಿನಲಿ ತೂರಿ,
ಹಡಗ ಬಿಟ್ಟು ವಿಮಾನದಲ್ಲಿ ಹಾರಿ
ಗೋಲಗಳ ಮೇಲೆ ದಾಳಿ ಮಾಡಿದ್ದೇವೆ.
ಮೈಕಿನಲಿ ಕೊಕ್ಕೊಕ್ಕೋ ಕೂಗಿ, ತುರಾಯಿ ಕುಣಿಸಿ
ಬೆಳಗಾಯಿತೆಂದು ಭ್ರಮಿಸಿದ್ದೇವೆ.

ಹೊಸದಾಗಿ ಹೂಡಿದ ಮೂಡಲ ಹೋರಿ ಮುಸುಗರೆದು
ಅಡ್ಡಾದಿಡ್ಡಿ ಜಗ್ಗುತಿದೆ ಜೊತೆಗಿರುವ ಸಾದು ಎತ್ತಿನ ಕೂಡ ಕಾದಾಟ
ಹೌದು, ನಾವೆಲ್ಲ ಹೊಸಬರೆ;
ಅಜ್ಜ ಮುತ್ತಜ್ಜರಿಗೆ ಮಂಗಳಾರತಿ ಮಾಡಿ
ಕೈಯಲ್ಲಿ ಗಂಟೆ ಹಿಡಿದಿದ್ದೇವೆ.
ನೈವೇದ್ಯಕ್ಕೆ ಪಾಕವೇ ಸಿದ್ಧವಾಗಿಲ್ಲ, ಆಗಲೇ
ಪ್ರಸಾದ ಹಂಚಿದ್ದೇವೆ.
ಎದುರಿಗಿದ್ದದ್ದೆಲ್ಲ ಅದಲು –ಬದಲು ಕಂಚೀಬದಲು
ಹುಡುಕುತ್ತಿದ್ದೇವೆ ಕಣ್ಮುಚ್ಚಿ: ಇವರ ಬಿಟ್ಟವರಾರು?

3

ದಿನವು ಬಿಸಿ ಬಿಸಿ ಅನ್ನ ದೇಹಕ್ಕೆ ಹಿತ.
ಮುಂಜಾವದಡಿಗೆ ಸಂಜೆಗಾಗಲೇ ತಂಗೂಳು.
ಹಳಸಿದನ್ನವ ನಾಯಿ ಕೂಡ ಮೂಸುವದಿಲ್ಲ. ಅದೆ
ಅಕ್ಕಿ, ಜೋಳ, ಗೋದಿಗಳಿಂದ ವಿಧವಿಧದ ಪಕ್ವಾನ್ನ
ಗಮಗಮಿಸುವದು. ಉಪ್ಪು, ಕಾರ, ಹುಳಿ, ಸಿಹಿ
ತಕ್ಕಷ್ಟು. ಬದಲಾವಣೆಯೇ ಬಾಳಿನೊಗ್ಗರಣೆ.
ಬಾಡಿಸಿಕೊಳ್ಳಲೆಂದೆ ಉಪ್ಪಿನಕಾಯಿ.
(ಕದ ತಿನ್ನುವವಗೆ ಹಪ್ಪಳ ಈಡೆ?)
ಮಿತಿಮೀರಿದರೆ ಎಂಥ ಸುಗ್ರಾಸವೂ ಅಜೀರ್ಣ.
ಕುದಿಯುವುದು, ಮಿದಿಯುವುದು, ಹೊಂದಿ
ಹದಗೊಳ್ಳುವದು: ಬದುಕಿನಲಿ ಎಲ್ಲರಿಗು ತೆರೆದ ದಾರಿ.
ಶ್ರುತಿಗೂಡಿದಾಗ ಹೊಮ್ಮುವುದು ಹಾಡಿನ ಲಹರಿ
ಗಾಳಿಯ ಬೆನ್ನ ಮೇಲೆ ಮೋಡದ ಸವಾರಿ.

ಗುಡುಗಿರಲಿ, ಮಿಂಚಿರಲಿ, ಮುಂಗಾರಿಗಾರು ಕಾತರಿಸಿಲ್ಲ?
ಉರಿವ ಬೇಸಗೆ ಚಿಗುರು ಚಿಣ್ಣರನು ಎತ್ತಿ ಆಡಿಸಿಲ್ಲ?
ಥಂಡಿಯ ಮುಸುಗಿನಲ್ಲಿ ಬೆಚ್ಚಗೆ ಕನಸು ಕಂಡಿಲ್ಲ?
ಬೆಂಗಾಡಿನಂಗಾಂಗದಲ್ಲು ತುಂಗಭದ್ರೆಯು ತುಂಬಿ ಹರಿದಿಲ್ಲ?
ವರ್ತನೆಯ ನರ್ತನಕೆ ಪರಿವರ್ತನೆಯ ಸೊಬಗು.
ಕಂದ, ವೃತ್ತಗಳ ಝರಿ ತೊರೆಯ ನಡುವೆ
ಹಸುರಿನ ಗದ್ಯದುದ್ಯಾನ:
ಹದಿನೆಂಟು ಬಣ್ಣನೆಯ ಹುಲ್ಲು ಗದ್ದೆಯ ನಡುವೆ

ಚಂಪುವಿನ ತಂಪುಕೊಳ.
ನಿಬ್ಬಣಕೆ ಹೊರಟಂತೆ ಹಾಡುಗಬ್ಬಗಳ ಕೊಲ್ಲಾರಿ ಬಂಡಿ.
ಭಾವ–ಗೀತ ಒಪ್ಪಿದರೆ ಚೆಂದ ವಧೂವರ ಜೋಡಿ.
ಒಲೆ ಹೂಡಿದ ಮೇಲೆ ಅದರ ಬಿಸಿ ತಾಗುವದು
ಕುದ್ದು ಹಣ್ಣಾಗುವದು ನೂರು ಅನುಭವದ ನವ್ಯಪಾಕ.

ಬಗಲಗಸೆ ಅಂಗಿಯಿಂದ ಬುಶ್‌ಕೋಟಿನವರೆಗೂ
ತೊಟ್ಟು ಕಳಚಿದ್ದೇವೆ.
ಮಾಡಿ ಉಂಡಿದ್ದೇವೆ ನಮನಮಗೆ ಸೇರಿದ ಅಡಿಗೆ.
ಇರಬಹುದು ಇದರಲ್ಲಿ ಕೆಲಭಾಗ ಜೀವನಸತ್ವ ಕಡಿಮೆ.
ಇದ್ದ ಶಕ್ತಿಯಲಿ ತುಸು ದೂರ ನಡೆದಿದ್ದೇವೆ.
ರೂಢಿಯಾಗಿದೆ ಒಬ್ಬೊಬ್ಬರಿಗು ಒಂದೊಂದು ಬಗೆಯ ನಡಿಗೆ.
ಮುಖ್ಯ ಬೇಕಾದದ್ದು ಜೀವಂತ ಗತಿ, ಹೊಸ ನೆತ್ತರಿನ ಕೊಡುಗೆ.

ಕಾಲ ನಿಲ್ಲುವದಿಲ್ಲ; ನಾವು ಕೂಡುವದಿಲ್ಲ.
ಮಳೆಬಂದರೂ ಕಾಮನಬಿಲ್ಲು ಮೂಡುವದೆಂಬ ನಿಯಮವಿಲ್ಲ.
ಹಗಲಿರುಳ ಗಾಲಿಯಲಿ ಸೋಲು –ಗೆಲುವಿನ ಕೀಲು ಭದ್ರ.
ಪಂದ್ಯಾಟದಲ್ಲಿ ಯಾರೂ ಹೆಸರು ಕೊಡಬಹುದು
ನಿಂತವರಿಗೂ ಉಂಟು ನೋಡಿ ಸಂತಸ ಪಡುವ ಭಾಗ್ಯ.
ಗೆದ್ದವರಿಗಿದ್ದೆಯಿದೆ ಬೆಳ್ಳಿಯ ಥಾಲು.
ಸೋತವರ ಸೊತ್ತು
ಗೆದ್ದವರನಳೆವ ಜಗದೆಲ್ಲ ಅನುಭವದ ಪಾಲು.

**ಚನ್ನವೀರ ಕಣವಿ :** ಕನ್ನಡದ ಸಮನ್ವಯ ಕವಿ, ಸುನೀತಗಳ ಸಾಮ್ರಾಟ ಎಂದು ಪ್ರಸಿದ್ಧರಾಗಿದ್ದ ಕನ್ನಡದ ಖ್ಯಾತ ವಿದ್ವಾಂಸ ಮತ್ತು ಹೊಸಗನ್ನಡ ಕಾವ್ಯದ ಪ್ರಮುಖ ಕವಿ.

ಚನ್ನವೀರ ಕಣವಿಯವರು ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ 1928ರ ಜೂನ್ 28ರಂದು ಜನಿಸಿದರು. ತಂದೆ ಸಕ್ಕರೆಪ್ಪ ಮತ್ತು ತಾಯಿ ಪಾರ್ವತವ್ವ. ತಂದೆ ಸಕ್ಕರೆಪ್ಪ. ಕಣವಿಯವರು 1952ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದು ಆಗತಾನೆ ಆರಂಭವಾಗಿದ್ದ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದ ಕಾರ್ಯದರ್ಶಿಯಾದರು. 1956ರ ವೇಳೆಗೆ ಅದೇ ವಿಭಾಗದ ನಿರ್ದೇಶಕರಾಗಿ 1983 ರವರೆಗೆ ಸೇವೆ ಸಲ್ಲಿಸಿದರು. 16 ಫೆಬ್ರವರಿ 2022ರಂದು ಕೊನೆಯುಸಿರೆಳೆದರು.

## 6. ಸುಟ್ಟಾವು ಬೆಳ್ಳಿ ಕಿರಣ

**–ಸಿದ್ಧಲಿಂಗಯ್ಯ**

ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ
ಸುಳಿದಾಡಬೇಡ ಗೆಳತಿ
ಚೆಲುವಾದ ನಿನ್ನ ಮಲ್ಲಿಗೆಯ ಮಯ್ಯ
ಸುಟ್ಟಾವು ಬೆಳ್ಳಿ ಕಿರಣ

ಇಳಿಜಾರಿನಲ್ಲಿ ಆ ಕಣಿವೆಯಲ್ಲಿ
ನೀ ಇಳಿಯ ಬೇಡ ಗೆಳತಿ
ತತ್ತರಿಸುವಂತೆ ಕಾಲಲ್ಲಿ ಕಮಲ
ಮುತ್ತುವವು ಮೊಲದ ಹಿಂಡು

ಈ ಊರು ಬನಕೊಬ್ಬಳೇ ಒಂಟಿ
ಹೂವಾಗಿ ಅರಳಿ ನೀನು
ಮರೆಯಾಗಬೇಡ ಮಕರಂದವೆಂದ
ದುಂಬಿಗಳ ದಾಳಿಯಲ್ಲಿ

ನನ್ನೆದೆಯ ತೋಟದಲ್ಲಂದು ನೀನು
ನೆಟ್ಟಂತ ಪ್ರೀತಿ ಬಳ್ಳಿ
ಫಲ ಕೊಟ್ಟಿತೇನೆ ಹೂ ಬಿಟ್ಟಿತೇನೆ
ಉಲ್ಲಾಸವನ್ನು ಚೆಲ್ಲಿ

ನಿನ್ನಂತರಂಗದಲ್ಲೊಂದು ನೋವು
ನಾನಾಗಿ ನಿಂತು ಬಿಟ್ಟೆ
ನೀನೊಪ್ಪಿಕೊಂಡ ಚಂದಿರನ ಕಣ್ಣ
ಬೆಳಕಾಗಿ ಕೂಡಿಕೊಂಡೆ

ನೀನಿತ್ತ ಒಲವು ನಾನಿತ್ತ ವಿಷವು
ಒಂದಾಗಲಾರವೆಂದು
ನೀ ಕೊಟ್ಟ ಜೀವ ನಾ ಕೊಟ್ಟ ಸಾವು
ಸಮನಾಗಬಹುದೆ ಗೆಳತಿ

ಕಂಡಂಥ ಕನಸು ಫಲಿಸುತ್ತೆ ಗೆಳತಿ
ಕನಸಿತ್ತು ಕಡಲಿನಲ್ಲಿ
ತೆಂಗು ತಾರೆಗಳ ಸಂಗಮವು ಮುಗಿದು
ಮನಸಿತ್ತು ಮುಗಿಲಿನಲ್ಲಿ

**ಸಿದ್ಧಲಿಂಗಯ್ಯ** : ಸಿದ್ಧಲಿಂಗಯ್ಯನವರು ರಾಮನಗರ ಜಿಲ್ಲೆ 'ಮಾಗಡಿ' ತಾಲ್ಲೋಕಿನ 'ಮಂಚನಬೆಲೆ' ಗ್ರಾಮದಲ್ಲಿ 1954ರಲ್ಲಿ ಜನಿಸಿದರು. ತಂದೆ ದೇವಯ್ಯ, ತಾಯಿ ಶ್ರೀಮತಿ ವೆಂಕಮ್ಮ. ಮಲ್ಲೇಶ್ವರಂನ ಸರ್ಕಾರಿ ಪ್ರೌಢಶಾಲೆ ಇವರ ವಿದ್ಯಾಕೇಂದ್ರವಾಗಿತ್ತು. ಆ ವೇಳೆಗಾಗಲೇ ಕವಿತೆ ಬರೆವ ಅಭ್ಯಾಸ ಇವರಿಗಿತ್ತು. ವಿದ್ಯಾರ್ಥಿ ದೆಸೆಯಲ್ಲಿಯೇ ಇವರು ಉತ್ತಮ ಭಾಷಣಕಾರರಾಗಿದ್ದರು. ಅಂಬೇಡ್ಕರ್, ಪೆರಿಯಾರ್, ವಸುದೇವಭೂಪಾಲ, ಲೋಹಿಯಾ ಮುಂತಾದವರ ವಿಚಾರಧಾರೆಗಳಿಂದ ಆಕರ್ಷಿತರಾಗಿದ್ದರು.

'ದಲಿತ ಕವಿ' ಎಂದೇ ಪ್ರಸಿದ್ಧರಾದ ಸಿದ್ಧಲಿಂಗಯ್ಯನವರು ದಲಿತ ಹೋರಾಟ ಮತ್ತು ಸಾಮಾಜಿಕ ಸಮಾನತೆಗಾಗಿ ಕಾವ್ಯ ಸಾಹಿತ್ಯಗಳನ್ನು ರಚಿಸಿದವರು. ಕಾವ್ಯ, ನಾಟಕ, ಪ್ರಬಂಧ, ವಿಮರ್ಶೆ, ಸಂಶೋಧನೆ, ಆತ್ಮಕಥನ ಮುಂತಾದ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದವರು. ಎರಡು ಬಾರಿ ವಿಧಾನಪರಿಷತ್ತಿನ ಸದಸ್ಯರಾಗಿದ್ದರು. ಅಧ್ಯಾಪನ–ಬರವಣಿಗೆಗಳಲ್ಲಿ ತೊಡಗಿಕೊಂಡಿರುವವರು. ಹೊಲೆ ಮಾದಿಗರ ಹಾಡು, ಮೆರವಣಿಗೆ, ಸಾವಿರಾರು ನದಿಗಳು, ಕಪ್ಪು ಕಾಡಿನ ಹಾಡು, ಆಯ್ದಕವಿತೆಗಳು, ಅಲ್ಲೆಕುಂತವರೆ, ನನ್ನ ಜನಗಳು ಮತ್ತು ಇತರ ಕವಿತೆಗಳು ಇವು ಕವನ ಸಂಕಲನಗಳು.

## 7. ನಾವು ಹುಡುಗಿಯರೇ ಹೀಗೆ....

–ಪ್ರತಿಭಾ ನಂದಕುಮಾರ್

ಹೌದು ಕಣೆ ಉಷಾ
ನಾವು ಹುಡುಗಿಯರೇ ಹೀಗೆ....

ಏನೇನೋ ವಟಗುಟ್ಟಿದರೂ
ಹೇಳಬೇಕಾದ್ದನ್ನು ಹೇಳದೆ
ಏನೇನೆಲ್ಲಾ ಅನುಭವಿಸಿ ಸಾಯುತ್ತೇವೆ.
ಜುಮ್ಮೆನ್ನಿಸುವ ಆಲೋಚನೆಗಳನ್ನೆಲ್ಲಾ
ಹಾಗೇ ಡಬ್ಬಿಯೊಳಗೆ ಹಿಟ್ಟು ಒತ್ತಿದಂತೆ
ಒತ್ತಿ ಒತ್ತಿ ಗಟ್ಟಿ ಮಾಡುತ್ತೇವೆ.
ಹೇಳಲೇಬೇಕು ಎನ್ನಿಸಿದ್ದನ್ನು
ಹೇಳಹೋಗಿ ಹೆದರಿ ಏನೇನೋ ತೊದಲುತ್ತೇವೆ.
'ಐ ಲವ್ ಯೂ' ಅಂತ ಹೇಳಲು ಕಷ್ಟಪಟ್ಟು
ಬೇರೆ ಏನೇನೋ ದಾರಿ ಹುಡುಕಿ
ಸಂದೇಶ ಮುಟ್ಟಿಸಲು ಹೆಣಗುತ್ತೇವೆ.
ಅದನ್ನು ಅರ್ಥ ಮಾಡಿಕೊಳ್ಳಲಾರದೆ
ಹುಡುಗರು ಕೈ ತಪ್ಪಿದಾಗ
ಮುಸುಮುಸು ಅಳುತ್ತೇವೆ.
ಕೊನೆಗೆ ಬೇರೆ ಯಾರನ್ನೋ ಮದುವೆಯಾಗಬೇಕಾದಾಗ
ನಾವೇ ದುರಂತ ನಾಯಕಿಯರೆಂದು
ಭ್ರಮಿಸಿ ಎಲ್ಲರ ಅನುಕಂಪ ಬಯಸುತ್ತೇವೆ.

ಗಂಡನಲ್ಲಿ 'ಅವನನ್ನು' ಹುಡುಕುತ್ತೇವೆ.
ಗಂಡನಿಗೆ ಮಾತ್ರ ಅದರ ಸುಳಿವೂ ಸಿಗದಂತೆ ನಟಿಸುತ್ತೇವೆ.
ಅಷ್ಟರಲ್ಲಿ ಒತ್ತಿಟ್ಟ ಭಾವನೆಗಳೆಲ್ಲ ಹರಳಾಗಿಬಿಟ್ಟಿರುತ್ತವೆ
ಅರಳುವುದೇ ಇಲ್ಲ ಉಷಾ....

2

ನಾಲ್ಕು ವರ್ಷಗಳಲ್ಲಿ ವಿಪರೀತ ದಪ್ಪವಾಗಿ
ಕೈಗೊಂದು ಕಾಲಿಗೊಂದು ಮಕ್ಕಳಾಗಿ
ಏದುಸಿರು ಬಿಡುತ್ತಾ ತರಕಾರಿ ಕೊಳ್ಳುವಾಗ
'ಅವನು' ಸಿಗುತ್ತಾನೆ.
ನಮ್ಮ ಇಂದಿನ ಅವಸ್ಥೆಗೆ ಇವನೇ ಕಾರಣ
ಅಂತ ರೋಷ ತಾಳುತ್ತೇವೆ.
ಆದರೆ ಮೇಲೆ ನಗುನಗುತ್ತಾ 'ಅವನ'
ಹೆಂಡತಿ ಮಕ್ಕಳ ಯೋಗಕ್ಷೇಮ ವಿಚಾರಿಸುತ್ತೇವೆ.
ಯಾಕೆಂದರೆ ಅವಳದೂ ಅದೇ ಕಥೆಯಲ್ಲವೇ?

ನಾವು ಹುಡುಗಿಯರೇ ಹೀಗೆ....

**ಪ್ರತಿಭಾ ನಂದಕುಮಾರ್ :** ಲೇಖಕಿ ಪ್ರತಿಭಾ ನಂದಕುಮಾರ್ ಅವರು 1955 ಡಿಸೆಂಬರ್ 25ರಂದು ಜನಿಸಿದರು. ಮೂಲತಃ ಬೆಂಗಳೂರಿನವರು. ತಂದೆ ವಿ.ಎಸ್. ರಾಮಚಂದ್ರರಾವ್, ತಾಯಿ ಯಮುನಾಬಾಯಿ. ಬಾಲ್ಯದ ಬಹುದಿನಗಳನ್ನು ಬೆಂಗಳೂರು ಮತ್ತು ಮೈಸೂರಿನಲ್ಲಿ ಕಳೆದ ಪ್ರತಿಭಾ, ಮದ್ರಾಸ್ ವಿಶ್ವವಿದ್ಯಾಲಯದಿಂದ ಎಂ.ಎ ಮತ್ತು ಎಂ.ಫಿಲ್ ಪದವಿ ಪಡೆದಿದ್ದಾರೆ. ಎನ್.ಜಿ.ಎಫ್‌ನಲ್ಲಿ ಭಾಷಾಂತರಕಾರರಾಗಿ ನಂತರ ಇಂಡಿಯನ್ ಎಕ್ಸ್‌ಪ್ರೆಸ್, ಡೆಕ್ಕನ್ ಹೆರಾಲ್ಡ್ ಮತ್ತು ಅಗ್ನಿ ಪತ್ರಿಕೆಗಳಲ್ಲಿ ಪತ್ರಕರ್ತೆಯಾಗಿ ಕಾರ್ಯನಿರ್ವಹಿಸಿದ್ದಾರೆ. ಜೊತೆಗೆ ಸಿನಿಮಾ ರಂಗದಲ್ಲಿಯೂ ಸಹಾಯಕ

ನಿರ್ದೇಶಕಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಪತಿ ನಂದಕುಮಾರ್ ಹಾಗೂ ಮಕ್ಕಳು ಅಭಿರಾಮ್ ಮತ್ತು ಭಾಮಿನಿ ಜೊತೆ ಸದ್ಯ ಬೆಂಗಳೂರಿನಲ್ಲಿ ವಾಸವಿರುವ ಪ್ರತಿಭಾ ನಂದಕುಮಾರ್ ಕಾವ್ಯಧರ್ಮವನ್ನೇ ತಮ್ಮ ಮನೋಧರ್ಮವನ್ನಾಗಿಸಿಕೊಂಡಿರುವ ಕವಯತ್ರಿ. ಅವರ ಪ್ರಕಟಿತ ಪುಸ್ತಕಗಳು– ನಾವು ಹುಡುಗಿಯರೇ ಹೀಗೆ, ಈ ತನಕ, ರಸ್ತೆಯಂಚಿನ ಗಾಡಿ, ಕವಡೆಯಾಟ, ಆಹಾ ಪುರುಷಾತಾರಂ, ಅವರು ಪುರಾವೆಗಳನ್ನು ಕೇಳುತ್ತಾರೆ, ಮುನ್ನುಡಿ ಬೆನ್ನುಡಿಗಳ ನಡುವೆ, ಕಾಫಿ ಹೌಸ್, ಮುದುಕಿಯರಿಗಿದು ಕಾಲವಲ್ಲ; ಇವು ಅವರ ಕವನ ಸಂಕಲನಗಳು. ಯಾನ– ಕಥಾಸಂಕಲನ, ಆಕ್ರಮಣ– ಅನುವಾದಿತ ಕಥೆಗಳು, ಸೂರ್ಯಕಾಂತಿ– ಅನುವಾದಿತ ಡೋಗ್ರಿ ಕವನಗಳು.

ಸಾಹಿತ್ಯ ಕ್ಷೇತ್ರದ ಕೃಷಿಗಾಗಿ 'ಮಹಾದೇವಿ ವರ್ಮಾ ಕಾವ್ಯ ಸಮ್ಮಾನ್', 'ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', 'ಮುದ್ದಣ್ಣ ಕಾವ್ಯ ಪ್ರಶಸ್ತಿ', 'ಡಾ.ಶಿವರಾಮ ಕಾರಂತ ಪ್ರಶಸ್ತಿ', 'ಪು.ತಿ.ನ ಕಾವ್ಯ ಪ್ರಶಸ್ತಿ' ಸೇರಿದಂತೆ ಹಲವು ಗೌರವ ಪ್ರಶಸ್ತಿಗಳು ಸಂದಿವೆ. 'ಅನುದಿನದ ಅಂತರಗಂಗೆ' ಪ್ರತಿಭಾ ನಂದಕುಮಾರ್ ಅವರ ಆತ್ಮಕಥನ.

## 8. ಅಮೃತಮತಿಯ ಸ್ವಗತ

–ಎಚ್.ಎಲ್. ಪುಷ್ಪ

ತೆರೆದ ಬಾನೆದುರಲ್ಲಿ
ಮೃದು ಮೈಯ ಮಾಂಸಗಳ ಹಬೆಯಲ್ಲಿ
ಉಳಿದ ಭಾವಗಳೆಷ್ಟು, ತೇಲಿಹೋದವೆಷ್ಟು
ಹಸಿಹಸಿ ಕಾಡುಪೊದೆಯ ಪೊದರುಗಳಲ್ಲಿ
ಮುಳುಗುವುವು ರಾಗಗಳು; ತೇಕುವುವು ಹಸಿವೆಗಳು
ಸತ್ತು ಸೊರಗುವುವು ಹಸನಾದ ನಿನ್ನ ನಗುವಿನೆದುರು

ಇದು ಜೀವ;
ಪ್ರೇಮ ಕಾಮ ಒಳಗೊಂಡಿದ್ದು,
ನಿನ್ನೆದುರು ಸುಳಿಯುವ ಈ ಹಕ್ಕಿ
ಅಷ್ಟಾವಕ್ರ ಹಸಿಹಸಿ ಬದಗನಲಿ
ರೆಕ್ಕೆ ಬಿಚ್ಚಿ, ಹಾರುವುದೇಕೆ?
ಎಲ್ಲಿಯದೋ ಕೊರಳು,
ಎಲ್ಲಿಯದೋ ಗೆಜ್ಜೆ, ಯಾವುದೋ ಹೆಜ್ಜೆ
ತಂತಾನೇ ತಟ್ಟುವ ರಾಗಗಳು
ಯಾವ ಪಲ್ಲಂಗದ ಮೇಲೋ ಹೊರಳು
ಸುರತಿ ಸಂಪ್ರೀತೆ ಈ ಹೆಣ್ಣು;
ಮರುಳ ಕೊರಳ ಕರೆಗೆ
ಹೆಡೆ ಬಿಚ್ಚಿ ತೂಗುವುದು ಹಾವು.
ಮೃದು ಕೊರಳ ಕರೆಯಲ್ಲಿ

ಸಹಸ್ರ ಸಹಸ್ರ ನಾಗಸ್ವರ
ಯಾವ ಸ್ವರ ಕಚ್ಚಿತೋ
ಯಾವುದು ನುಂಗಿತೋ
ಕಾದಿದೆ ನೆರಳು, ಮೃದು ಮೈಯ ಬದಿಯಲ್ಲಿ.

ಸವಿಯಿದೆ ನೋಡು;
ಒರಟು ಚಾಟಿಯ ಚುಂಬನದಲ್ಲಿ
ನವಿರಿದೆ ನೋಡು, ನಾದವಿದೆ ನೋಡು
ಒರಟು ಬೆರಳುಗಳ ಕಂಪನದ
ಏನಿದು ಮಿಡಿತ ಮುಳ್ಳುಗಳ ಮುತ್ತಿನಲಿ,
ಅದಕ್ಕೆ ನೋಡು ದೊರೆ,
ನಿನ್ನ ಚಂದನ, ಗಂಧ ಸುವಾಸಿತ ತೆಕ್ಕೆ
ಬಿಟ್ಟು ಈ ಕಾಡ ಪೊದೆಯ ಕರೆಗೆ
ಹಾಡಾಗಿ ಹಾಡಿದ್ದು;
ಹಸಿವಿದ್ದೂ ಒಡಲ ಮುಚ್ಚುವ
ಕಾತುರವಿದ್ದೂ ತಣ್ಣಗೆ ನಗುವ
ಈ ಹೂವುಗಳು
ಒಳಗೊಳಗೇ ಉಕ್ಕಿ ಜ್ವಲಿಸುವುದಕಂಡು
ಸಿಟ್ಟಿಗೆದ್ದಿದ್ದೇನೆ.
ಮೈಯ ವಾಸನೆಗೆ ಜನ್ಮಾಂತರಗಳಿಲ್ಲ
ಬಂಧವಿಲ್ಲ ಈ ಪಾಡುಗಳಿಗೆ
ಹೊರುವ ಪಾಪಗಳಿಲ್ಲ
ಹಸಿವಿನೆದುರು ಏನಿಲ್ಲ, ಏನೆಲ್ಲ ಭೀತಿ

ಕತ್ತಿಯೂ ಕೂಡ ಅಳುಕುತ್ತದೆ
ಧರ್ಮದ ಸೂಕ್ಷ್ಮ ಜಂಜಾಟದಲ್ಲಿ
ನಾವು ಜನ್ಮವೆತ್ತುತ್ತಲೇ ಇದ್ದೇವೆ
ಅಮೃತಮತಿಯಾಗಿ
ನಿನ್ನಂಥವನ ಗದ್ದುಗೆಯ ರಾಣಿಯರಾಗಿ
ಅವನು ಬದಗನಾಗಿ
ನಮಗುತ್ತರವಾಗಿ.

**ಎಚ್.ಎಲ್. ಪುಷ್ಪ** : ಕವಯತ್ರಿ, ಸ್ತ್ರೀವಾದಿ ಎಚ್.ಎಲ್. ಪುಷ್ಪ ಅವರು ದೊಡ್ಡಬಳ್ಳಾಪುರದ ಹೊಸಹಳ್ಳ ಉಜ್ಜನಿಯಲ್ಲಿ 1962 ಸೆಪ್ಟಂಬರ್ 18ರಂದು ಜನಿಸಿದರು. ತಾಯಿ ಕಮಲಮ್ಮ, ತಂದೆ ಲಕ್ಷ್ಮಣಗೌಡ. 'ಕನ್ನಡ ನಾಟಕಗಳಲ್ಲಿ ಮೈಮನಸ್ಸುಗಳ ಸಂಬಂಧ' ಪ್ರಬಂಧ ಮಂಡಿಸಿ ಪಿಎಚ್‌ಡಿ ಪದವಿ ಪಡೆದಿದ್ದಾರೆ. ಕವನ ರಚನೆಯಲ್ಲಿ ಅತೀವ ಆಸಕ್ತಿ ಇರುವ ಇವರು 'ಅಮೃತಮತಿ ಸ್ವಗತ' ಕೃತಿಯ ಮೂಲಕ ಕಾವ್ಯ ಕ್ಷೇತ್ರ ಪ್ರವೇಶಿಸಿದರು.

ಪುಷ್ಪ ಅವರ ಪ್ರಮುಖ ಕೃತಿಗಳೆಂದರೆ ಅಮೃತಮತಿಯ ಸ್ವಗತ, ಗಾಜುಗೊಳ, ಮದರಂಗಿ, ವೃತ್ತಾಂತ, ಲೋಹದ ಕಣ್ಣು (ಕವನ ಸಂಕಲನ), ಭೂಮಿಲ್ಲ ಇವಳು, ಗೆಲ್ಲಲಾರ್ಕುಮೆ ಮೃತ್ಯುರಾಜನಂ, ಪರ್ವಾಪರ್ವ (ನಾಟಕ), ಅವಲೋಕನ, ಗಂಧಗಾಳಿ, ವಚನ ಸಾಹಿತ್ಯ ಮತ್ತು ಸ್ತ್ರೀತ್ವದ ಕಲ್ಪನೆ (ವಿಮರ್ಶೆ) ಮುಂತಾದ ಹಲವಾರು ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಪು.ತಿ.ನ.ಕಾವ್ಯ ಪುರಸ್ಕಾರ, ಕಡೆಂಗೋಡ್ಲು ಶಂಕರಭಟ್ ಕಾವ್ಯ ಪ್ರಶಸ್ತಿ, ಸಾರಂಗಮಠ ಪಾಟೀಲ ಪ್ರಶಸ್ತಿ ಮುಂತಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

# ಕಥಾ ಭಾಗ:

## 1. ಪಂಜರದ ಗಿಣಿ

**–ಯು.ಆರ್. ಅನಂತಮೂರ್ತಿ**

"ಬಯಕೆಯರಮನೆಯಲ್ಲು ಬೋಧಿವೃಕ್ಷದ ಸುಯ್ಲು!"

ಎರಡು ವರ್ಷದ ಕೆಳಗೆ, ನಿಮಿಷದಂತೆ ಸರಿದು ನಿಂತ ಎರಡು ವರ್ಷದ ಕೆಳಗೆ, ಇಲ್ಲೆ–ನಸು ಮೈಯುಬ್ಬಿಸಿ ಮಲಗಿದ ಈ ನುಣುಪು ಹೂಚೆಲ್ಲಿದ ಹಾದಿಯಲ್ಲೆ ನಡೆಯುತ್ತಿದ್ದಾಗ...

ಬೆನ್ನಹಿಂದೆ ನೀಲಿಯಲ್ಲಿ ಬೆಣ್ಣೆಯಂಥ ಚಂದ್ರ... ಕೌಮುದಿಯ ಮಾಯೆಯಲ್ಲಿ ರಂಗುರಂಗಿನ ಹಾದಿಯನ್ನು ಸವರಿ ಸಾಗಿದ ಅವನ ಪುಟ್ಟ ಕರಿಯ ನೆರಳು– ತಲೆಗೂದಲಿಗೆ ಕಚಕುಳಿಯಿಟ್ಟು, ಮರದ ಎಲೆಯೇರಿ ನಗುತ್ತಿದ್ದ ಕಳ್ಳ ತಂಗಾಳಿ...

ಆದರೆ ಇವೆಲ್ಲವನ್ನೂ ಮರೆಸಿ. ಮನಸ್ಸಿನೆದುರು ಸುಳಿಯುತ್ತಿದ್ದ ಆ ಮುದ್ದು ಮುಖ...

ಸೂಜಿಗಲ್ಲಿನಂತೆ ಹಾದಿಯುದ್ದಕ್ಕೂ ಅವನನ್ನು ಎಳೆಯುತ್ತಿದ್ದ ಆ ಪುಟ್ಟ ಗುಡಿಸಲು–ಎದುರಿನ ಮಲ್ಲಿಗೆ ಮಂಟಪ– ಬಾಗಿಲ ಬಳಿ ಜೋಲಾಡುವ ಗಿಣಿಯ ಪಂಜರದ ಬಳಿ ಚೆಂದುಟಿ ಅದುರಿಸಿ, ನಾಚಿ ನಾಚಿ ಅವನ ಹೆಸರು ಕಲಿಸುತ್ತ, ಸುಯ್ದು ಸುಟ್ಟು ದಾರಿ ಕಾಯುತ್ತ ನಿಂತಿರುತ್ತಿದ್ದ ಕಾಮಾಕ್ಷಿ...

ಕಾಮಾಕ್ಷಿ, ಪುಟ್ಟ ಗುಡಿಸಲು, ಹೂದೋಟ, ಏಕಾಂತ, ಗಿಣಿಯ ಪಂಜರ, ಸ್ವಾತಂತ್ರ ಜನಜಂಗುಳಿಯ ಗೊಂದಲದಿಂದ ದೂರ. ದೂ...ರ?

...ಆಹ್! ಬೆನ್ನಹಿಂದೆ ನಗುವ ಚಂದ್ರ, ದಾರಿ ತುಂಬ ರಂಗುರಂಗು ಪುಟ್ಟ ನೆರಳು, ನಡೆನಡೆದು ಸವೆದ ಹಾದಿ...

–ಸವೆದ ಹಾದಿ?

ಅಲ್ಲಿಯೇ ಕವಲೊಡೆದು ಹಾಯುವ ಇನ್ನೊಂದು ಹಾದಿಯನ್ನು ಯಾರು ನೋಡಿಯಾರು?

ನೋಡಿದರೂ ಯಾರು ನಡೆದಾರು ಕಲ್ಲು ಮುಳ್ಳಿನ ಆ ಕೊರಕಲು ಹಾದಿಯಲ್ಲಿ?...

ನಡೆದರೂ ಯಾರು ಹೋದಾರು ಅದು ಕೊಂಡೊಯ್ದು ಬಿಡುವ ಆ ಪರ್ವತದ ನೆತ್ತಿಯ ತುದಿಗೆ??...

ಮಲಗಲು ಬರುವ ಮೋಡಗಳಲ್ಲದೆ ಮತ್ತಾರು ಆ ಏಕಾಂತದ ನಡುವೆ ಸುಳಿದಿದ್ದಾರು???...

–ಸುಳಿದಿಲ್ಲವೆ!

ಅವನ ಹೆಸರು ಒಮ್ಮೆ ಅಲ್ಲಿ ಸುಳಿದಿಲ್ಲವೆ? ಪರ್ವತ ಒಮ್ಮೆ 'ರಾಮ' ಎಂದು ಕೂಗಿ ಕರೆಯಲಿಲ್ಲವೆ?... 'ರಾಮ'... ಏನು ಗಂಭೀರವಾಗಿ ಕರೆದಿತ್ತು!!...

ಅಂದೇ... ಅಂದೇ!... ಈ ಕೊರಕಲು ಹಾದಿ ತುಳಿದು ಪರ್ವತದ ನೆತ್ತಿಗೆ ಧಾವಿಸ ಬೇಕೆನ್ನಿಸಿತ್ತು!... 'ರಾ...ಮೂ'... ಏನು ಮೋಡಿ ಬೀರಿ ಕರೆದಿತ್ತು.

ಆದರೆ ಕಾಮಾಕ್ಷಿ ನಡುಗಿ ಹೆದರಿ ಕಣ್ಣರಳಿಸಿ ಬೇಡಿಕೊಂಡಳು... ಹೌದು! ಆ ದಿನ ಪರ್ವತ ಕರೆಯಲಿಲ್ಲ... ಎಂಥ ಹುಚ್ಚು ಕಲ್ಪನೆ. ಕಾಮಾಕ್ಷಿ ಕೂಗಿದಳು ಎಂದು ಪರ್ವತ ಹೇಳಿತ್ತು ಅಷ್ಟೆ!!...

ಆಗ... ಆಗ... ಎಂಥ ದಿನಗಳವು! ಆಗ ಪರ್ವತವೆ ಕಾಮಾಕ್ಷಿ ಕರೆದಳು ಎನ್ನುತ್ತಿತ್ತು. ಬೆಳದಿಂಗಳು 'ಕಾಮಾಕ್ಷಿ ಎಲ್ಲಿ' ಎಂದು ನಗುತ್ತಿತ್ತು. ಚಂದ್ರ 'ಏಕೆ ಕಾಮಾಕ್ಷಿ ಮುಖ ಸಾಲದೆ' ಎನ್ನುತ್ತಿದ್ದ. ಅರಳಿದ ಹೂಗೊಂಚಲು ಕಾಮಾಕ್ಷಿಯ ಮುಡಿ ಬರಿದಾಗಿದೆ ಎನ್ನುತ್ತಿತ್ತು. ಗಗನವೇ ಗುಡುಗಿ, ಕಾಮಾಕ್ಷಿಯನ್ನು ಬಿಟ್ಟೇಕಿರುವಿ ಎನ್ನುತ್ತಿತ್ತು.

ಆದರೆ ಈದಿನ ಏಕೆ ಹೀಗೆ ಮಂಪರು ಬಡಿದು ನಿಂತಿದ್ದಾನೆ? ಸಂಜೆಯ ಶಾಂತಿ ದಿಕ್ಕು ದಿಕ್ಕಿಗೂ ಬಣ್ಣ ಚೆಲ್ಲಿದಾಗ, ಈ ಕವಲೊಡೆದ ಹಾದಿ ಅವನ ಎದೆಯನ್ನೇಕೆ ಹೀಗೆ ತಿವಿಯುತ್ತಿದೆ?...

ಕಾಮಾಕ್ಷಿ ಕಾಯುತ್ತ ಗಿಣಿಯ ಪಜರದ ಬಳಿ ನಿಂತಿದ್ದಾಳೆ... ಹೋಗಲು ಎಂದಿನಂತೆ ಏಕೆ ಅವಸರವಿಲ್ಲ?... 'ಇಂದು ಏನಿದು ಬೇಸರ?'

ಕಾಮಾಕ್ಷಿ, ಪುಟ್ಟ ಗುಡಿಸಲು, ಹೂದೋಟ, ಏಕಾಂತ, ಗಿಣಿಯ ಪಂಜರ, ಸ್ವಾತಂತ್ರ್ಯ, ಜನ ಜಂಗುಳಿಯ ಗೊಂದಲದಿಂದ ದೂರ...ದೂ...ರ! ಏಕೆ? ಬೇಡವೆ?...

'ಏನಿದೇನಿದು ತೇಲುಗಣ್ಣಿನ ಹೊರಳು ನೋಟದ ಸೂಚನೆ?

ಯಾವ ಸುಮಧುರಯಾತನೆ, ಯಾವ ದಿವ್ಯದ ಯಾಚನೆ?'

ಏನು? ಪರ್ವತ ಕರೆಯುತ್ತಿದೆಯೆ? ಹಿಂದಿನಂತೆ ಕಾಮಾಕ್ಷಿ ಕರೆದಳೆಂದು ಹೇಳು ತಿದೆಯೆ??... ಅಥವಾ ಮೋಡಗಳಾಡುವ ಏಕಾಂತದ ಶ್ರೀಮಂತ ಒಡಲಿಗೆ ಅವನನ್ನೇ ಎಳೆಯು ತಿದೆಯೆ??... ಕೂಗಿ ಕೂಗಿ ಕರೆಯುತ್ತಿದೆಯೆ??...

ಎದಿರು ಕವಲೊಡೆದ ಹಾದಿ...

ಒಂದು ಕಾಮಾಕ್ಷಿಯ ಮೃದು ಹೃದಯದೆಡೆಗೆ ಒಯ್ಯುವ ಹೂಚೆಲ್ಲಿದ ಹಾದಿ. ಮತ್ತೊಂದು ಕಗ್ಗಲ್ಲಿನ ಕರಿಯೊಡಲಿಗೆ ಒಯ್ಯುವ ಕಲ್ಲು ಮುಳ್ಳು ತುಂಬಿದ ಕೊರಕಲು ದಾರಿ ಎಲ್ಲಿಂದೆಲ್ಲಿಗೆ ಸಂಬಂಧ...

ಆದರೂ ಕೂಗಿ ಕೂಗಿ ಕರೆಯುತ್ತಿದೆಯೆ ಪರ್ವತ?

ಏಕೆ ಸಾಲದೆ? ಇಷ್ಟೆ ಸಾಲದೆ??... ಕಾಮಾಕ್ಷಿ, ಪುಟ್ಟ ಗುಡಿಸಲು, ಹೂದೋಟ ಏಕಾಂತ, ಗಿಣಿಯ ಪಂಜರ, ಸ್ವಾತಂತ್ರ್ಯ...

ಸ್ವಾತಂತ್ರ್ಯ?... ಎಲ್ಲಿಯ ಸ್ವಾತಂತ್ರ್ಯ??... ಗಿಣಿಯ ಪಂಜರ....

ಊಹೂ. ಪಂಜರದ ಗಿಣಿ...

* * *

ಪಂಜರ! ಗಿಣಿ!... 'ಕಾಮೂ ರಾಮು!'

ಕಾಮುವಿಗೆ ರಾಮು–ರಾಮುವಿಗೆ ಕಾಮು... ಪಂಜರದ ಗಿಣಿ...!

ಪಂಜರದ ಗಿಣಿ ಕೊಕ್ಕು ಚಾಚಿ ಅರಚುತ್ತಿತ್ತು. ಕಾಮುವನ್ನು ಕರೆದು ಕರೆದು ಹೇಳುತ್ತಿತ್ತು "ಕಾಮೂ!... ರಾಮು"

ಕಾಮಾಕ್ಷಿ ಹೊರಗೋಡಿಬಂದು ನೋಡಿದಳು... ಅಭ್ಯಾಸ ಬಲದಿಂದ ಸವೆದ ಹಾದಿಯಲ್ಲೇ ನಡೆದು ಬಂದಿದ್ದ ರಾಮು.

ಆದರೆ ಎಂದಿನಂತೆ ಇಂದೇಕೆ ಅವನಿಗೆ ಅವಸರವಿಲ್ಲ? ಅವಳನ್ನು ಅಪ್ಪಿ ಮುದ್ದಾಡಲು ಏಕೆ ಕಾತರವಿಲ್ಲ?

ಕಾಮಾಕ್ಷಿ ಬೆಚ್ಚಿ, ಅವನನ್ನಪ್ಪಿ ಎದೆಗೆ ಎದೆಯೊತ್ತಿ, ಮುಖವೆತ್ತಿ ಬೇಡಿದಳು. ಇಂದೇಕೆ ಅವನಿಗೆ ಬೇಡವಾಯಿತು? ಏಕೆ? ಏಕೆ??..

ಕಾಮಾಕ್ಷಿ ಎರಡು ಹೆಜ್ಜೆ ಹಿಂದೆ ಸರಿದು ಹನಿಗೂಡಿದ ಕಣ್ಣೆತ್ತಿ ಮೆಲ್ಲನೆ ಕರೆದಳು...

'ರಾಮು'.. ..

ಪಂಜರದ ಗಿಣಿ ಹೊರಗಿನಿಂದಲೇ 'ಕಾಮೂ' ಎಂದು ಮಾರುತ್ತರ ಕೊಟ್ಟಿತು... ಆದರೆ ಬಳಿಯಲ್ಲೇ ಇದ್ದ ರಾಮು, 'ಕಾಮೂ' ಎನ್ನಲ್ಲಿಲ್ಲ!... ಎಲ್ಲಿ ದೂರ... ದೂ...ರ ಓಡಿದೆ ಅವನ ಮನಸ್ಸು??...

ಪ್ರೇಮದೇವತೆ ನಿಷೇಧಿಸಿದ ಯಾವ ಮರದ ಹಣ್ಣು ತಿಂದು ಬಂದ?... ಅವಳನ್ನಪೇಕ್ಷಿಸಿದ ಕಣ್ಣು ಮತ್ತಾವ ಜ್ಯೋತಿರ್ಮಯ ಅಂತರಾಳಕ್ಕಿಳಿದು ಕುರುಡಾಯಿತು??...

"**ಯಾವ ಬೃಂದಾವನವು ಚಾಚಿತು ತನ್ನ ಮಿಂಚಿನ ಕೈಯನು**?"

ಬೆಳಗಿನ ನಸು ಬಿಸಿಲಿನಲ್ಲಿ ಮಲ್ಲಿಗೆ ಮಂಟಪದ ಬಳಿ ಹೆಡೆಯಾಡಿಸಿದ ಹಾವು ಅವನ ಅಂತರಾಳ ಕೆದಕಿಹೋಯಿತೆ? ಏನಾಯಿತು? ಏನಾಯಿತು? ಅವಳ ಜೀವದ ಜೀವಕ್ಕೆ???...

* * *

ಏನಾಗಬೇಕು??

ರಾಮು ದೀರ್ಘ ನಿಟ್ಟುಸಿರೆಳೆದ.. ಇದಕ್ಕಿಂತ ಹೆಚ್ಚಿಗೆ ಏನಾಗಬೇಕು?

ಮಲ್ಲಿಗೆ ಮಂಟಪದಲ್ಲಿಯೂ ಹಾವು ಹೆಡೆಯಾಡಿಸುತ್ತದೆ! ಇಂದು ಚೆಲುವಿನ ಪುತ್ಥಳಿಯಾದ ಕಾಮಾಕ್ಷಿಯ ಮುದ್ದು ಕೆನ್ನೆಯನ್ನು, ಬೆಳಕು ತುಂಬಿದ ಕಣ್ಣನ್ನು, ಅಮೃತಮಯ ತುಟಿಯನ್ನು ನಾಳೆ ಕ್ರಿಮಿಕೀಟಗಳು ಉಣ್ಣುತ್ತವೆ! ಸಾವಿನ ಕೋರೆ ದಾಡೆಯ ಮೇಲೆ ಕುಣಿದು ಮೆರೆಯುವ ಸೌಂದರ್ಯದ ಆಯಸ್ಸೆಷ್ಟು? ಅಶಾಶ್ವತವಾದ ಬದುಕಿನ ನಾಟಕದಲ್ಲಿ ಈ ಆಸೆ, ಈ ಪ್ರೇಮ, ಈ ಹಂಬಲ, ಎಷ್ಟು ಕ್ಷಣಿಕ! ತರುಣರು

ಕ್ಷಯಪೀಡಿತರಾಗಿ, ಮುದುಕರು ಜರಾಶೀರ್ಣರಾಗಿ, ದುಃಖಿಗಳು ತಾವೇ ಮೈಮೇಲೆ ಮಣ್ಣೆಳೆದು– ಮರಣಮುಖರಾಗಿರುವ ಈ ಜಗತ್ತಿನಲ್ಲಿ ಶಾಂತಿ ಎಲ್ಲಿ? ಸುಖವೆಲ್ಲಿ?? ತೃಪ್ತಿಯೆಲ್ಲಿ??... ಎಲ್ಲಿ?

ಎಲ್ಲಿ??... ಎಲ್ಲಿ???...

ಕಣ್ಣು ಜ್ವಾಲಾಮುಖಿಯಾಗಿ ಹುಡುಕುತ್ತಿತ್ತು...... ಎಲ್ಲಿ? ಎಲ್ಲಿ??

–ಸಂಜೆ ಪರ್ವತ ಕರೆದು ಹೇಳಲಿಲ್ಲವೆ?... ಪರ್ವತದ ನೀರವ ನೆತ್ತಿಯ ತುದಿಯಲ್ಲಿ ಕಾವಿ ತೊಡಿಗೆಯುಟ್ಟು ಮುಗಿಲ ರೂಪವೊಂದು ಸುಳಿಯಲಿಲ್ಲವೆ??

ಹೊರಟು ಹೋಗಲು, ತಿರುಗಿ ನೋಡದೆ ಹೊರಟು ಹೋಗಲು ನವತಾರುಣ್ಯದ ಸೌಂದರ್ಯನಿಧಿ ಕಾಮಾಕ್ಷಿಯ ಬೆಚ್ಚಗಿನ ಅಪ್ಪುಗೆಯನ್ನು ತೊರೆದು ಹೊರಟು ಹೋಗಲು, ದೂ...ದೂರ...ರ ತಿರುಗಿ ನೋಡದೆ ಹೊರಟು ಹೋಗಲು ತ್ರಾಣವಿದೆಯೆ?

* * *

ಅಂಗಳದಲ್ಲಿ ಕಾಮಾಕ್ಷಿಯ ಜೊತೆ ನಿಂತವನು ಕತ್ತೆತ್ತಿ ನೋಡಿದ. ದೇವರ ನೀಲಿ ಅಂಗಳದಲ್ಲಿ ಕೋಟಿ ದೀಪ ಮಿನುಗುತ್ತಿತ್ತು!... ಮಿನುಗುತ್ತಿತ್ತೆ??... ಹೌದು! ಹಿಂದೆ ಕಾಮಾಕ್ಷಿಯನ್ನಪ್ಪಿ ನೋಡಿದಾಗಲೆಲ್ಲಾ ಹಾಗೆನ್ನಿಸುತ್ತಿತ್ತು. ತನ್ನ ಪ್ರೇಮ ಸಮಾಗಮಕ್ಕೆ ಸಾಕ್ಷಿಯಾಗಿ ತಾರೆಗಳು ಕಣ್ಣರಳಿಸಿ ಕಾದು ನಿಂತಿವೆ ಎನಿಸುತ್ತಿತ್ತು. ಆದರೆ ಈಗ??...

ವಾಮನನಂತಿದ್ದ ಪ್ರಕೃತಿ ಈಗ ತ್ರಿವಿಕ್ರಮ ರೂಪ ತಾಳಿ ತುಳಿಯುತ್ತಿದೆ. ಆ ಅಪರಂಪಾರ ಜ್ಯೋತಿರ್ಲೋಕಗಳ ಕ್ರೂರ ವಿಸ್ತಾರದ ಅದ್ಭುತದೆದುರು ಈಗ ಅವನೆತ್ತ? ಅವನ ಅರಗಿಣಿ ಕಾಮಾಕ್ಷಿಯೆತ್ತ?

ಕಣ್ಣು ಕೊರೈಸುತ್ತಿದೆ ಆ ದೀಪ್ತ ಬ್ರಹ್ಮಾಂಡಗಳ ಬೆಳಕು, ಏರು ಏರು ಎಂದು ಹೃದಯ ಹಿಂಡುತ್ತಿದೆ ಆ ಪರ್ವತದ ಗಂಭೀರ ಎತ್ತರ.

ಆದರೆ ಎಲ್ಲಿ?... ಎಳೆಯುವ ಈ ನೆಲದಲ್ಲಿ? ಬಡತನ, ರೋಗ, ರುಜಿನ, ಹಸಿವು, ಸಂಕಟ, ಹೃದಯದ ತಟವಟ... ಈ ಭವಬಂಧನದ ಕ್ರೂರ ಮಾಯಾಪಾಶ...

ಎಲ್ಲವನ್ನೂ ಮೀರಿ ಎಂದು ನಿಲ್ಲುವುದು? ಆ ಪರ್ವತದ ತುದಿಗೆ ಎಂದು ಹಾರುವುದು?? ಎಂದು? ಎಂದು??

ಎದೆಯೋ ಬೆಂಕಿಯ ಕುಂಡ! ಮೇಲೆ– ಉರಿಯುವ ಜ್ಯೋತಿರ್ಲೋಕ! ಮೈ ಕರ್ಪೂರದ ಆರತಿ!!... ಸುತ್ತೆಲ್ಲೆಲ್ಲೂ ಜ್ವಾಲೆ!!... ಅವನ ತಾಂಡವ ಲೀಲೆ!!

ಎಂಥ ಕ್ರೂರ ಲೀಲೆ?... ಈ ಮಾಂಸದ ಪಂಜರವನ್ನಿತ್ತ ದೇವರೇ ಏಕೆ ತನ್ನ ರುದ್ರ ಸೌಂದರ್ಯದ ಈಟಿ ಎಸೆದು ತಾನಿತ್ತ ಪಂಜರವನ್ನೆ ತಿವಿಯುತ್ತಾನೆ? ಏನು ಲೀಲೆ ಅವನದು?... ಪಂಜರದಲ್ಲಿಟ್ಟು ತಾನೇ ಸಾಕಿ, ಮತ್ತೆ ಹಾರಲು ಪ್ರೇರಿಸುವಷ್ಟು ನಿಷ್ಕರುಣೆಯೆ ಅವನಿಗೆ? ಆ ಪರ್ವತದ ತುದಿಗೆ ಹಾರಬೇಕೆ???...

ಆದರೆ ಅಲ್ಲಿಗೆ ಹೋಗುವಷ್ಟು ಧೈರ್ಯ ಉಂಟೆ?

ಶಕ್ತಿ ಉಂಟೆ??...

–ಆದರೆ... ಪಾಪ ನಂಬಿದ ಮುಗ್ಧ ಕಾಮಾಕ್ಷಿ... ಕೈ ಹಿಡಿದ ಚೆಲುವಿನ ಪುತ್ಥಳಿ ಅಬಲೆ ಕಾಮಾಕ್ಷಿ... ಮುದ್ದು ಮುಖದ ಕಾಮಾಕ್ಷಿ...

"ಕಾಮೂ... ಕಾಮೂ..."

* * *

"ಕಾಮೂ...

ಕಾಮೂ ಪಾಪ ನಿದ್ದೆ ಹೋದಳು... ಪಾಪ! ಅಬಲೆ!... ಮುಗ್ಧ ಕೋಮಲ ಹೃದಯಿ ಕಾಮಾಕ್ಷಿ. ಅವಳೇನು ತಪ್ಪು ಮಾಡಿದ್ದಾಳು?... ಚೆಲುವೆಗೇಕೆ ಈ ಶಿಕ್ಷೆ?... ಹೆಣ್ಣು ಜೀವದ ತಾರುಣ್ಯ ನೂರು ರೀತಿ ಸಿಂಗರಿಸಿಕೊಂಡು ಗಂಡು ಜೀವವನ್ನು ಕರೆಯುತ್ತದೆ... ಸೃಷ್ಟಿಯ ಶಕ್ತಿ ಕಾಮಾಕ್ಷಿಯ ಸೌಂದರ್ಯವಾಗಿ ಕರೆಯುತ್ತದೆ..

–ಕರೆಯುತ್ತದೆ? ಯಾವ ಅಂಧಕಾರದಂತರಾಳಕ್ಕೆ ಕರೆಯುತ್ತದೆ? ಜನುಮ ಜನುಮದಲ್ಲೂ ಬೆನ್ನಟ್ಟಿ, ಯಾವ ತಿಮಿರದ ಪಾತಾಳಕ್ಕೆ ತಳ್ಳುತ್ತಿದೆ? ಸೃಷ್ಟಿಯ ಮಾಯಾ ಲೀಲೆಗೆ ಬಲಿಯಾಗಿ ಕತ್ತಲಿನ ಮಡುವಿಗೂ ಧುಮುಕಬೇಕೆ? ಇಷ್ಟು ಸಂಕಟ ಇಷ್ಟು ದುಃಖ ತುಂಬಿದ ಈ ಪ್ರಪಂಚಕ್ಕೆ ಮತ್ತೊಂದು ಜೀವಿಯನ್ನು ಪಾಲುಗಾರಿಕೆಗೆ ತರಲು, ಸೃಷ್ಟಿಯ

ಸಾವಿನ ದವಡೆಗೆ ಮತ್ತೊಂದು ತುತ್ತೀಯಲು ಆ ನಿಷ್ಕರುಣ ಶಕ್ತಿಯ ಲೀಲೆಗೆ ಸಾಧನವಾಗಬೇಕೆ? ಏನೂ ಅರಿಯದ ಮುಗ್ಧ ಕಾಮಾಕ್ಷಿಯ ದೇಹದಲ್ಲಿ ಕ್ಷಣಿಕ ಸೌಂದರ್ಯವಾಗಿ ನೆಲಸಿ, ಕರೆಯುವ ಆ ಕ್ರೂರ ಶಕ್ತಿಯ ಕುರುಡು ಪಾಶಕ್ಕೆ ಅವನು ಇಡಿಯ ಬದುಕನ್ನೆ ಒಡ್ಡಬೇಕೆ??...

ಇಲ್ಲ... ಇಲ್ಲ... ಆಗಲಾರ... ಅವನು ಬಲಿಯಾಗಲಾರ...

ಮೇಲಿನ ದೀಪ್ತ ಬ್ರಹ್ಮಾಂಡಗಳು ರುದ್ರಸೌಂದರ್ಯದ ಈಟಿ ಎಸೆದು ತಿವಿಯುತ್ತಿವೆ. ಅಗೋ! ಆ ಪರ್ವತ ಕರೆಯುತ್ತಿದೆ, ಮಲ್ಲಿಗೆ ಮಂಟಪದ ಬಳಿ ಹಾವು ಸುಳಿದು ಎಚ್ಚರಿಸಿದೆ. ಕೊರಕಲು ಹಾದಿಯಾದರೇನಂತೆ? ಅದರಲ್ಲಿ ನಡೆದರಾಯಿತು... ವರ್ವತ ಬುದ್ಧನಂತೆ ಕೂತು ಸನ್ನೆ ಮಾಡುತ್ತಿದೆ... ಮುಪ್ಪಿನಲ್ಲಿ ಸುಕ್ಕುಗಟ್ಟಿ ಕೊನೆಗೆ ಮಣ್ಣು ತಿನ್ನುವ ಈ ದೇಹದ ಸುಖಕ್ಕಾಗಿ ಏಕೆ ಹಲುಬಬೇಕು?–'ಭಾರ್ಯಾ ಭಿಭ್ಯತಿ ತಸ್ಮಿನ್ ಕಾಯೇ'. ಸರ್ವಭೂತಗಳಿಗೂ ಈಗ ನಿಶೆ ಪ್ರಾಪ್ತವಾಗಿದೆ. ಕತ್ತಲು ಸ್ವಪ್ನ ಸಾಮ್ರಾಜ್ಯ ನೇಯುತ್ತ ಬದುಕಿನೊಡನೆ ಆಡುತ್ತಿದೆ. ಇದೇ ಜಾಗೃತನಾಗಲು ಸುಸಮಯ... **'ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ'**... ಹೋಗಬೇಕು... ಮಡದಿ ಮಠ ಮನೆ ಮಾರು ಎಲ್ಲ ಎಲ್ಲ ತೊರೆದು ಹೋಗಬೇಕು... ಹೋಗಬೇಕು...

ರಾಮು ಎದ್ದು ನಿಂತ... ಸೌಂದರ್ಯನಿಧಿ ಕಾಮಾಕ್ಷಿ ನಿದ್ದೆಯಲ್ಲಿದ್ದಳು. ತಿರುಗಿ ನೋಡದೆ ಹೆಜ್ಜೆ ಇಟ್ಟ... ಮತ್ತೊಂದು ಹೆಜ್ಜೆ ಮುಂದುವರಿದು ಗೋಡೆಯ ಮಗ್ಗುಲಿಗೆ ಆನಿಸಿ ಇಟ್ಟಿದ್ದ ಬುದ್ಧನ ವಿಗ್ರಹಕ್ಕೆ ಕೈಮುಗಿದು ಆ ಮೂರ್ತಿಯ ಪ್ರಶಾಂತತೆಯನ್ನು ಎದೆಯಲ್ಲಿ ತುಂಬಿಕೊಂಡ... ಹೊರಟ...

ಬುದ್ಧ ಬುದ್ಧ...

**ಜಗವೆಲ್ಲ ಮಲಗಿರಲು ಅವನೊಬ್ಬನೆದ್ದ...**

* * *

ಎದ್ದವನೆ ಹೊರಬಂದು ಪಂಜರದ ಬಾಗಿಲನ್ನು ತೆರೆದು ಗಿಣಿಯನ್ನು ಹೊರಗೆ ಹಾರಿಸಿದ, ನಿಡುಸುಯ್ದು... ಪರ್ವತಾಭಿಮುಖವಾಗಿ ಹೊರಟ....

**"ಹೊರಟ. ಹೊರಟೇ ಹೊರಟ. ಹೊರಟನೆತ್ತೊ!"...**

ಆದರೆ ಹೋಗುತ್ತಿದ್ದವನು ಬೆಚ್ಚಿ ಗಕ್ಕನೆ ನಿಂತು ನೋಡಿದ:

ಹೊರಗೆ ಗಾಡಾಂಧಕಾರ.

ತಿವಿದು ತಿವಿದು ಹಿಂಸಿಸಿದ ನಕ್ಷತ್ರಗಳೆಲ್ಲಿ?.... ಬಾಬಾ ಎಂದು ಕರೆದ ಪರ್ವತವೆಲ್ಲಿ?.... ಸ್ಥಿತಪ್ರಜ್ಞ ಬುದ್ದನೆಲ್ಲಿ???.... ಎಲ್ಲಿ?... ಎಲ್ಲಿ??

ಗಾಡಾಂಧಕಾರ.... ಪ್ರಳಯದ ಕಪ್ಪು ಕರಿಯ ಅಂಧಕಾರ... ಒಳಗು ಹೊರಗು ಎಲ್ಲೆಲ್ಲೂ ಕತ್ತಲೋ ಕತ್ತಲು!!...

ಆದರೆ ಅಂದು ಬುದ್ಧ ಹೊರಟಂದು– ವೈಶಾಖ ಶುದ್ಧ ಪೂರ್ಣಿಮೆ! ಹೊರಗೆಲ್ಲ ಹಾಲೋ ಹಾಲು.

ಆದರೆ ಅವನ ಮುಂದೆ ಅಂಧಕಾರ... ಗಾಡಾಂಧಕಾರ!

ಎಲ್ಲಿ ನಕ್ಷತ್ರ?... ಎಲ್ಲಿ ಪರ್ವತ?....

ಎಲ್ಲಿ? ಎಲ್ಲಿ ಈಗ ರಾಮೂ?... ಎಲ್ಲಿ ರಾಮೂ!!...

* * *

"ಎಲ್ಲಿ? ಎಲ್ಲಿ ಈಗ ರಾಮೂ?... ಎಲ್ಲಿ ರಾಮೂ"

ಕಾಮಾಕ್ಷಿ ಚೀರಿ ಹೊರಬಂದು ನೋಡಿದಳು.

'ಅಯ್ಯೋ ಎಲ್ಲಿ ಹೋದ ರಾಮು?'

ಪಂಜರದಲ್ಲಿ ಗಿಣಿ ಇಲ್ಲ... ಎಲ್ಲಿ?... ಎಲ್ಲಿ ಅವಳ ಅರಗಿಣಿ? ಎಲ್ಲಿ ರಾಮು!? ಎಲ್ಲಿ??..

'ರಾಮೂ... ರಾಮೂ...'

ಗಿಣಿ ಮತ್ತೆ ಹಾರಿಬಂದಿತು... ಆದರೆ ರಾಮು ಎಲ್ಲಿ?... ಅರಗಿಣಿ! ರಾಮು ಎಲ್ಲಿ... ಎಲ್ಲಿ?...

ಕಾಮಾಕ್ಷಿ ಒಳಗೋಡಿ ಬಂದಳು. ಬುದ್ಧನ ವಿಗ್ರಹದಿದುರು ಕೈಜೋಡಿಸಿ ನಿಂತಳು. ಬುದ್ಧನಿಗೆ ಎಲ್ಲವೂ ಗೊತ್ತಿದೆಯೋ ಎನ್ನುವಂತೆ ಹಲುಬಿ ಹಲುಬಿ ಕೇಳಿದಳು. 'ರಾಮು ಎಲ್ಲಿ?'...

ಮಡದಿ ಮಠ ಮನೆ ಮಾರು ತೊರೆದು ಬುದ್ಧನಾದವನನ್ನು ನಡುಗುವ ಕೈಯಲ್ಲಿ ಹಣತೆಯೆತ್ತಿ, ಹನಿಗೂಡಿದ ಕಣ್ಣಿನ ಕುಡಿಬೆಳಕೆತ್ತಿ ನೋಡಿದಳು.

ಚೀರಿದಳು!...

ಮಲ್ಲಿಗೆ ಮಂಟಪದಲ್ಲಿ ಹೆಡೆಯಾಡಿಸಿದ ಸರ್ಪವೇ ಬುದ್ಧನ ಶಿರಸ್ಸಿನ ಮೇಲೆಯೂ ಹೆಡೆ ಬಿಚ್ಚಿ ಕುಳಿತಿತ್ತು!!

ಚೀರಿದವಳು ಎದ್ದು ಹೆಜ್ಜೆ ಹಿಂದೆ ಸರಿದು ಅವಾಕ್ಕಾಗಿ ನಿಂತಳು...

ಬುದ್ಧನ ವಿಗ್ರಹ ಬಿದ್ದು 'ಝಲ್' ಎಂದು ಚೂರು ಚೂರಾಯಿತು– ಹಾವು ಮಿಂಚಿನಂತೆ ಹರಿದು ಹೊರಗೆಲ್ಲೋ ಮಾಯವಾಯಿತು.

ಬೆಂಕಿಯಲ್ಲಿ ಹೊರಳಿದಂತಾಗಿ ಹೊರಗೋಡಿ ಬಂದು ಗಿಣಿಯೊಡನೆ ಚೆಲುವೆ ಕಾಮಾಕ್ಷಿ ಚೀರಿದಳು–

'ರಾಮೂ... ರಾಮೂ...'

* * *

'ರಾಮೂ... ರಾಮೂ'

ಗಾಡಾಂಧಕಾರದಲ್ಲಿ ಎದೆ ನಡುಗುವಂತೆ ಕರೆ ಬರುತ್ತಿದೆ.

'ರಾಮೂ... ರಾ...ಮೂ...!'

ಕತ್ತಲಿನಲ್ಲಿ ಜೀರ್ಣವಾದರೂ ಬುದ್ಧನಂತೆ ಕೂತ ಪರ್ವತ ಕರೆಯುತ್ತಿದೆಯೆ? ಪಂಜರದ ಗಿಣಿಯ ಧ್ವನಿಗಿದು ಪ್ರತಿಧ್ವನಿಯೆ? ಪರ್ವತ ನಗುತ್ತಿದೆಯೆ?

ರಾ...ಮೂ...!'

ಪರ್ವತ ಕಾಮಾಕ್ಷಿಯ ಬಳಿ ಹೋಗಬೇಡವೆಂದು ಹೆದರಿಸುತ್ತಿದೆಯೆ? ಹೊರಗೆಲ್ಲ ಗಾಡಾಂಧಕಾರ... ಒಳಗೂ ಅಂಧಕಾರ. ಒಳಗಿನಾಳದೊಳಗೂ ಅಂಧಕಾರ... ಬುದ್ಧ ಎಲ್ಲಿ ಹೋದ? ಅವನು ಹೊರಟ ದಿನ ವೈಶಾಖ ಶುದ್ಧ ಪೂರ್ಣಿಮೆ. ಹೊರಗೆಲ್ಲ ಹಾಲೋಹಾಲು... ಆದರೆ ಇಂದು ಅಂಧಕಾರ. ಎಷ್ಟು ಜನುಮ ಜನುಮವನ್ನೆತ್ತಿ ವೈಶಾಖ

ಶುದ್ಧಪೂರ್ಣಿಮೆಗಾಗಿ ಕಾಯಬೇಕು? ಎಷ್ಟು ಜನುಮಗಳ ತನಕ ಸಹಿಸಬೇಕು, ಈ ಮಾಯಾಪಾಶ... ಈ ಗಾಡಾಂಧಕಾರ...

ಈ ಗಾಡಾಂಧಕಾ....

ಓಹ್ ಅಲ್ಲ ಅಲ್ಲ... ಬೆಳಕು. ಬೆಳಕು... ಅವನ ಜೀವನದ ಏಕಮಾತ್ರ ಬೆಳಕು ಕಾಮಾಕ್ಷಿ– ಎದಿರು ಓಡಿ ಬಂದು ನಿಂತಿರುವ ಅಬಲೆ ಕಾಮಾಕ್ಷಿ...

* * *

ಹೇಗೆ ನಡುಗುತ್ತ ಬಾಲೆ ಕಾಮಾಕ್ಷಿ ಅವನನ್ನಪ್ಪಿ ಎದೆಯ ಮೇಲೆ ಮುಖವಿಟ್ಟು, ಬಿಕ್ಕಿ ಬಿಕ್ಕಿ ಅಳುತ್ತಿದ್ದಳು.

ರಾಮು ಅವಳ ಕಣ್ಣೊರಿಸಿ ಮೆಲ್ಲನೆ ಗುಡಿಸಲಿನ ಕಡೆ ನಡೆದ... ಹೂ ಚೆಲ್ಲಿದ ಸವೆದ ಹಾದಿಯಲ್ಲಿ ಕಾಮಾಕ್ಷಿಯ ಜೊತೆ ನಡೆಯುತ್ತ ಗಗನದೆಡೆ ನೋಡಿದ...... ಗಾಡಾಂಧಕಾರ... 'ಎಲ್ಲಿ ಹೋದ ಬುದ್ಧ?'

'ಬುದ್ಧ ಒಡೆದು.. ಚೂರು... ಚೂರು'

ಕಾಮಾಕ್ಷಿ ಬಿಕ್ಕುತ್ತ ಹಗುರವಾದ ಎದೆಯಿಂದ ನುಡಿದಳು...

ಆದರೆ ರಾಮು ಭಾರವಾದ ಎದೆಯಿಂದ ನಿಟ್ಟುಸಿರಿಟ್ಟು ಮೆಲ್ಲಗೆ ನುಡಿದ.

"ಹೌದು ಎರಡು ಕ್ಷಣವಿದ್ದು ಹೊರಟುಹೋದ... ಈಗ ಚೂರು... ಚೂರು"

ಕಾಮಾಕ್ಷಿ ಮೆಲ್ಲನೆ ಅವನನ್ನಪ್ಪಿ ಸಂತೃಕೆಯ ಧ್ವನಿಯಲ್ಲಿ ಹೇಳಿದಳು–

"ಮೆಲ್ಲಗೆ ಮಂಟಪದ ಬಳಿ ಹೆಡೆಯಾಡಿಸಿದ ಸರ್ಪವೇ ಬುದ್ಧನ ಶಿರಸ್ಸಿನ ಮೇಲೂ ಹೆಡೆಯಾಡಿಸುತ್ತಿತ್ತು..."

–ಏನೋ ಅರ್ಥವಾದಂತಾಗಿ ನಡುಗಿ, ರಾಮು ಕಾಮಾಕ್ಷಿಯ ಜೊತೆ ಗುಡಿಸಲಿಗೆ ಬಂದು ಪಂಜರದ ಕಡೆ ನೋಡಿದ...

* * *

ಹಾರಲು ಮರೆತ ಹಕ್ಕಿ ಪಂಜರದ ಮೇಲೆ ಕೂತಿತ್ತು.

ಗಿಣಿಯನ್ನು ಪಂಜರದ ಒಳಗಿಟ್ಟು ಬಾಗಿಲನ್ನು ನಿಧಾನವಾಗಿ ಹಾಕಿ ಕಾಮಾಕ್ಷಿಯ ಜೊತೆ ಒಳಗೆ ಹೋಗಿ ಗುಡಿಸಿಲಿನ ಬಾಗಿಲನ್ನು ಹಾಕಿಕೊಂಡ... 'ಪಂಜರದ ಗಿಣಿ' ಎಂದು ತನ್ನಲ್ಲೇ ಅಂದುಕೊಂಡು ಒಡೆದ ಚೂರು ಚೂರಾದ ಬುದ್ಧನೆಡೆ ನೋಡಿದ...

ಬಳಿಯಲ್ಲಿ ನಿಂತಿದ್ದ ಕಾಮಾಕ್ಷಿಯ ಕಡೆ ಮೆಲ್ಲನೆ ಮುಖ ತಿರುಗಿಸಿದ...

ನಿಧಾನವಾಗಿ ನಿಟ್ಟುಸಿರೆಳೆದ...

**ಯು.ಆರ್. ಅನಂತಮೂರ್ತಿ :** ಅನಂತಮೂರ್ತಿಯವರು ಶಿವಮೊಗ್ಗ ಜಿಲ್ಲೆಯ ಮೇಳಿಗೆಯಲ್ಲಿ, 1932ರಂದು ಜನಿಸಿದರು, ಶ್ರೇಷ್ಠ ಸೃಜನಶೀಲ ಚಿಂತಕರಾದ ಇವರು ಮೈಸೂರು ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ ಮತ್ತು ಬರ್ಮಿಂಗ್ ಹ್ಯಾಂ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪದವಿಯನ್ನು ಪಡೆದ ಇವರು ಹಲವು ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದರು. ಅನಂತರ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕೇರಳದ ಕೊಟ್ಟಾಯಂನ ಮಹಾತ್ಮಗಾಂದಿ ವಿಶ್ವವಿದ್ಯಾಲಯದಲ್ಲಿ ಕುಲಪತಿಗಳಾಗಿ ಸೇವೆಸಲ್ಲಿಸಿದರು. ಅಮೆರಿಕದ ಅಯೋವಾ ವಿಶ್ವವಿದ್ಯಾಲಯ, ಟಫ್ಟ್ಸ್ ವಿಶ್ವವಿದ್ಯಾಲಯ, ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯ, ದೆಹಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯ– ಮೊದಲಾದ ಕಡೆ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ದೇಶ ದೇಶಗಳ ಅನೇಕ ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸಗಳನ್ನು ನೀಡಿದ್ದಾರೆ. ನ್ಯಾಷನಲ್ ಬುಕ್ ಟ್ರಸ್ಟ್ ನ ಅಧ್ಯಕ್ಷರು, ಕೇಂದ್ರಸಾಹಿತ್ಯ ಅಕಾಡಮಿಯ ಅಧ್ಯಕ್ಷರು ಆಗಿದ್ದ ಇವರು ಕರ್ನಾಟಕದ ಸಾಹಿತ್ಯ ಅಕಾಡಮಿ ಪ್ರಶಸ್ತಿ (1984) ಮಾಸ್ತಿಪ್ರಶಸ್ತಿ (1994) ಮತ್ತು ದೇಶದ ಅತ್ಯುನ್ನತ ಗೌರವವಾದ ಜ್ಞಾನಪೀಠ ಪ್ರಶಸ್ತಿ (1994)ಯನ್ನು ಪಡೆದಿದ್ದಾರೆ.

# 2. ಒಂದು ಬಾಗಿಲು

–ಪಿ. ಲಂಕೇಶ್

ನಾನು ಹೀಗೆ ಅನಗತ್ಯ ತೊಂದರೆಗಳಲ್ಲಿ ಸಿಕ್ಕಿ ಹಾಕಿಕೊಳ್ಳಬಹುದೆಂದು ಎಣಿಸಿರಲಿಲ್ಲ. ಸಂಕ್ರಾಂತಿಯ ಹೊತ್ತಿಗೆ ಹೂ ಅರಳಿಸಿ ಉಗಾದಿಗೆ ಎಳೆಯ ಕಾಯಿಬಿಡುವ ಮಾವಿನ ಮರಗಳು ನನ್ನ ಪ್ರಿಯವಾದ ಜೀವಿಗಳಾಗಿದ್ದವು. ಮಾವಿನ ಮರದ ಒಂದು ಟೊಂಗೆ ಹೋದರೂ ಬೇಸರವಾಗುತ್ತಿತ್ತು. ಈ ನನ್ನ ತೋಟ ನನ್ನದು. ಇಲ್ಲಿಯ ಹೀಚು, ಕಾಯಿ ಕೂಡ ಕಳುವಾಗಬಾರದು. ಇಲ್ಲಿ ಬಂದು ಕೂತುಕೊಳ್ಳಲು, ಓದಲು ಒಂದು ಮನೆ ಕಟ್ಟಿಸಬೇಕು. ಈ ಮನೆ ಸಂಕ್ರಾಂತಿಗೆ ಮುನ್ನ ಎದ್ದು ನಿಲ್ಲಬೇಕು. ಮನೆಕಟ್ಟುವ ಕೆಲಸದಲ್ಲಿ ತೊಡಗಿದ ಜನ ಮಾವಿನಕಾಯಿ ಕಿತ್ತುಕೊಂಡು, ಆ ಬಗ್ಗೆ ನಾನು ರೇಗಿ ದೊಡ್ಡ ರಾದ್ಧಾಂತವಾಗಕೂಡದು. ಆದ್ದರಿಂದ ಮನೆ ಎಷ್ಟೇ ಚೆಂದವಾದರೂ, ಎಷ್ಟೇ ಸಾಲವಾದರೂ ಅದನ್ನು ಬೇಗ ಕಟ್ಟಿಸಿ ಮುಗಿಸಬೇಕು. ಹೀಗೆಂದು ಮನೆ ಕಟ್ಟುವ ಕೆಲಸ ಶುರುವಾಯಿತು.

ಆದರೆ ಕಟ್ಟಿಸುತ್ತಾ ಮರದ ಕೆಳಗೆ ಕೂತು ಚಿಂತಿಸುತ್ತೇನೆ. ಈ ಮರಕ್ಕಿಂತ ಹೆಚ್ಚು ನೆಮ್ಮದಿಯನ್ನು ಮನೆ ನೀಡಲಾರದು. ಈ ಮರವೇ ಏಕೆ ಬೇಕಿತ್ತು. ಕಾಡಿನಲ್ಲಿ ಬೆಳೆದ ಅರಳೀಮರ ನನ್ನನ್ನು ತಿರಸ್ಕರಿಸುತ್ತಿತ್ತೆ, ನನ್ನ ನೆರಳಲ್ಲಿ ಕುಳಿತುಕೊಳ್ಳಬೇಡಿ ಅನ್ನುತ್ತಿತ್ತೆ. ನನ್ನ ಮರದ ಕೆಳಗೆ ಕೂರುವ ಸುಖ ಹೇಗೆ ಉತ್ತಮ? ಐವತ್ತು ವರ್ಷ ಮೀರಿರುವ ನಾನು ಹೆಚ್ಚೆಂದರೆ ಇನ್ನೆಷ್ಟು ವರ್ಷ ಈ ನೆಲದ ಮೇಲೆ ಇರಬಹುದು... "ಬನ್ನಿ ಸಾರ್, ಮೆಟ್ಟಿಲಿಗೆ ಈ ಸ್ಟೈಲ್‌ನಲ್ಲಿ ಕಲ್ಲು ಹಾಕಿದರೆ ನಿಮಗೆ ಒಪ್ಪಿಗೆಯೇ?" ಎಂದು ಮೇಸ್ತ್ರಿದಾಸ್ ಕರೆದ. ಎದ್ದು ಆತನ ಬಳಿಗೆ ಹೋದೆ. ಸುತ್ತ ಜನ ಕೆಲಸ

ಮಾಡುತ್ತಿದ್ದರು. ಪೆರುಮಾಳ್ ಇಟ್ಟಿಗೆ ಚೂರು ಹಾಕುತ್ತ ಮಾಳಿಗೆಗೆ ಸುರಕಿ ಹಾಕುತ್ತಿದ್ದ; ಹತ್ತಾರು ಜನ ಹೆಣ್ಣಾಳುಗಳು ಇಟ್ಟಿಗೆ, ಸುಣ್ಣ ಹೊರುತ್ತಿದ್ದರು. ಮೇಸ್ತ್ರಿದಾಸ್ ನನಗೆ ತೋರಿಸುವುದು ಕೂಡ ಸುಮ್ಮನೇ, ಆಮೇಲೆ ತಾನು ತೋರಿಸಿದ್ದೆ ಎಂದು ಹೇಳಿಕೊಳ್ಳುವುದಕ್ಕೆ, ತಪ್ಪಾದರೆ ನನ್ನ ಮೇಲೆ ಹಾಕುವುದಕ್ಕೆ, ಚೆನ್ನಾಗಿದ್ದರೆ ಮೆಚ್ಚಿಗೆ ಪಡೆಯಲಿಕ್ಕೆ.

ಇದು ಗೊತ್ತಿದ್ದುದರಿಂದ ಸುತ್ತ ಕೆಲಸ ಮಾಡುತ್ತಿದ್ದವರನ್ನು ಗಮನಿಸಿದೆ. ಅವರಲ್ಲೊಬ್ಬಳು ಮುದುಕಿ ಎಲ್ಲರಿಗಿಂತ ಹೆಚ್ಚು ಚುರುಕಾಗಿ ಕೆಲಸ ಮಾಡುತ್ತಿದ್ದಳು. ಯಮುನಮ್ಮ, ರಾಜಮ್ಮ ಮುನಿಯಮ್ಮ... ಹೀಗೆ ಕೇಳಿಸುತ್ತಿದ್ದ ಎಲ್ಲ ಹೆಸರಿಗಿಂತ 'ಚಿನ್ನಮ್ಮಾ' ಎಂದು ಪೆರುಮಾಳ್ ಕರೆಯುವುದು ಜಾಸ್ತಿಯಾಗಿತ್ತು. ಆ ಮುದುಕಿಯ ಹೆಸರು ಚಿನ್ನಮ್ಮ. ಐವತ್ತರಿಂದ ಎಪ್ಪತ್ತು ವರ್ಷದೊಳಗೆ ಎಷ್ಟಾದರೂ ವಯಸ್ಸಾಗಿರಬಹುದಾದ ಈ ಹೆಂಗಸು ಎಂದು ಸರಿಯಾಗಿ ನೋಡಿದೆ. ಕುಳ್ಳಿ, ಒಂದು ಕಣ್ಣಲ್ಲಿ ಹೂವಿತ್ತು. ಪೆರುಮಾಳ್ ಕೂಡ ಬೇಕೆಂತಲೇ ಆಕೆಯನ್ನ 'ಬೇಗ ಬೇಗ' ಎಂದು ತೆಲುಗಿನಲ್ಲಿ ಕರೆಯುತ್ತಿದ್ದ. ಅವನ ಧ್ವನಿಯಲ್ಲಿ ತಮಾಷೆ ಮತ್ತು ಕೀಟಲೆ ಇತ್ತು. ಮುದುಕಿಯ ಮುಖದಲ್ಲಿ ತೆಳುನಗೆ ಇತ್ತು. ದಾಸ್ ಹತ್ತಿರ ಕೇಳಿದೆ, 'ಯಾಕೆ ಈ ಹೆಂಗಸು ಎಲ್ಲರಿಗಿಂತ ಹೆಚ್ಚು ಚುರುಕಾಗಿ ಕೆಲಸ ಮಾಡ್ತಿದೆ?' 'ಯಾಕಿಲ್ಲ ಸಾರ್, ಗಟ್ಟಿಯಾಗಿರುವವರು ಸ್ವಲ್ಪ ಕಡಿಮೆ ಮಾಡಿದರೂ ಮತ್ತೆ ಕೆಲಸಕ್ಕೆ ಕರೀತಾರೆ, ಮುದುಕಿ ಕಡಿಮೆ ಕೆಲಸ ಮಾಡಿದ್ರೆ ನಾಳೆ ಯಾರೂ ಕೆಲಸಕ್ಕೆ ಕರೆಯೊಲ್ಲ' ಅಂದ. ಕುಳ್ಳನೆ ಮುದುಕಿ ಇಟ್ಟಿಗೆ ಹೊತ್ತು ಮಾಳಿಗೆಗೆ ಓಡುತ್ತಲೇ ಇತ್ತು

ಕೆಲಸದಲ್ಲಿ ಎಂಥ ಆತ್ಮಾಭಿಮಾನವಿದೆ, ಇತ್ಯಾದಿಯಾಗಿ ಚಿಂತಿಸಿದೆ. ಕೆಲಸದಲ್ಲಿ ಕಷ್ಟ, ನೋವು, ದೇಹ ಬಿದ್ದುಹೋಗುವ ಅಪಾಯಗಳೆಲ್ಲ ಇವೆ. ಅದು ಕೂಡ ನನಗೆ ಗೊತ್ತಿತ್ತು. "ಸ್ವಾಮಿ..." ಎಂಬ ಹೆಂಗಸಿನ ಧ್ವನಿ ನನ್ನನ್ನು ಎಚ್ಚರಿಸಿತು.

"ಏನು?" ಅಂದೆ.

ಚಿನ್ನಮ್ಮ, ನಾನು ತಿಳಿದುಕೊಂಡದ್ದಕ್ಕಿಂತ ಹೆಚ್ಚು ತ್ರಾಣ ಅವಳಲ್ಲಿ ಇದ್ದಂತಿತ್ತು. ಬಿಳಿಕೂದಲು, ಸುಕ್ಕುಮುಖ, ಕುರುಡುಕಣ್ಣು ಇವನ್ನೆಲ್ಲ ನಾನು ಗಮನಿಸುತ್ತಿದ್ದಾಗ ಚಿನ್ನಮ್ಮ ತೆಲುಗಿನಲ್ಲಿ ಏನೇನೋ ಹೇಳುತ್ತ ಕೈಚಾಚಿ ಬೇಡಿಕೊಂಡಳು. ನನಗೆ ಅವಳ ಭಾಷೆ ತಿಳಿಯಲಿಲ್ಲ. ಕೂಡಲೆ ಯಾರಾದರೊಬ್ಬರನ್ನು ಕರೆಯುವ ಇಷ್ಟ ಕೂಡ ಆಗಲಿಲ್ಲ. ತಾನು ಹೇಳುತಿದ್ದುದು ನನಗೆ ಗೊತ್ತಾಗುತ್ತಿಲ್ಲವೆಂದು ತಿಳಿದು ನಿಂತಳು. "ಹೋಗು ಕೆಲಸ ಮಾಡು" ಅಂದೆ. ಪೆರುಮಾಳ್ ಎತ್ತರದ ಕಿಚಾಯಿಸುವ ಧ್ವನಿಯಲ್ಲಿ ಚಿನ್ನಮ್ಮನನ್ನು ಕರೆದ, ಆಕೆ ಹೋದಳು. ಕುತೂಹಲದಿಂದ ತೆಲುಗು ಬರುವ ಮುನಿರಾಜುವಿಗೆ "ಆ ಮುದುಕಿಯನ್ನು ಕರಿ" ಅಂದೆ.

ಆತನಿಗೆ ಅರ್ಥವಾಗಲಿಲ್ಲ. "ಆ ಮುದುಕೀನ ಇಲ್ಲಿ ಕರಿಯಲೇ" ಎಂದು ಎಲ್ಲರ ಸದ್ದು ಮೀರುವಂತೆ ಕೂಗಿದೆ. ಮುನಿರಾಜು ಇದೆಲ್ಲ ಮೋಜೆನ್ನುವಂತೆ ನಗುತ್ತ ಚಿನ್ನಮ್ಮನನ್ನು ಕರೆದುಕೊಂಡು ಬಂದ.

"ಆಕೆ, ಅದೇನೋ ಹೇಳ್ತಾಳೆ– ಕೇಳು" ಅಂದೆ. ತನ್ನ ಜೀವನದಲ್ಲಿ ದುಭಾಷಿಯಾಗುತಿದ್ದುದು ಇದೇ ಮೊದಲ ಬಾರಿಯಾದ್ದರಿಂದ ಮುನಿರಾಜುವಿಗೆ ಏನು ಮಾಡಬೇಕೆಂಬುದು ಗೊತ್ತಾಗದೆ ಅವಳತ್ತ ನೋಡಿದ. ಅವಳು ತೆಲುಗಿನಲ್ಲಿ

ನನಗೆ ಮುಂಚೆ ಹೇಳಿದ್ದನ್ನೆಲ್ಲ ಹೇಳಿ ಅವನಿಗೆ ಕೈಮುಗಿಯತೊಡಗಿದಳು. "ಏನಂತೆ?" ಅಂದೆ.

"ಆಕೆಗೆ ಗಂಡ, ಮಕ್ಕಳು ಯಾರೂ ಇಲ್ಲವಂತೆ ಸಾರ್. ಗುಡಿಸಲು ಕಟ್ಟಿಕೊಂಡಿದ್ದಾಳಂತೆ, ಅದಕ್ಕೆ ಬಾಗ್ಲಿಲ್ವಂತೆ, ಇಲ್ಲಿ ನಿಮಗೆ ಬ್ಯಾಡ್ವಾದ ಹಲಗೆಗಿಲಗೆ ಕೊಟ್ಟರೆ ಬಾಗ್ಲಿಗಾಗುತ್ತೆ ಅಂತಾಳೆ" ಅಂದ.

ನೋಡಿದ ಒಂದೆರಡೇ ಗಂಟೆಯಲ್ಲಿ ಶುರುವಾದ ಬೇಡಿಕೆಯನ್ನು ಕುರಿತು ಯೋಚಿಸಿದೆ. ಆಕೆ ಕೆಲಸಕ್ಕೆ ಹಿಂದಿರುಗಿದಳು. ಅಲ್ಲಿದ್ದವನೊಬ್ಬನನ್ನು ಅವಳ ಊರು ಯಾವುದು ಅಂತ ವಿಚಾರಿಸಿದೆ. ಊರ ಹೆಸರು ಜಟ್ಟಿಗೆರೆ. ಯಾರಿಗೂ ಆಕೆಯ ಊರು ಕೂಡ ಮುಖ್ಯವಾದಂತೆ ಕಾಣಲಿಲ್ಲ. ಅವಳ ಕುಟುಂಬದ ಬಗ್ಗೆ ಕೂಡ ನಿರಾಸಕ್ತಿಯಿಂದಲೇ ಏನೇನೋ ಹೇಳಿದರು. ಆಕೆ ಒಬ್ಬಂಟಿ ಎಂಬುದು ನಿಜ, ಗಂಡ ಯಾವುದೋ ಫ್ಯಾಕ್ಟರಿಯಲ್ಲಿ ಜವಾನನಾಗಿದ್ದು, ಕುಡುಕನಾದ ಆತ ಅವಳನ್ನು ಬಿಟ್ಟು ಎಷ್ಟೋ ವರ್ಷವಾಗಿತ್ತು.

ಮೊನ್ನೆ ತಾನೆ ಗುಡಿಸಲು ಕಟ್ಟಿಕೊಂಡಿದ್ದರೆ, ಈ ಒಕ್ಕಣ್ಣಿನ ಒಬ್ಬಂಟಿ ಮುದುಕಿ ಈಗತಾನೆ ಸರಿದ ಮಳೆಗಾಲ ಹೇಗೆ ಕಳೆದಳು, ಎಲ್ಲಿ ಕಳೆದಳು, ಕಾಯಿಲೆಯಾದಾಗ ಯಾರು ನೋಡಿಕೊಳ್ಳುತ್ತಾರೆ, ಕೂಲಿ ಸಿಕ್ಕದಿದ್ದಾಗ ಏನು ಮಾಡುತ್ತಾಳೆ.

ಕಾಂಕ್ರಿಟ್ ಹಾಕಲು ಸೆಂಟರಿಂಗ್‌ಗೆ ತಂದ ಹಲಗೆಗಳಿವೆ. ಅವನ್ನು ಸಾಗಿಸುವ ಬದಲು ಇಲ್ಲೇ ಬಿದ್ದು ಹಾಳಾಗುವುದೇ ಹೆಚ್ಚು. ಮೇಸ್ತ್ರೀ ದಾಸನನ್ನು ಕರೆದೆ.

"ಮೇಸ್ತ್ರಿ, ಆ ಮುದುಕಿ ಒಂದು ಮನೆ ಕಟ್ಟಿದೆಯಂತೆ. ಅದಕ್ಕೆ ಬಾಗಿಲಿಲ್ಲವಂತೆ, ಏನು ಮಾಡೋಣ?" ಅಂದೆ.

ದಾಸ್‌ಗೆ ಅರ್ಥವಾಗಲಿಲ್ಲ, "ಹಲಗೆ ಬೇಕು ಅಂತ ಕೇಳಿದೆ. ಹಲಗೆ ಕೊಟ್ಟರೆ ಆಕೆ ಬಾಗಿಲನ್ನು ಹೇಗೆ ಮಾಡಿಸಿಕೊಳ್ತಾಳೆ? ಅದಕ್ಕೆ ಫ್ರೇಂ ಬೇಕಲ್ಲ? ಏನು ಮಾಡ್ತೀರಿ?" ಅಂದೆ, "ಆ ಬಾಗಿಲ ಅಳತೆ ಗೊತ್ತಿದ್ದರೆ ಮಾಡಿಸಬಹುದು" ಅಂದ ದಾಸ್. ಆತನೇ ಆ ಮುದುಕಿಯ ಜಟ್ಟಿಗೆರೆಗೆ ಹೋಗಿ ಅಳತೆ ತೆಗೆದುಕೊಂಡು ಬಂದು ಮಾಡಿಕೊಡಬೇಕು ಎಂದು ಹೇಳಲು ಹಿಂಜರಿದೆ. ಆದರೆ ದಾಸ್ ಒಂದು ಆಕ್ಷೇಪಣೆ ತೆಗೆದ; "ವಾಸ್ಕಲ್‌ಗೆ ಬೇಕಾದ ಮರ ಇಲ್ಲಿ ಇಲ್ವಲ್ಲ, ಏನು ಮಾಡೋದು ಸಾರ್?"

"ಅಲ್ಲಿ, ನಮ್ಮ ವಾಸ್ಕಲ್‌ಗಳ ಮರವನ್ನೇ ಬಳಸಿಕೊಂಡರಾಯಿತು" ಎಂದು, "ಜಟ್ಟಿಗೆರೆಗೆ ಹೋಗಿ ಆ ಮುದುಕಿಯ ಮನೆಯ ಬಾಗಿಲ ಅಳತೆ ತರ್ತಿರಾ?" ಅಂದೆ. ಆತನಿಗೆ ಆಕಾಶ ತಲೆಮೇಲೆ ಬಿದ್ದಂತಾಗಿರಬೇಕು. ಅವನಿಗೆ ತುರ್ತಾಗಿ ಇರುವ, ಇಲ್ಲದ ಕೆಲಸಗಳೆಲ್ಲ ಒಟ್ಟಾಗಿ ಕಾಡತೊಡಗಿದವು. ಅವನ್ನೆಲ್ಲ ಹೇಳಿ ಜಾರಿಕೊಳ್ಳತೊಡಗಿದ. ಅದರ ಜೊತೆಗೆ ಒಂದು ವಾಸ್ಕಲ್‌ಗೆ ನಮ್ಮ ಸಾಗುವಾನಿ ಮರ ಉಪಯೋಗಿಸಿದರೆ ಆಗುವ ಖರ್ಚು, ಮರಗೆಲಸದಲ್ಲಿ ಆಗುವ ವಿಳಂಬ, ಅದನ್ನು ತೋಟಕ್ಕೆ ಸಾಗಿಸಿಕೊಂಡು ಬರುವ ಕಿರಿಕಿರಿಯನ್ನೆಲ್ಲ ವರ್ಣಿಸತೊಡಗಿದ. ದಾಸ್ ಜಟ್ಟಿಗೆರೆಗೆ ಹೋಗುವುದಿಲ್ಲವೆನ್ನುವುದು ತಿಳಿದಂತಾಯಿತು.

ಚಿನ್ನಮ್ಮ ಮತ್ತು ನನಗೆ ದುಭಾಷಿಯಾಗಿದ್ದ ಮುನಿರಾಜುವನ್ನು ಕರೆದು ವಿಷಯ ತಿಳಿಸಿದೆ. ಆತ ದಾಸ್‌ನಷ್ಟು ಪುರುಸೊತ್ತಿಲ್ಲದ ಆಸಾಮಿಯಲ್ಲದಿದ್ದರೂ ತನ್ನದೇ ಆದ ಹಳ್ಳಿಗನ ವರಸೆಯಲ್ಲಿ; ನನಗೆ ಸ್ವಲ್ಪ ಹುಚ್ಚು ಹಿಡಿದಿರಬಹುದು ಎನ್ನುವಂತೆ ನೋಡಿದ.

ಆತನಿಗೆ ಮತ್ತೆ ಚಿನ್ನಮ್ಮನಿಗೆ ನಾನು ಸಾಗುವಾನಿ ಮರದ ವಾಸ್ಕಲ್, ಕದ ಮಾಡಿಸಿಕೊಡುವ ವಿಷಯ ಹೇಳಿದೆ. ನನಗೆ ಆಕೆಯ ತೆಲುಗು ಬರುವುದಿಲ್ಲವಾದ್ದರಿಂದ ಮತ್ತು ನಾನು ಹೋದರೆ ಜಟ್ಟಿಗೆರೆಯ ಜನ ಚಿನ್ನಮ್ಮನ ಬಗ್ಗೆ ಯಾವುದೋ ತಪಾಸಣೆಗೆ ಬಂದಂತೆ ತೆಲುಗಿನಲ್ಲಿ ಮಾತಾಡಿಕೊಳ್ಳಬಹುದಾದ್ದರಿಂದ ನಾನು ಆಕೆಯ ಮನೆಯ ಹತ್ತಿರ ಹೋಗುತ್ತಿಲ್ಲವೆಂದು ಹೇಳಿದೆ. ಆತ ನನ್ನ ಹುಚ್ಚನ್ನು ಅರ್ಥಮಾಡಿಕೊಂಡವನಂತೆ ತಲೆಯಲ್ಲಾಡಿಸಿ, "ಆಗ್ಲಿ ಸಾರ್, ಇವತ್ತು ಹೋಗಿ ಅಳತೆ ತರ್ತಿನಿ, ಆದರೆ–ಆಕೆಯ ಮನೆಗೆ ವಾಸ್ಕಲ್ ಇಡೋಕೆ ಸರಿಯಾದ ಗೋಡೆಗಳೇ ಇಲ್ಲದಿದ್ದರೆ ?" ಅಂದ.

"ಅದೆಲ್ಲ ಇರಲಿ, ಸೂರು ಎಷ್ಟು ಎತ್ತರವಿದೆ, ಎಂಥ ಬಾಗಿಲಾದರೆ ಸರಿ ಹೋಗುತ್ತೆ ಅಂತ ನೋಡ್ಕೊಂಡು ಬಾ. ಮಿಕ್ಕಿದ್ದೆಲ್ಲ ನಾನು ನೋಡಿಕೋಳೇನೆ" ಅಂದೆ.

ತನ್ನ ಬೆನ್ನ ಹಿಂದೆ ತನ್ನ ಬಗ್ಗೆ ಇಷ್ಟೆಲ್ಲ ಮುತುವರ್ಜಿ ಆದದ್ದು ಚಿನ್ನಮ್ಮನಿಗೆ ಗೊತ್ತಿರಲಿಲ್ಲ. ತನ್ನಷ್ಟಕ್ಕೇ ತಾನು ಕೆಲಸ ಮಾಡುತ್ತಿದ್ದಳು. ಆದರೆ ಮುನಿರಾಜು ಕ್ಷಣಾರ್ಧದಲ್ಲಿ ವಿಷಯವನ್ನು ಅಲ್ಲಿ ಕೆಲಸ ಮಾಡುತ್ತಿದ್ದ ಎಲ್ಲರಿಗೂ ತಿಳಿಸಿ ನಕ್ಕಿದ್ದ. ನಾನು ತಮಾಷೆಗೆ ಹಾಗೆ ಹೇಳುತ್ತಿರಬಹುದೆಂದು ಕೆಲವರು, ಸ್ವಲ್ಪ ತಲೆ ಕೆಟ್ಟಿರಬಹುದೆಂದು ಕೆಲವರು ಕನ್ನಡವನ್ನೊಳಗೊಂಡು ತಮ್ಮ ಮಾತೃಭಾಷೆಯಲ್ಲಿ ಮಾತಾಡಿಕೊಳ್ಳುತ್ತಿದ್ದುದು ಕೇಳಿಸಿತು. ಸಂಜೆಯಾದಂತೆ ಕೆಲವರು ಮನೆಯ ಕಡೆ ಹೋದರು; ಮುನಿರಾಜು ಚಿನ್ನಮ್ಮನ ಜೊತೆಗೆ ಹೋದ. ಮನೆಗೆ ಹೋಗದ ನಾಲ್ಕೈದು ಜನ ನನ್ನಲ್ಲಿ ಬಂದು; ವಿಧವಿಧವಾದ ಬೇಡಿಕೆ ಮಂಡಿಸತೊಡಗಿದರು. ಒಬ್ಬನ ದನದ ಕೊಟ್ಟಿಗೆ ಮುರಿದುಬಿದ್ದಿತ್ತು. ಇನ್ನೊಬ್ಬ ಸಿಮೆಂಟನ್ನು ಕೊಂಡುಕೊಳ್ಳಲಾಗದೆ ಗೋಡೆ

ಮುಗಿಸಲಾಗಿರಲಿಲ್ಲ, ಮತ್ತೊಬ್ಬಳ ಹಸು ಗಬ್ಬವಾಗಿದ್ದುದರಿಂದ ಮನೆಯಲ್ಲಿ ಹೇಳಲಾರದಷ್ಟು ತಾಪತ್ರಯವಾಗಿತ್ತು.

ನಾನು ಚಿನ್ನಮ್ಮನಿಗೆ ಸಹಾಯವಾಗುವ ನನ್ನ ಹುಚ್ಚನ್ನು ಅರ್ಥಮಾಡಿಕೊಳ್ಳುತ್ತ, ಆದರೆ ನನ್ನ ಹಠವನ್ನು ಬಿಟ್ಟುಕೊಡಕೂಡದೆಂದು ಚುರುಕಾಗಿ ಯೋಚಿಸತೊಡಗಿದೆ. ಗಟ್ಟಿಗಂಟಲಲ್ಲಿ ಮಾತಾಡತೊಡಗಿದೆ; "ನಿಮಗೇನಾದರೂ ಬುದ್ದಿಗಿದ್ದಿ ಇದೆಯೆ? ಆ ಚಿನ್ನಮ್ಮ ಒಬ್ಬಂಟಿಯಾದ ಮುದುಕಿ, ಕಷ್ಟಪಟ್ಟು ಒಂದು ಗುಡಿಸಲು ಕಟ್ಟಿಕೊಂಡಿದೆ, ದಿಕ್ಕಿಲ್ಲದ ಕುರುಡಿಯಾದ ಆಕೆಗೆ ಒಂದು ಚಿಕ್ಕ ಬಾಗಿಲು ಹಾಕಿಸಿ ಕೊಡೋದಕ್ಕೂ, ದುಡಿಯಲು ತ್ರಾಣವಿರುವ, ಮಕ್ಕಳು ಮರಿ ಇರುವ ನಿಮಗೆ ಸಹಾಯ ಮಾಡೋದಕ್ಕೂ ವ್ಯತ್ಯಾಸವಿಲ್ಲವೆ? ನೀವು ಈ ರೀತಿ ಯೋಚಿಸೋದಾದ್ರೆ ನಾಳೆಯಿಂದ ಕೆಲಸಕ್ಕೆ ಬರಬೇಡಿ. ದಾಸ್‌ಗೆ ಹೇಳೇನೆ" ಅಂದೆ. "ಬೇಡಿ ಸಾರ್ ಪರವಾಗಿಲ್ಲ" ಅಂದು ಅಲ್ಲಿಂದ ಮಾಯವಾದರು. ಮುನಿರಾಜು ಚಿನ್ನಮ್ಮನ ಮನೆಯ ಅಳತೆ ತಂದು ನಗುತ್ತ ಹೇಳಿದ, "ಅದು ಮನೆಯಲ್ಲ ಸಾರ್, ಗುಡ್ಡು, ಸೂರು ನಾಲ್ಕಡಿ ಎತ್ತರ ಇದೆ. ಒಳಗೋಗಾಕೆ ಎರಡು ಕಂಬ ಇದಾವೆ" ಅಂದ.

ದಾಸ್ ಕೇಳಿಸಿಕೊಂಡು ನಗುತ್ತಿದ್ದ. ತಮ್ಮ ಕೆಲಸವೇ ಸಾಕಷ್ಟಿದೆಯೆಂಬಂತೆ ಆತನ ಸಹಾಯಕರಾದ ಬಡಗಿಯವರು ಗಂಭೀರವಾಗಿ ತೋಪ್ಪಾ ಹೊಡೆಯುತ್ತ ಮರ ಕತ್ತರಿಸುತ್ತ ಕೆಲಸದಲ್ಲಿ ತೊಡಗಿದ್ದರು. ತಮ್ಮನ್ನು ಮಾತಾಡಿಸಿ ವೇಳೆ ಪೋಲು ಮಾಡಬೇಡಿ ಎಂಬಂತಿದ್ದ ಅವರಿಗೆ ನನ್ನ ಚಿಂತೆಯನ್ನು ತಕ್ಷಣ ಹೇಳುವುದು ಕಷ್ಟ. ಚಿನ್ನಮ್ಮನ ಗುಡಿಸಲನ್ನು, ಅದಕ್ಕೆ ಬೇಕಾಗುವ ಬಾಗಿಲನ್ನು ವರ್ಣಿಸುವಷ್ಟು ವಿಷಯ ನನಗೆ ಗೊತ್ತಿರಲಿಲ್ಲ. ಇದಕ್ಕೆಲ್ಲ ಇದ್ದದ್ದು ಒಂದೇ ಪರಿಹಾರ. ನನ್ನ ಔದಾರ್ಯವನ್ನು

ಹುಚ್ಚೆಂದು ತಿಳಿಯತೊಡಗಿದ್ದ ಇವರಿಗೆ ಗದರಿಸಿ, ಕಟ್ಟುನಿಟ್ಟಾಗಿ ಹೇಳುವುದು ಮಾತ್ರ ಚಿನ್ನಮ್ಮನಿಗೆ ಸಹಾಯ ಮಾಡಬಹುದಿತ್ತು. ಇದು ಕೂಡ ನನ್ನಲ್ಲಿ ಸ್ಪಷ್ಟವಾಗಲಿಲ್ಲ. ತೋಟದಲ್ಲಿ ಅಡ್ಡಾಡಿದೆ. ಇದರಿಂದೆಲ್ಲ ಆದಷ್ಟು ಬೇಗ ಕೈತೊಳೆದುಕೊಂಡರೆ ವಾಸಿ ಎನ್ನಿಸಿತು. ಹೀಗೆ ಕೈತೊಳೆದುಕೊಳ್ಳುವ ಸುಲಭ ಮಾರ್ಗ ಚಿನ್ನಮ್ಮನಿಗೆ ನಾಳೆಯಿಂದ ಕೆಲಸಕ್ಕೆ ಬರಬೇಡ ಎಂದು ಹೇಳುವುದು. ಅಥವಾ ಆಕೆಯ ಬಾಗಿಲಿಗೆ ಬೇಕಾಗುವ ಹಣದಲ್ಲಿ ಸ್ವಲ್ಪ ಭಾಗವನ್ನು ಕೊಟ್ಟುಬಿಡುವುದು, ಅಥವಾ ಇಡೀ ಪ್ರಸಂಗವನ್ನು ಮರೆತು ಸುಮ್ಮನಾಗುವುದು. ಇನ್ನೊಂದು ವಿಷಯ ಹೊಳೆಯಿತು. ದಿಕ್ಕಿಲ್ಲದ ಮುದುಕಿಯಾದ ಈಕೆಗೆ ವೃದ್ಧಾಪ್ಯವೇತನ ಕೊಡಿಸಲು ಯಾಕೆ ಪ್ರಯತ್ನಿಸಬಾರದು?

ಅದು ಹೊಳೆದೊಡನೆ ಮನಸ್ಸು ಹಗುರವಾಯಿತು. ಅವತ್ತು ಸಂಜೆಯೇ ಗೆಳೆಯರನ್ನು ಕರೆದು ವೃದ್ಧಾಪ್ಯವೇತನ ಕೊಡಿಸುವ ಪ್ರೊಸೀಜರ್ ಕೇಳಿದೆ. ಅದು ಗ್ರಾಮೀಣ ಮಂತ್ರಿ ಮತ್ತು ಕಂದಾಯ ಮಂತ್ರಿ ಇಬ್ಬರ ಇಲಾಖೆಗೂ ಸೇರಿದ ವಿಷಯವೆಂದೂ ಅದಕ್ಕೊಂದು ಫಾರಂ ಇರುವುದಾಗಿಯೂ ಅದನ್ನು ಗ್ರಾಮಲೆಕ್ಕಿಗನಿಂದ ತೆಗೆದುಕೊಂಡು ಅವನ ಶಿಫಾರ್ಸಿನ ಮೇರೆಗೆ ತಹಶೀಲ್ದಾರ್‌ಗೆ ಮುದುಕಿಯ ಫೋಟೋ, ಚಹರೆ, ಪರಿಚಯದ ಜೊತೆಗೆ ಕಳಿಸಬೇಕೆಂದೂ ತಿಳಿಯಿತು. ಈಗಾಗಲೇ ಜಟ್ಟಿಗೆರೆಯ ಅನೇಕರಿಗೆ ಕೊಟ್ಟು ಈ ಚಿನ್ನಮ್ಮನ ಕೇಸು ತಿರಸ್ಕೃತವಾಗಿದೆಯೆಂದೂ, ನಾನು ಮನಸ್ಸು ಮಾಡಿ ಆಕೆಗಾಗಿ ಪ್ರಯತ್ನಿಸಿದರೆ ಆರೇಳು ತಿಂಗಳಲ್ಲಿ ವೇತನ ಸಿಕ್ಕರೂ ಸಿಕ್ಕಬಹುದೆಂದೂ ಗೆಳೆಯರು ಮತ್ತು ಜಟ್ಟಿಗೆರೆಯನ್ನು ಬಲ್ಲವರು ತಿಳಿಸಿದರು. ಇದೊಂದು ಪರ್ವತಾಕಾರವಾಗಿ, ಕರ್ಮಕಾಂಡವಾಗಿ ಕಾಣತೊಡಗಿ ಈ ಹಾಳು ಚಿನ್ನಮ್ಮನಿಗೆ ಐವತ್ತು ರೂಪಾಯಿ

ಕೊಟ್ಟು ಕಳಿಸಿಬಿಡುವುದು ವಾಸಿ ಎಂದು ಚಿನ್ನಮ್ಮ ಮತ್ತು ದುಭಾಷಿ ಮುನಿರಾಜುವನ್ನು ಕರೆದೆ.

ಆಕೆಗೆ ನೋವಾಗದಂತೆ ಮತ್ತು ನನ್ನ ಮಾನವೀಯತೆ ಮಿರುಗುವಂತೆ ನನ್ನ ವಾದಸರಣಿಯನ್ನು ಮಂಡಿಸಿದೆ. ಮುನಿರಾಜುವಿಗೆ ತರ್ಜುಮೆ ಮಾಡಲು ಹೇಳಿದರೆ ಆತ ಎರಡೇ ಮಾತಿನಲ್ಲಿ ಆಕೆಗೆ ತಿಳಿಸಿದ. ನಾನು ಬಾಗಿಲು ಕೊಡುವುದಾಗಲಿ ಅಥವಾ ಅದಕ್ಕೆ ಬದಲಾಗಿ ಐವತ್ತು ರೂಪಾಯಿ ಕೊಡವುದಾಗಲಿ ಎರಡೂ ಆಕೆಗೆ ಅದ್ಭುತವಾಗಿ ಕಂಡದ್ದರಿಂದ ಏನನ್ನೂ ಹೇಳದೆ ತನ್ನ ಸುಕ್ಕು ಮುಖದಲ್ಲಿ ನಗೆ, ದೈನ್ಯ ಬೆರೆಸಿ ನಿಂತಿದ್ದಳು. ಏನೋ ಹೇಳಿದಳು. ಮುನಿರಾಜು, "ಪರವಾಗಿಲ್ವಂತೆ ಸಾರ್. ನಿಮ್ಮ ಮಕ್ಕಳಿಗೆ ದೇವರು ಒಳ್ಳೆಯದು ಮಾಡ್ತಾನಂತೆ" ಅಂದ.

ನನಗೆ ರೇಗಿತು. ಅದಕ್ಕೂ ಇದಕ್ಕೂ ಏನು ಸಂಬಂಧ. ಆ ದೇವರೆಂಬ ಮೂರ್ಖ ಇದ್ದಿದ್ದರೆ ಈ ತಬ್ಬಲಿತನ ಏಕೆ ಇರುತ್ತಿತ್ತು ಎಂದೆಲ್ಲ ಹೇಳಿಕೊಂಡು "ಇಲ್ಲಯ್ಯ, ಬಾಗಿಲನ್ನೇ ಕೊಡ್ತೀನೆ. ಆಕೆ ಐವತ್ತು ರೂಪಾಯಿ ತಗೊಂಡು ಏನು ಮಾಡ್ತಾಳೆ? ಈಕೆಗೆ ಬಾಗಿಲು ಮಾಡಿಕೊಡುವವರು ಯಾರು?" ಅಂದೆ. ಮುನಿರಾಜು ವಿಧೇಯನಾಗಿ ಭಾಷಾಂತರಿಸಿದ. ಚಿನ್ನಮ್ಮ ಇನ್ನಷ್ಟು ದಿಗ್ಭ್ರಮೆಗೊಳ್ಳಲಿಲ್ಲ, ಆಕೆಯ ಕಪ್ಪು, ಸುಕ್ಕು ಮುಖ ಹಾಗೇ ಇತ್ತು, ಒಕ್ಕಣ್ಣು ಕೃತಜ್ಞತೆಯನ್ನು ಮಾತ್ರ ಸೂಚಿಸುತ್ತಿದ್ದಂತಿತ್ತು. ಕುಳ್ಳ ಹೆಂಗಸು ಈಕೆ ಇನ್ನಷ್ಟು ಚಿಕ್ಕದಾಗಿದ್ದಿದ್ದರೆ, ಉದ್ದಕ್ಕೆ ಅಂದವಾಗಿ ಬೆಳೆದಿದ್ದರೆ, ಕಣ್ಣು ಸರಿಯಾಗಿದ್ದಿದ್ದರೆ ಈಕೆಯ ಗಂಡ ಈಕೆಯನ್ನು ಬಿಟ್ಟು ಹೋಗುತ್ತಿರಲಿಲ್ಲ, ಈಕೆಯನ್ನು ಕಂಡು ಜನಕ್ಕೆ ಸ್ವಲ್ಪ ಕಾಳಜಿಯಾದರೂ ಇರುತ್ತಿತ್ತು.

ಇತ್ಯಾದಿಯಾಗಿ ಏನೇನೋ ಅನ್ನಿಸುತ್ತಿದ್ದಾಗ ದಾಸ್ ಮತ್ತು ಬಡಗಿಗಳು ಇದ್ದಲ್ಲಿಗೆ ಹೋಗಿ, "ದಾಸ್ ಇಲ್ಲಿ ಬಾ" ಅಂದೆ. ನನ್ನ ಧ್ವನಿ ಕಠೋರವಾಗಿತು.

"ಈ ಕೆಲಸ ಸಂಜೆಯೊಳಗೆ ಆಗಬೇಕು, ಇಲ್ಲದಿದ್ದರೆ ನೀನು ನಾಳೆಯಿಂದ ಕೆಲಸಕ್ಕೆ ಬರೋದು ಬೇಡ; ನಮ್ಮಲ್ಲಿ ಈಗ ರೆಡಿ ಇರುವ ವಾಸ್ಕಲ್‌ಗಳಲ್ಲಿ ಒಂದನ್ನು ಸೂರಿಗೆ ಹೊಂದೋ ಹಾಗೆ ನಾಲ್ಕಡಿಗೆ ಕತ್ತರಿಸಿ ನಮ್ಮಲ್ಲಿರುವ ಹಲಗೆಗಳನ್ನು ಅಡ್ಜಸ್ಟ್ ಮಾಡಿ ಕದ ತಯಾರಿಸಬೇಕು. ಇವನ್ನೆಲ್ಲ ಇವತ್ತೇ ನೀವೆಲ್ಲ ಚಿನ್ನಮ್ಮನ ಮನೆಗೆ ತೆಗೆದುಕೊಂಡು ಹೋಗಿ ನಿಲ್ಲಿಸಿ ಬರಬೇಕು. ಮುನಿರಾಜು ಎಲ್ರನ್ನೂ ಕರೆದುಕೊಂಡು ಹೋಗ್ತಾನೆ" ಅಂದೆ.

ದಾಸ್ ದಿಕ್ಕು ತೋಚದವನಂತೆ ಕ್ಷಣ ನಿಂತರೂ ನನ್ನನ್ನು ವಿವರವಾಗಿ ನೋಡಿ ನಿರ್ವಾಹವೇ ಇಲ್ಲವೆನ್ನುವಂತೆ, "ಆಗಲಿ ಸಾರ್" ಅಂದ.

ವಾಸ್ಕಲ್ ಕತ್ತರಿಸಿದರೆ ಮರ ಪೋಲಾಗುವ ಬಗ್ಗೆ, ಈ ವಾಸ್ಕಲ್‌ಗೆ ಸಾಗುವಾನಿ ಹಲಗೆಯೇ ಬೇಕಾಗುತ್ತಲ್ಲ ಎಂದು ಮುಂತಾದ್ದರ ಬಗ್ಗೆ, ಸಾಗಿಸುವ ವಾಹನದ ಬಗ್ಗೆ ಮಾತಾಡಲು ದಾಸ್‌ಗೆ ಕಾತರವಿತ್ತು. ಆದರೆ ಮಾತಾಡಲಿಲ್ಲ, ಮರಗೆಲಸದವರು ನನಗೆ ಶಿಕ್ಷೆ ವಿಧಿಸುವ ಶೈಲಿಯಲ್ಲಿ ಸಿದ್ದವಾಗಿ ನಿಂತಿದ್ದ ಬಾಗಿಲು ಪ್ರೇಮನ್ನು ಕತ್ತರಿಸಿ ಒಳ್ಳೊಳ್ಳೆಯ ಸಾಗುವಾನಿ ಹಲಗೆಯಿಂದ ಕದವಾಗಿ ರೂಪಿಸತೊಡಗಿದರು. ಈ ವಿಷಯ ಕೂಡ ಕೆಲಸಗಾರರಲ್ಲಿ ಹಬ್ಬಿತು. ನನಗೆ ಗೊತ್ತಾಗದಂತೆ ತೆಲುಗು, ತಮಿಳಿನಲ್ಲಿ ಏನೇನೋ ಮಾತಾಡಿಕೊಳ್ಳುತ್ತ, ಚಿನ್ನಮ್ಮನಿಗೆ ಕೇಳಿಸುವುದೆಂಬ ನೆದರೂ ಇಲ್ಲದೆ ಕೆಲಸ ಮಾಡುತ್ತಿದ್ದರು. ನನಗೆ ನನ್ನ ಹುಚ್ಚಿನ ಬಗ್ಗೆಯೇ ದಿಗ್ಭಮೆಯಾಗತೊಡಗಿತು. ಮುನಿರಾಜುವನ್ನು ಪಕ್ಕಕ್ಕೆ ಕರೆದು ವಿಷಯ ಏನೆಂದು

ವಿವರಿಸಲು ಹೇಳಿದೆ. ಆತ ಹಿಂಜರಿದ. ಒತ್ತಾಯ ಮಾಡಿದ ಮೇಲೆ, ಚಿನ್ನಮ್ಮ ಅಷ್ಟು ಒಳ್ಳೆಯ ಹೆಂಗಸಲ್ಲವೆಂದೂ ಆಕೆ ನೆಟ್ಟಗಿದ್ದರೆ ಅವಳಿಗೆ ಈ ಗತಿ ಯಾಕೆ ಬರುತ್ತಿತ್ತೆಂದೂ ಅವರೆಲ್ಲ ಮಾತಾಡಿಕೊಳ್ಳುತ್ತಿದ್ದಾರೆಂದು ಹೇಳಿದ. ನಾನು ನಕ್ಕೆ. ನೂರಾರು ಘಟ್ಟಗಳಲ್ಲಿ ಅಪರಾಧಿಗಳೂ ನೀಚರೂ ಆದ ಈ ದೇಶದ ಜನರಲ್ಲಿ ಚಿನ್ನಮ್ಮನದೂ ಒಂದು ಘಟ್ಟವಲ್ಲವೇ ಎಂದು ಕೇಳಿಕೊಳ್ಳುವಾಗ ಸಹ ಆಕೆಯ ಕುಳ್ಳ ದೇಹ, ಬದುಕುವ ಆಶೆಯಿಂದ ಎಲ್ಲರಿಗಿಂತ ಹೆಚ್ಚು ಚುರುಕಾಗಿ ಕೆಲಸ ಮಾಡುವ ಅನಿವಾರ್ಯತೆ–ಮನಸ್ಸು ತುಂಬಿತು.

ಆಮೇಲೆ ಆದದ್ದನ್ನು ಹೇಳಲು ಹಿಂಜರಿಕೆಯಾಗುತ್ತಿದೆ. ಸಂಜೆಯ ವೇಳೆಗೆ ಬಾಗಿಲು, ಕದ ಸಿದ್ದವಾಗಿದ್ದವು. ಅವನ್ನೆಲ್ಲ ಜಟ್ಟಿಗೆರೆಗೆ ಸಾಗಿಸಲು ಉದಾರವಾದ ಮಜೂರಿಯನ್ನೇ ಗೊತ್ತುಮಾಡಿದೆ. ವಿಷಯವನ್ನು ಚಿನ್ನಮ್ಮನಿಗೆ ತಿಳಿಸಿದೆ. ಆಕೆ ಕೃತಜ್ಞತೆ ಹೇಳುವುದಕ್ಕೆ ಮುನ್ನವೇ ದೊಡ್ಡ ಧ್ವನಿಯಲ್ಲಿ ದಾಸ್‌ಗೆ ತಾಕೀತು ಮಾಡಿ ಎಲ್ಲ ಸಮರ್ಪಕವಾಗಬೇಕೆಂದೂ ಬಾಗಿಲನ್ನು ಚೆನ್ನಾಗಿ ನಿಲ್ಲಿಸಬೇಕೆಂದೂ ಹೇಳಿದೆ. ತೋಟದಿಂದ ಬಾಗಿಲನ್ನು ಸಾಗಿಸಿದ ಮೇಲೆ ದೊಡ್ಡ ಭಾರ ಇಳಿದಂತೆ ಅನ್ನಿಸಿತು.

ಆದರೆ ನನಗೆ ಆಘಾತ ಕಾದಿತ್ತು. ಮರುದಿನ ಚಿನ್ನಮ್ಮ ಕೆಲಸಕ್ಕೆ ಬರಲಿಲ್ಲ. ಅವಳು ತನ್ನ ಬಾಗಿಲನ್ನು ನೋಡಿ ಆನಂದಿಸುತ್ತ ಇರಬಹುದೆಂದು ಸುಮ್ಮನಾದೆ. ಒಂದು ಒಳ್ಳೆಯ ಕೆಲಸ ಮಾಡಿದ ನೆಮ್ಮದಿ ನನ್ನನ್ನು ಆವರಿಸಿತ್ತು. ಆಕೆ ಎರಡನೆಯ ದಿನ ಕೂಡ ಬರಲಿಲ್ಲ. ನಾನು ಸುಮ್ಮನಿದ್ದರೂ ಮುನಿರಾಜುವಿಗೆ ಅನುಮಾನವಾಗಿ ತಾನೇ ಜಟ್ಟಿಗೆರೆಗೆ ಹೋಗಿ ಬಂದು ದೊಡ್ಡದಾಗಿ ನಗುತ್ತ, "ಚಿನ್ನಮ್ಮನ ಗುಡಿಸಿಲಿನಾಗೆ ಚಿನ್ನಮ್ಮನೂ ಇಲ್ಲ, ಆಕೆಯ ಬಾಗಿಲೂ ಇಲ್ಲ! ಅದನ್ನು ತಗೊಂಡು ಪರಾರಿ!" ಅಂದ.

ವಿಷಯ ಗೊತ್ತಾದೊಡನೆ ಕೆಲಸಗಾರರೆಲ್ಲ ನಗತೊಡಗಿದರು. ದಾಸ್ ತನ್ನ ಕೆಲಸದಲ್ಲಿ ಮಗ್ನನಾದಂತೆ ಅನ್ನಿಸಿದರೂ ಒಳಗೊಳಗೇ ನನ್ನ ಮೂರ್ಖತನದ ಬಗ್ಗೆ ನಗುತ್ತಿದ್ದಂತೆ ಅನ್ನಿಸತೊಡಗಿತು. ನಾನು ಕತ್ತರಿಸಿ ಕಳಿಸಿದ ಬಾಗಿಲು ಮತ್ತು ಕದಕ್ಕೆ ಕನಿಷ್ಠ ಪಕ್ಷ ಸಾವಿರದೈನೂರು ರೂಪಾಯಿ ಬೆಲೆ ಸಿಕ್ಕುತ್ತೆ ಎಂದು ಪರೋಕ್ಷವಾಗಿ ಮರದ ಬೆಲೆ ಚರ್ಚಿಸುತ್ತ ಟೀಕಿಸತೊಡಗಿದ; ಕೆಲಸಗಾರರೂ ಇವತ್ತು ನೆಮ್ಮದಿಯಿಂದ, ನಗುನಗುತ್ತಾ ಕೆಲಸ ಮಾಡುತ್ತಿದ್ದರು. ಈ ಕ್ರೂರ ವಾತಾವರಣದಲ್ಲಿ ಅಸೂಯೆ, ನೋವು, ಕಳ್ಳತನಗಳು ಕೂಡ ಜನಕ್ಕೆ ಆನಂದ ತರಬಹುದಲ್ಲ ಎನ್ನಿಸಿ ವಿಸ್ಮಯವಾಯಿತು. ಹಾಗೆಯೇ ನನ್ನ ಹುಚ್ಚು ನನಗೆ ಆನಂದ ತರಬಲ್ಲದಾದರೆ ಇವೆಲ್ಲ ಹೇಗೆ ತಪ್ಪು ಎಂದು ಕೇಳಿಕೊಂಡೆ.

ಎರಡು ದಿನ ಕಳೆಯಿತು. ಅಂದು ಸಾಯಂಕಾಲ ಕೆಲಸ ಮುಗಿಸಿ ಎಲ್ಲರೂ ಹೋಗುವುದರಲ್ಲಿದ್ದರು. ಕತ್ತಲು ಆವರಿಸತೊಡಗಿತ್ತು. ಸಂಜೆಯ ತಂಪು ಹೆಚ್ಚಾಗುತ್ತಿದ್ದಂತೆ ಚಿಟ್ಟೆ, ಕ್ರಿಮಿಗಳು ತಮ್ಮ ವಾದ್ಯ ಶುರುಮಾಡಿ, ಹಕ್ಕಿಪಕ್ಷಿಗಳೆಲ್ಲ ಗೂಡು ಸೇರಿದ್ದವು. ದಟ್ಟ ಮರಗಳ ತೋಟ ಎಲ್ಲರಲ್ಲೂ ದಣಿವು, ಏಕಾಂಗಿತನ ತುಂಬತೊಡಗಿತ್ತು. ಮೂಲೆಯಲ್ಲಿ, ಮರದ ಕೆಳಗೆ ಒಂದು ಆಕೃತಿ ಕಾಣಿಸಿತು. ಕುಳ್ಳಗೆ, ಮರದ ತುಂಡಿನಂತೆ ನಿಂತಿದ್ದ ಆಕೃತಿ ಚಿನ್ನಮ್ಮ ಎಂದು ಹೊಳೆದು ಎಲ್ಲರೂ ಗಟ್ಟಿಯಾಗಿ ಮಾತಾಡತೊಡಗಿದರು. ಚಿನ್ನಮ್ಮ ಕಪ್ಪಗೆ ನಿಂತೇ ಇದ್ದಳು. ಮುನಿರಾಜು ಕಾಣಿಸಲಿಲ್ಲ. ಅವನನ್ನು ಹೆಸರು ಹಿಡಿದು ಕೂಗಿದೆ. ಅವನು ಬಂದೊಡನೆ ಚಿನ್ನಮ್ಮನ ಹತ್ತಿರ ಹೋಗಿ, "ಏನಾಯಿತು ಕೇಳು" ಎಂದು ಮುನಿರಾಜುವಿಗೆ ಹೇಳಿದೆ. ಆತ ಕೇಳುವುದಕ್ಕೆ ಮುಂಚೆಯೇ ಚಿನ್ನಮ್ಮ ಏನೇನೋ ಹೇಳತೊಡಗಿದಳು. ದಣಿದು

ಸುಣ್ಣವಾದಂತಿದ್ದ ಆಕೆಯ ಧ್ವನಿ ಕೂಡ ಕ್ಷೀಣವಾಗಿತ್ತು. ಅಳಲು ಕೂಡ ಶಕ್ತಿ ಇಲ್ಲವೆಂಬಂತೆ ಇದ್ದಳು. ಅವಳು ಮಾತಾಡುತ್ತಿದ್ದುದಕ್ಕೂ ಮುನಿರಾಜು ತರ್ಜುಮೆ ಮಾಡುತ್ತಿದ್ದುದಕ್ಕೂ ಸಂಬಂಧವಿಲ್ಲವೆಂಬ ಅನುಮಾನ ಬಂದು ದಾಸ್‌ನನ್ನು ಕರೆದೆ. ತಾನು ಹೇಳಿದ್ದನ್ನು ಮತ್ತೊಮ್ಮೆ ದಾಸ್‌ಗೆ ಚಿನ್ನಮ್ಮ ಹೇಳಿದಳು. ತನ್ನ ಬಾಗಿಲನ್ನು ರಾತ್ರಿಹೊತ್ತು ಯಾರೋ ಕದ್ದುಕೊಂಡು ಹೋದರೆಂದೂ, ಅವರನ್ನು ಬೆನ್ನಟ್ಟಿಹೋದ ತಾನು ಕೂಗಿಕೊಂಡರೂ ಊರ ಯಾರೂ ಸಹಾಯಕ್ಕೆ ಬರಲಿಲ್ಲವೆಂದೂ, ಪೊಲೀಸ್ ಸ್ಟೇಶನ್ನಿಗೆ ಹೋಗಿ ಗೋಗರೆದರೆ ಅವರೇನೂ ಮಾಡಲಿಲ್ಲವೆಂದೂ ಹೇಳಿದಳು. ನಾನು ಸುಮ್ಮನಿದ್ದೆ. ಸುತ್ತಾ ಸೇರಿದ್ದ ಕೆಲಸಗಾರರು ಆಕೆಯನ್ನೆ ಮತ್ತೆ ಮತ್ತೆ ಪ್ರಶ್ನಿಸುತ್ತಾ ಆಕೆಯೇ ಕದ್ದಿರುವುದಾಗಿ ಎಲ್ಲರೂ ಹೇಳುತ್ತಿರುವರೆಂದು ಸೂಚಿಸಿದರು. ಚಿನ್ನಮ್ಮ ಮಾತು ಕಳೆದುಕೊಂಡಳು. ಇಂಥ ಒಂದು ಆಪಾದನೆ ತನ್ನ ಮೇಲೆ ಬರುವುದೆಂದು ಆಕೆ ಊಹಿಸಿರಲಿಕ್ಕಿಲ್ಲ. ನನಗೆ ಖಾತ್ರಿಯಾಗಿತ್ತು. ಚಿನ್ನಮ್ಮ ತಾನೇ ತನ್ನ ಬಾಗಿಲನ್ನ ಕದ್ದು ಮಾರಿಕೊಳ್ಳುವಷ್ಟು ಕೆಟ್ಟವಳಾಗಲಿ, ಛಾತಿಯುಳ್ಳವವಾಗಲಿ ಅಲ್ಲವೆಂಬುದು ನನಗೆ ಗೊತ್ತಿತ್ತು. ಆದ್ದರಿಂದ, "ಬಾಗಿಲನ್ನು ಕದಿಯುವ ನೀಚರೂ ಇರಲು ಸಾಧ್ಯವೆ?" ಅಂದೆ.

ಅದಕ್ಕೆ ದಾಸ್, "ಅದು ಗುಡಿಸಲು ಸಾರ್. ಗಟ್ಟಿಯಾಗಿ ನಿಂತಿರಲಿಲ್ಲ, ನಾವು ಪಾಲಿಶ್ ಮಾಡಿದ ಸಾಗುವಾನಿ ಬಾಗಿಲು ನಿಲ್ಲಿಸಿದರೆ, ಅದು ಅಲ್ಲಿ ಕಣ್ಣಿಗೆ ಹೊಡೆದಂಗೆ ನಿಂತಿತ್ತು. ಅದು ಅಲ್ಲಿ ಬಹಳ ದಿನ ಇರಲಿಕ್ಕಿಲ್ಲ ಅನ್ನೋದು ನನಗೆ ಆಗಲೇ ಗೊತ್ತಿತ್ತು" ಅಂದ.

ಆತನ ಮಾತು ನನ್ನ ಮೂರ್ಖತನಕ್ಕೆ ಒತ್ತು ಕೊಟ್ಟ ಧಾಟಿಯಲ್ಲಿತ್ತು. ಪರಿಸರವನ್ನು ತಿಳಿಯದೆ ಕೇವಲ ಹುಂಬತನದಿಂದ ಮಾಡಿದ ಸಹಾಯ ಎಷ್ಟು ಕೆಟ್ಟದಾಗಬಲ್ಲದು, ಅದರಿಂದ ಊರವರಿಗೆ, ಪೊಲೀಸರಿಗೆ, ಎಲ್ಲರಿಗೆ ಹೇಗೆ ತೊಂದರೆಯಾಗಬಲ್ಲದು ಎಂಬುದನ್ನು ಅವನ ಮಾತು ಸೂಚಿಸುತ್ತಿದ್ದವು.

"ಏನಮ್ಮಾ, ನೀನು ಹೀಗೆ ಮಾಡಬಹುದೆ?" ಎಂದು ದಾಸ್ ನನ್ನ ಎದುರು ಪಾರ್ಟಿಯವರ ಸಿದ್ಧಾಂತವನ್ನೇ ಆಕೆಯ ಮುಖಕ್ಕೆ ರಾಚಿದ. ಅವಳು ಮುಗ್ಧವಾಗಿದ್ದಳು, ನನ್ನಷ್ಟೆ.

ಇವರನ್ನು ಸುಮ್ಮನೆ ಮಾಡಲು ನಾನು ಇನ್ನಷ್ಟು ಹುಚ್ಚು ಹುಮ್ಮಸ್ಸನ್ನು ಪಡೆಯುವುದು ಅಗತ್ಯವಾಗಿತ್ತು. ಹೇಗೂ ಇವರಿಗೆಲ್ಲ ಈಗಾಗಲೇ ನನ್ನ ವ್ಯವಹಾರ ಜ್ಞಾನದ ಅಭಾವ, ಮುಗ್ಧತೆ ಅಥವಾ ಮೂರ್ಖತನವೆಲ್ಲ ಗೊತ್ತಾಗಿದೆ. ಈ ಒಂದು ತಬ್ಬಲಿ ಹೆಣ್ಣುಮಗಳನ್ನು ನೋಯಿಸುವುದಕ್ಕೆ ಬದಲು ನನಗನ್ನಿಸಿದ್ದನ್ನು ಮಾಡುವುದೇ ಒಳ್ಳೆಯದೆಂದು ನಿರ್ಧರಿಸಿ, "ದಾಸ್, ನನ್ನ ಮಾತು ಕೇಳಿ" ಅಂದೆ.

"ಹೇಳಿ ಸಾರ್" ಎಂದು ಆತ ನಿರುತ್ಸಾಹದಿಂದ ಹೇಳಿದ.

"ನಾಳೆಯಿಂದ ಈ ಮನೆ ಕಟ್ಟಿಸುವ ಕೆಲಸ ನಿಲ್ಲಿಸೋಣ. ಇದರಿಂದ ಮಹಾ ಸ್ವರ್ಗ ಸಿಗುವುದು ಅಷ್ಟರಲ್ಲೇ ಇದೆ. ನೀವು, ಮಿಕ್ಕ ಕೆಲಸದವರು ಎಲ್ಲರೂ ಎರಡು ದಿನ ಜಟ್ಟಿಗೆರೆಗೆ ಹೋಗಿ ಅಲ್ಲಿ ಚಿನ್ನಮ್ಮನ ಗುಡಿಸಲು ಸರಿಮಾಡಿ, ತಕ್ಕ ಬಾಗಿಲು ಹಾಕಿ ಬರಬೇಕು" ಎಂದೆ.

ಇದನ್ನು ಕೇಳಿ ಹೌಹಾರಿದ ಮುನಿರಾಜು ಕೂಡಲೆ ನನ್ನ ಮಾತನ್ನು ಚಿನ್ನಮ್ಮನಿಗೆ ವಿವರಿಸಿದ. ಆಕೆ ಈಗ ಎಚ್ಚರಗೊಂಡಂತೆ ಚಲಿಸಿದಳು, ತುಟಿ ದುಗುಡದಿಂದ ಅಲುಗಿತು. ಅಳುತ್ತಾ ಹೇಳಿದಳು, "ಬೇಡಿ ಸ್ವಾಮಿ, ನಿಮಗೆ ಕೈ ಮುಗಿತೇನೆ–ಬೇಡಿ ಸ್ವಾಮಿ" ಎಂದಳು ತೆಲುಗಿನಲ್ಲಿ.

ಉದಾರ ನಾನು ಅವರೆಲ್ಲ ಹೋಗುವವರೆಗೆ ಕತ್ತಲಲ್ಲಿ ಸುಮ್ಮನೆ ನಿಂತಿದ್ದೆ. ಕೂಡಲೆ ಏನೋ ಹೊಳೆದು ಹುಚ್ಚು ಕಂಠದಲ್ಲಿ ಚೀರಿದೆ, "ಮುನಿರಾಜೂ...."

ಅವನು ಬಂದು ಕತ್ತಲಲ್ಲಿ ನಿಂತ. ಮಿಕ್ಕ ಕೆಲಸಗಾರರನ್ನೂ ದಾಸ್‌ನನ್ನೂ ಕೂಗಿದೆ.

ಎಲ್ಲರೂ ಬಂದರು. ದಣಿವು ಅವರ ಪ್ರತಿಯೊಂದು ಕ್ರಿಯೆಯಲ್ಲೂ ಕಂಡುಬರುತ್ತಿತ್ತು.

"ಮುನಿರಾಜು."

"ಏನ್ಸಾರ್?"

"ನನ್ನ ಹುಚ್ಚಿನಲ್ಲಿ ಕೆಲವು ಸಲ ಸತ್ಯ ಹೊಳೆಯುತ್ತೆ, ಈ ಚಿನ್ನಮ್ಮ ಕಳ್ಳಿ ಅಲ್ಲ ಅನ್ನಿಸಿದೆ. ಈ ತಬ್ಬಲಿಗೆ ನಾನೇನೂ ಮಾಡೋಕೆ ಆಗ್ತಿಲ್ಲ. ಆದರೆ ನಿನಗೆ ಏನಾದ್ರೂ ಮಾಡ್ತೇನೆ" ಅಂದೆ.

"ಏನ್ಸಾರ್?"

"ನೀನು ನಾಳೆ ಬೆಳಗ್ಗೆ ಆಕೆಯ ಬಾಗಿಲು, ಕದವನ್ನು ಹಿಂದಿರುಗಿಸದೇ ಇದ್ರೆ ನಿನ್ನ ಮೇಲೆ ಪೊಲೀಸ್ ಕಂಪ್ಲೇಂಟ್ ಕೊಡ್ತೇನೆ."

ಆತ ತಬ್ಬಿಬ್ಬಾದ, ಏನೇನೋ ಸದ್ದು ಮಾಡತೊಡಗಿದ. ಅವನ ಕೆನ್ನೆಗೆ ನಾಲ್ಕು ಬಾರಿಸಿದೆ. ಅಳತೊಡಗಿದ. ತೆಲುಗಿನಲ್ಲಿ ದಾಸ್‌ನನ್ನು ಬೈಯತೊಡಗಿದ. ನಾನು ಏದುಸಿರಿಡುತ್ತಾ ಹೇಳಿದೆ, "ಈ ಲೋಫರ್ ದಾಸ್‌ನ ಸಹಾಯ ತಗೊಂಡು ನೀನು ಬಾಗಿಲು, ಕದವನ್ನು ಹಿಂದಿರುಗಿಸಬೇಕು."

ಕೆಲಸಗಾರರೆಲ್ಲ ನಾನೀಗ ನಿಜಜೀವನದ ಆರೋಗ್ಯಕರ ವ್ಯಕ್ತಿಯಂತೆ ಮಾತಾಡುತ್ತಿರುವುದನ್ನು ಕಂಡು ಸಂತೋಷಗೊಂಡರು.

ಜನವರಿ ೧೯೮೭

* * *

**ಪಿ. ಲಂಕೇಶ್ :** ಕನ್ನಡ ಸಾಹಿತ್ಯದ ಪ್ರಮುಖ ಲೇಖಕರಲ್ಲಿ ಒಬ್ಬರು. ಪತ್ರಕರ್ತ–ಸಾಹಿತಿಯಾಗಿ ಜನಪ್ರಿಯರಾಗಿರುವ ಪಾಳ್ಯದ ಲಂಕೇಶ್ ಅವರ ಬದುಕು–ಬರಹ ವೈವಿಧ್ಯದಿಂದ ಕೂಡಿವೆ. ಕವಿ, ಕಥೆಗಾರ, ಕಾದಂಬರಿಕಾರ, ಅನುವಾದಕ, ನಾಟಕಕಾರ, ನಟ, ಚಲನಚಿತ್ರ ನಿರ್ದೇಶಕ, ಸಂಪಾದಕ, ಕೃಷಿಕ ಹೀಗೆ ಅವರ ಪ್ರತಿಭೆಗೆ ಹಲವು ಮುಖ. ಕೆಲಸ ಮಾಡಿದ ಕ್ಷೇತ್ರದಲ್ಲೆಲ್ಲ ತನ್ನದೇ ಛಾಪು ಮೂಡಿಸಿದವರು ಲಂಕೇಶ್.

ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲೂಕಿನ ಕೊನಗವಳ್ಳಿಯಲ್ಲಿ 1935ರ ಮಾರ್ಚ್ 8ರಂದು ಜನಿಸಿದರು., ತಂದೆ ನಂದಿ ಬಸಪ್ಪ, ತಾಯಿ ದೇವೀರಮ್ಮ. ಕೊನಗವಳ್ಳಿ ಮತ್ತು ಹಾರನಹಳ್ಳಿಯಲ್ಲಿ ಪ್ರಾಥಮಿಕ, ಮಾಧ್ಯಮಿಕ ವಿದ್ಯಾಭ್ಯಾಸ ಮಾಡಿದ ಅವರು ಪ್ರೌಢಶಾಲೆ ಮತ್ತು ಇಂಟರ್ ಮೀಡಿಯಟ್‌ಗಳನ್ನು ಶಿವಮೊಗ್ಗದಲ್ಲಿ ಮುಗಿಸಿದರು. ಬೆಂಗಳೂರು ಸೆಂಟ್ರಲ್ ಕಾಲೇಜ್‌ನಲ್ಲಿ ಬಿ.ಎ. (ಆನರ್ಸ್), ಮೈಸೂರಿನಲ್ಲಿ ಎಂ.ಎ. (ಇಂಗ್ಲಿಷ್) ಅಧ್ಯಯನ ನಡೆಸಿ ಅವರು ಶಿವಮೊಗ್ಗದಲ್ಲಿ ಅಧ್ಯಾಪಕ ವೃತ್ತಿ ಆರಂಭ (1959) ಮಾಡಿದರು. ಬೆಂಗಳೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದಲ್ಲಿ ಎರಡು ದಶಕಗಳ ಕಾಲ ಅಧ್ಯಾಪಕರಾಗಿದ್ದ ಅವರು ಸ್ವಯಂ ನಿವೃತ್ತಿಯ ನಂತರ ಪತ್ರಿಕೋದ್ಯಮ ಪ್ರವೇಶಿಸಿದರು.

'ಲಂಕೇಶ್ ಪತ್ರಿಕೆ'ಯ ಹರಿತ ಬರಹಗಳ ಮೂಲಕ ಕನ್ನಡ ಜಾಣ–ಜಾಣೆಯರಿಗೆಲ್ಲ ಪರಿಚಿತರಾದರು.

ವಿದ್ಯಾರ್ಥಿ ದೆಸೆಯಿಂದಲೂ ರಾಜಕೀಯದಲ್ಲಿ ಆಸಕ್ತಿ ತಳೆದಿದ್ದ ಲಂಕೇಶ್ ಅವರಿಗೆ ಸಮಾಜವಾದದತ್ತ ವಿಶೇಷ ಆಸಕ್ತಿ. ಲೋಹಿಯಾರ ಸಮಾಜವಾದ ಪ್ರಭಾವಿತರಾಗಿದ್ದ ಅವರು ರಾಜಕೀಯ ಪ್ರವೇಶಿಸುವ ಬಯಕೆಯಿಂದ 'ಪ್ರಗತಿ ರಂಗ' ಆರಂಭಿಸಿದ್ದರು.

'ಕೆರೆಯ ನೀರನು ಕೆರೆಗೆ ಚೆಲ್ಲಿ', 'ನಾನಲ್ಲ', 'ಉಮಾಪತಿಯ ಸ್ಕಾಲರ್ ಷಿಪ್ ಯಾತ್ರೆ', 'ಕಲ್ಲು ಕರಗುವ ಸಮಯ', 'ಉಲ್ಲಂಘನೆ', 'ಮಂಜು ಕವಿದ ಸಂಜೆ' ಪ್ರಕಟಿತ ಕಥಾ ಸಂಕಲನಗಳು, ವಾಮನ' (1958) ಇವರ ಮೊದಲ ಕಥೆ. ವಿಮರ್ಶಕರ ಗಮನ ಸೆಳೆದ ಮತ್ತೊಂದು ಮಹತ್ವದ ಕಥೆ 'ರೊಟ್ಟಿ'.

'ಬಿಚ್ಚು', 'ತಲೆಮಾರು', ಲಂಕೇಶರ ಕವನ ಸಂಕಲನಗಳು, ಗದ್ಯದ ವಿಚಿತ್ರ ಸೊಗಸನ್ನು ಪದ್ಯಗಳಿಗೆ ತೊಡಿಸಿ ಕಾವ್ಯ ಬರೆದ ಲಂಕೇಶ್‌ರ 'ಅವ್ವ–1', 'ಅವ್ವ–2', 'ದೇಶಭಕ್ತ ಸೂಳೆಮಗನ ಗದ್ಯಗೀತೆ' ಅತ್ಯುತ್ತಮ ಕವನಗಳು. ನವ್ಯಕಾವ್ಯದ ಪ್ರಾತಿನಿಧಿಕ ಸಂಕಲನ 'ಅಕ್ಷರ ಹೊಸಕಾವ್ಯ' ಸಂಪಾದಿಸಿ ಪ್ರಕಟಿಸಿದ್ದರು. ಫ್ರೆಂಚ್ ಕವಿ ಬೋದಿಲೇರನ್ ಕವಿತೆ 'ಪಾಪದ ಹೂಗಳು' ಲಂಕೇಶ್ ಅನುವಾದಿಸಿರುವ ಮಹತ್ವದ ಸಂಕಲನ.

'ಟಿ. ಪ್ರಸನ್ನನ ಗೃಹಸ್ಥಾಶ್ರಮ' (1963) ಲಂಕೇಶರ ಪ್ರಥಮ ನಾಟಕ, 'ಏಳು ನಾಟಕ', 'ಸಂಕ್ರಾಂತಿ', 'ಗುಣಮುಖ' ಅವರ ನಾಟಕ ಕೃತಿಗಳು. 'ಈಡಿಪಸ್ ಮತ್ತು ಅಂತಿಗೊನೆ' ಸಫೋಕ್ಲಿಸ್ ಮಹಾಕವಿಯ ಗ್ರೀಕ್ ನಾಟಕದ ಕನ್ನಡ ಅನುವಾದ. ಅವರು ರಂಗ ಪ್ರದರ್ಶನಕ್ಕಾಗಿ 'ಪ್ರತಿಮಾ ನಾಟಕ ರಂಗ' ಎಂಬ ನಾಟಕ ತಂಡ ಕಟ್ಟಿದ್ದರು.

'ಬಿರುಕು', 'ಮುಸ್ಸಂಜೆಯ ಕಥಾ ಪ್ರಸಂಗ', 'ಅಕ್ಕ' ಅವರ ಕಾದಂಬರಿಗಳು. 'ಪ್ರಸ್ತುತ (ವಿಮರ್ಶೆ) ಹಾಗೂ 'ಕಂಡದ್ದು ಕಂಡಹಾಗೆ' ಲೇಖನಗಳ ಸಂಗ್ರಹ. 'ಲಂಕೇಶ್ ಪತ್ರಿಕೆಯ ಸಂಪಾದಕೀಯ 'ಟೀಕೆ–ಟಿಪ್ಪಣಿ'ಯ ಮೂರು ಸಂಪುಟಗಳು, ಮರೆಯುವ ಮುನ್ನ'ದ ಐದು ಸಂಪುಟ, 'ಬಿಟ್ಟು ಹೋದ ಪುಟಗಳು' ಮೂರು ಸಂಪುಟ ಪ್ರಕಟವಾಗಿವೆ. 'ಪತ್ರಿಕೆ

ಪ್ರಕಾಶನದ ಮೂಲಕ ಕನ್ನಡದ ಮಹತ್ವದ ಕೃತಿಗಳನ್ನು ಲಂಕೇಶ್ ಪ್ರಕಟಿಸಿದ್ದಾರೆ. ಅದಕ್ಕೂ ಮುನ್ನ 'ತರುಣ ಲೇಖಕರ ಪ್ರಕಾಶನ'ದಲ್ಲಿ ಮಿತ್ರರ ಅನೇಕ ಕೃತಿಗಳನ್ನು ಪ್ರಕಟಿಸಿದ್ದರು.

ಚಲನಚಿತ್ರ ರಂಗದಲ್ಲೂ ಲಂಕೇಶರ ಸಾಧನೆ ಗಣನೀಯ. 'ಸಂಸ್ಕಾರ' ಚಿತ್ರದಲ್ಲಿ ನಾರಾಯಣಪ್ಪನ ಪಾತ್ರ ವಹಿಸಿದ್ದ ಅವರು 'ಪಲ್ಲವಿ' ಚಿತ್ರದ ಅತ್ಯುತ್ತಮ ನಿರ್ದೇಶನಕ್ಕಾಗಿ ರಾಷ್ಟ್ರಪ್ರಶಸ್ತಿ(1977) ಪಡೆದಿದ್ದರು. 'ಅನುರೂಪ', 'ಎಲ್ಲಿಂದಲೋ ಬಂದವರು', 'ಖಂಡವಿದೆಕೊ ಮಾಂಸವಿದೆಕೊ' ಅವರು ನಿರ್ದೇಶಿಸಿದ ಚಿತ್ರಗಳು.

ಕರ್ನಾಟಕ ಸಾಹಿತ್ಯ ಅಕಾಡೆಮಿ, ನಾಟಕ ಅಕಾಡೆಮಿಯ ಪ್ರಶಸ್ತಿ ಗೌರವಗಳ ಜೊತೆಗೆ 'ಕಲ್ಲು ಕರಗುವ ಸಮಯ' ಕಥಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿವೆ.

ಲಂಕೇಶ್ ಅವರು 2000ದ ಜನವರಿ 25ರಂದು ಅಸು ನೀಗಿದರು.

# 3. ಅವ್ವ

–ಬೆಸಗರಹಳ್ಳಿ ರಾಮಣ್ಣ

ತಮ್ಮ ಮುಂದೆ ಹಾಕಿದ್ದ ಹಸಿರುಹುಲ್ಲಿನ ಎಳೆಎಳೆಗಳನ್ನು ತಮ್ಮ ಎಳೆಯ ತೆಳುನಾಲಗೆಯಿಂದ ಮೇಲೆತ್ತಿ ಬಾಯಿಗೆ ಸೇರಿಸಿ ಅಗಿಯುತ್ತಿದ್ದ ಆರು ತಿಂಗಳ ಅವಳಿ–ಜವಳಿ ಕರುಗಳ ಕತ್ತನ್ನು ತಬ್ಬಿಕೊಂಡು, ಮುಖಕ್ಕೆ ಸೇರಿಸಿ, ಮುತ್ತಿಕ್ಕುತ್ತ ಆಗಾಗ್ಗೆ 'ಗೊಂದೊಳ'ಲನ್ನು ಒಂದು ಕೈಯಿಂದ ಪ್ರೀತಿಯಿಂದ ಜಗ್ಗಿಸಿ ಕರುಗಳು ಚಕ್ಕಳಗುಳಿಯಿಟ್ಟಂತಾಗಿ ಕೊಸರಿ ಕೊಳ್ಳಲು ಯತ್ನಿಸಿದಾಗ ಅವುಗಳ ಪುಟ್ಟ ಕೊಂಬುಗಳ ನಡುವೆ ತುರುಚಿ ಸುಮ್ಮನಿರಿಸಿ ಮತ್ತೆ ಮುಖಕ್ಕೆ ಮುಖ ಕೂಡಿಸಿ "ಲೇ ಸುಮ್ಮನಿರಿ. ಸಂಕ್ರಾಂತಿ ಹಬ್ಬಕ್ಕೆ ನಿಮಗೆ ಹಾಲ್ಮಣಿ, ಗಂಟೆ ಗೆಜ್ಜೆ ಹಾಕಿ, ಬಣ್ಣ ಬಳಿದು ಕಿಚಾಯ್ಸಿಬಿಡ್ತೀನಿ" ಎನ್ನುವ ಮೊಮ್ಮಗನ ಮಾತುಗಳನ್ನು ಕೇಳಿ, ತೊಟ್ಟಿಯ ಬೆಳಕಿನಲ್ಲಿ ಅಕ್ಕಿ ಸೋಸುತ್ತಿದ್ದ ಕೆಂಪಕ್ಕನಿಗೆ ನಗು ಬಂತು.

"ಲೋ! ಬಾ ಇತ್ತಾಗಿ, ಕಿಸಾಯಿಸ್ತಿತಾನೆ ಕನ, ಅದೇನು ಹಿಟ್ಟಿನ ಮುದ್ದೆ, ಅವರೆಕಾಳು ಅಲ್ಲಕನ. ಈಗಿನಿಂದಲೇ ಅವಕ್ಕೆ ಸೊಣಕೂದ ಕಲ್ಸೀಯ? ಚಬ್ಕೆ ತತ್ತೀನಿ ನೋಡೀಗ" ಎಂದರೂ ಲೆಕ್ಕಕ್ಕೆ ತೆಗೆದುಕೊಳ್ಳದೆ ಒಂಬತ್ತು ವರ್ಷದ ಪುಟ್ಟರಾಮ, "ಅಮ್ಮ..ಅಮ್ಮೋ ನೋಡಿಲ್ಲಿ! ನನ್ನ ಕೈಯ ಎಂಗೆ ನೆಕ್ಕುತಾವೆ" ಎಂದು ಪ್ರಪಂಚವೇ ತನ್ನ ಕೈಗೆ ಸಿಕ್ಕಿದವನಂತೆ ಕೂಗಿದ.

ಕೆಂಪಕ್ಕ "ಅದೇನೇನು ಮಾಡಿಯೋ ಮಾಡು. ನಿನಗೆ ಕಜ್ಜಾಯ ಕಡಿಮೆ ಆದೊ!" ಎಂದು ಕಣ್ಣು ಮಳ್ಳಿಸಿ, ಹುಸಿ ಕೋಪ ತೋರಿಸಿ ಸುಮ್ಮನಾದಳು.

"ಹಸ ಏನೋ ಮುದಿ. ಕರುಗೋಳು ಚೆನ್ನ ಇದ್ದಂಗವೆ ಕನ, ನೀವು ಯಾರೂ ನೋಡಬೇಕಿಲ್ಲ. ಈ ಸುತ್ತಮುತ್ತ ಅವಳಿ–ಜವಳಿ ಕರುಗಳೇ ಇಲ್ಲ." ತನ್ನ ಮಗ ಚನ್ನಣ್ಣನ ಸದ್ದು. ಕೆಂಪಕ್ಕ ಕುತೂಹಲದಿಂದ ಮನೆಯ ಬಾಗಿಲ ಬಳಿ ಬಂದು ನೋಡಿದಳು. ಮಗನ ಜೊತೆಯಲ್ಲಿ ದಳ್ಳಾಳಿ ಕಚ್ಚೆನಿಂಗ; ಇನ್ನಿಬ್ಬರು. ತನಗೆ ಗುರುತಿಲ್ಲದವರು. "ಯಾರೋ ದನೀನ

ವ್ಯಾಪಾರದೋರು, ನಂಮನೆಗ್ಯಾಕೆ ಬಂದಾರು?" ಎಂದು. ಆಶ್ಚರ್ಯದಿಂದ ಮಗ ಆಡಿದ ಮಾತುಗಳಿಂದ "ಹಸ ಕರುಗಳ ಮಾರಬೇಕು ಅಂತ ಮನಸ್ಸು ಮಾಡಿರಬೇಕು. ಇವನಿಗ್ಯಾಕೆ ಬತ್ತು ಈ ದುರ್ಬುದ್ದಿ" ಎಂದು ಗೊಣಗಿಕೊಳ್ಳುತ್ತಿದ್ದಂತೆಯೇ ಕಚ್ಚಿ ನಿಂಗಣ್ಣನ ಜೊತೆಯಲ್ಲಿ ಇಬ್ಬರು ಹೊಸಬರೊಡನೆ ಮನೆಗೆ ಬಂದು ಕೊಟ್ಟಿಗೆಯನ್ನು ಸಮೀಪಿಸಿ ನಿಂತರು. ಕರುಗಳು ಹೊಸಬರನ್ನು ಕಂಡು ಬೆಚ್ಚಿ ಹಿಂದಕ್ಕೆ–ಮುಂದಕ್ಕೆ ತುಯ್ದಾಡಲಾರಂಭಿಸಿದುವು. ಪುಟ್ಟರಾಮ "ಹೋ! ಓ ಓಮ ಓಮ' ಎಂದು ಎರಡರ ಮಧ್ಯೆ ನಿಂತು ಬೆನ್ನು ಸವರಿ ಸುಮ್ಮನಿರಿಸಿದ.

ಕಚ್ಚೆ ನಿಂಗಣ್ಣ "ಲೋ! ಪುಟ್ಟರಾಮ ನಿಮ್ಮ ಹಸ–ಕರುಗೋಳ ಮಾರಬೇಕು ಅಂತ ತೀರ್ಮಾನ ಮಾಡ್ದೋಕಲ" ಎಂದ.

"ಹೂಂ....ಕೊಟ್ಟುಬುಡ್ತಾರೆ ಬಾ" ಪುಟ್ಟರಾಮ ರಾಗ ಎಳೆದ.

'ಎಲಾ ನಾನು ನೆನಸಿದ್ದಂಗೇ ಆಯ್ತು' ಎಂದು ಮನಸ್ಸಿನಲ್ಲೇ ಅಂದುಕೊಂಡು ಕೆಂಪಕ್ಕ ಮೊರವನ್ನು ಒಳಮನೆ ಒಳಗೆ ಇಟ್ಟು ಬಂದು "ಲೋ! ಮಗ ಹಸಕರುಗೋಳ ಮಾರೂಕೆ ಈಗ ಅಂತ ದರ್ದೇನು? ಇವು ನಮ್ಮ ಸ್ವತ್ತಲ್ಲ. ನನ್ನ ಸೊಸೆ ತನ್ನ ಅಪ್ಪನ ಮನೆಯಿಂದ ತಂದದ್ದು. ಅವಳು ಕಣ್ಣುಮುಚ್ಚಿ ಇನ್ನೂ ಎರಡೂವರೆ ವರ್ಷ ತುಂಬಲಿಲ್ಲ. ಆಗ್ಲೆ ಮಾರೂಕೆ ಹೊರಟಪ್ಪ! ಮೊದಲು ಹುಟ್ಟಿದ ಕರುಗೋಳೆಲ್ಲಾನೂ ಹಿಂಗೇ ತೊಲ್ದೇ. ಸಾಕಿದ್ರೆ ಈ ಸುತ್ತುಮುತ್ತಿಗೇ ಐನಾತಿ ಜೊತೆ ಇವು. ಈಗಲೇ ಮಾರಿ ಯಾರ ಮನೆ ಹಾಳುಮಾಡಬೇಕು ಅಂತ ಮಾಡಿದ್ದೀ?" ಎಂದು ಮಗನ ಮುಖಕ್ಕೆ ಕೈಯಿಂದ ತಿವಿಯುವಂತೆ ಹೋದಳು.

"ನೀನು ಬಾಯಿ ಮುಚ್ಕಂಡು ಸುಮ್ಮನಿರು ಮಂತೆ. ಹಸ ಮೊದಲೇ ಮುದಿ, ಇನ್ನು ಕರುಗೋಳ ನಂ ಕೈಲಿ ಚೆನ್ನಾಗಿ ಸಾಕೂಕಾದದೇ? ಗಿರಾಕಿ ಬಂದಿದ್ದಾಗಲೇ ಮಾರುಬುಡ್ವ, ನೀನು ಅಡ್ಡಲಾಗಿ ಬರಬ್ಯಾಡ" ಚನ್ನಣ್ಣ ಮೆಲ್ಲಗೆ ಹೇಳಿದ.

"ನಂ ಮನೇಲಿ ನೂರಾರು ದನ ಇಲ್ಲ. ನಿನ್ನ ಕೈಲಿ ಆಗ್ದೆ ಹೋದ್ರೆ ನಾನು ಸಾಕೀನಿ ಬಾಯಿ ಮುಚ್ಚು."

"ನೀನು ಬಲು ಸಾಕುಬುಡ್ತಿ!"

"ಇಲ್ಲ ಬುಟ್ಟುಬುಡ್ತಾರೆ." ಕೆಂಪಕ್ಕನ ಏರಿದ ಧ್ವನಿಗೆ ಕೊಂಡುಕೊಳ್ಳಲು ಬಂದಿದ್ದವರು ಬೆದರಿ ಕಚ್ಚೆ ನಿಂಗಣ್ಣನ ಕಡೆ ಪ್ರಶ್ನಾರ್ಥಕ ದೃಷ್ಟಿ ಬೀರಿದರು. ಅವನು "ಕೆಂಪಕ್ಕೋ...ನಿನ್ನ ಮಗ ಏನೂ ಮನೆಹಾಳು ಕೆಲ್ಸ ಮಾಡೂಕೆ ಹೊರಟಿಲ್ಲ ಕನ, ಸುಮ್ಮನಿರು. ಅವ್ವ ಮಗ ಇಬ್ಬರೂ ಸೇರಿ ಮಾತಾಡ್ಕಂಡು ಅದೇನು ವ್ಯಾಪಾರ ಹೇಳಿ" ಎಂದ. ಕೆಂಪಕ್ಕನಿಗೆ ಕೋಪ ಕೇತಾರ ಮುಟ್ಟಿತು.

"ಲೋ! ಕಚ್ಚೆ ನೀನು ನಡಿ. ನಿನಗೆ ದಳ್ಳಾಳಿ ಬೇಕು. ಯಾರ ಮನೆ ಹಾಳಾದ್ರೆ ನಿನಗೇನು? ಮನೆಯಿಂದ ಆಚೆ ನಡೀ ಅಂದೆ" ಎಂದು ಗಡುಸಾಗಿ ಹೇಳಿ, ಬೆಟ್ಟಿನಿಂದ ಮನೆಯ ಬಾಗಿಲ ಕಡೆ ತೋರಿಸಿದಳು. ಕೊಂಡುಕೊಳ್ಳಲು ಬಂದಿದ್ದವರ ಕಡೆ ತಿರುಗಿ "ಅಪ್ಪ ನಿಮ್ಮ ಕೈ ಮುಗೀತೀನಿ ಹೋಗಿ, ಹಸ ಕರುಗೋಳ ನಾವು ಕೊಡೋದಿಲ್ಲ" ಎಂದು ಕೈ ಮುಗಿದಳು. ಅವರಿಗೆ ಕಣ್ಣು ಕಟ್ಟಿ ಸಂತೆಗೆ ಬಿಟ್ಟಂತಾಯಿತು. ಕಚ್ಚೆ ನಿಂಗಣ್ಣನ ಕಡೆ ನೋಡಿದರು. ಅವನು "ಬನ್ನಿ, ಇನ್ನೇನು ಕೆಲ್ಸ ಇಲ್ಲಿ ನಮ್ಗೆ? ಒಳ್ಳೆ ವ್ಯಾಪಾರಕ್ಕೆ ಬಂದಂಗಾಯ್ತು" ಎಂದು ಮಳ್ಳಿಯಂತೆ ಬಾಗಿಲ ಕಡೆಗೆ ಹೆಜ್ಜೆ ಹಾಕಿದ. ಚನ್ನಣ್ಣ "ನಿಂಗಣ್ಣ.... ನಿಂಗಣ್ಣೋ ನನ್ನ ಮಾತ ಕೇಳು ರವಷ್ಟ" ಎಂದು ಕೂಗಿಕೊಂಡರೂ ಅವನು ಕೇಳಿಸದವನಂತೆ ಹೊರಟುಹೋದ. ಚಿನ್ನಣ್ಣನಿಗೆ ಆದ ಅವಮಾನದಿಂದ ಕೋಪ ಕಾವೇರಿ ಉರಿಯತೊಡಗಿದ.

"ಅವ್ವೋ ನಿನ್ನ ನಾಲ್ಗೆ ಅದೆಷ್ಟು ಜೋರು. ರಾಮ ರಾಮ!"

"ಇಲ್ಲ ನೀನು ಆಡ್ದಂಗೇ ಬುಡಬೇಕೆ? ಬತ್ತ, ರಾಗಿ ಮಾರ್ದೆ, ತೋಟದೇಲಿದ್ದ ತೆಂಗಿನಕಾಯಿ ಬಂದಷ್ಟು ದುಡ್ಡಿಗೆ ಮಾರ್ದೆ, ಇನ್ನೂ ಏನೇನು ಮಾರಬೇಕೂ ಅಂತ ಮಾಡಿದ್ದೀ? ಇವತ್ತು ಹಸ ಕರಗೋಳು: ನಾಳಾಕೆ ಭೂಮಿ, ನಾಳಿದ್ದು ಈ ಮಕ್ಕಳನ್ನೂ ಜೀತಕ್ಕೆ ಇರಿಸಬೇಕು ಅಂತ ಮಾಡಿದ್ದೀಯ? ಸದಾ ನಾಟಕ ಸಿನಿಮಾ ಅಂತ ನಿಂತಿದ್ದಿ. ಚಿನ್ನದಂತ ಸೊಸೆ, ಅದೃಷ್ಟ ಇರಲಿಲ್ಲ ಎರಡು ಮುತ್ತಿನಂತ ಗಂಡುಮಕ್ಕಳ ಬುಟ್ಟು ಜವರಾಯನ ಪಟ್ಣ ಸೇರಿದ್ಲು, ಮದ್ವೆ ಆಗು ಅಂದ್ರೆ ಬ್ಯಾಡ ಅಂತ, ಆ ಹಾಳು ಗಂಡನ್ನ ಬುಟ್ಟು ಬಂದು ಅಪ್ಪನ ಮನೆ ಸೇರ್ಕಂಡ ಪುಟ್ಟನಿಂಗೀ ಮಡಲಿಗೆ ಎಲ್ಲಾನೂ ಸುರೀಬೇಕು ಅಂತ ನಿಂತಿದ್ದೀಯಲ್ಲ, ಇದು ಯಾವ ದೇವ್ರು ಮೆಚ್ಚು ಕೆಲ್ಸ?" ಒಂದೇ ಉಸಿರಿಗೆ ಕೆಂಪಕ್ಕ

ಆಡಿದ ಮಾತುಗಳಿಂದ ಉಸಿರು ಸಿಕ್ಕಿದಂತಾಗಿ ಕಣ್ಣಲ್ಲಿ ನೀರು ತುಂಬಿಕೊಂಡು ಮಾತು ನಿಲ್ಲಿಸಿದಳು. ಚನ್ನಣ್ಣನಿಗೆ ನೆಲ ಎದ್ದು ಒದ್ದಂತಾಯಿತು.

"ಏನಾದ್ರೂ ಮಾಡ್ಕೊ ಹೋಗು, ನಿನ್ನಿಷ್ಟ" ಎಂದವನೇ ಸರಸರನೆ ಮೆಟ್ಟಿಲಿಳಿದು ಹೊರಟುಹೋದ. ಪುಟ್ಟರಾಮ ಬೆಪ್ಪಾಗಿ ಕರುಗಳ ಮಧ್ಯದಲ್ಲೇ ನಿಂತು ನೋಡುತ್ತಿದ್ದ. ಕರುಗಳೂ ಶಬ್ದಕ್ಕೆ ಬೆಚ್ಚಿ ಕೆಂಪಕ್ಕನ ಕಡೆಯೇ ನೋಡುತ್ತಿದ್ದುವು.

* * *

ಹಸುವನ್ನು ಊರಿನ ಇತರ ದನಗಳೊಡನೆ ಒಳಗೆರೆಯಲ್ಲಿ ಮೇಯಲು ಬಿಟ್ಟು ಕೆಂಪಕ್ಕನ ಹಿರಿಯ ಮೊಮ್ಮಗ ದೇವರಾಜ ಓರಗೆಯ ಹುಡುಗರೊಡನೆ ಕಾಲುವೆಯ ಮರಳಿನಲ್ಲಿ ಕಪ್ಪೆಗೂಡು ಕಟ್ಟಿಕೊಂಡು ಆಟವಾಡುವುದರಲ್ಲಿ ಮಗ್ನನಾಗಿದ್ದ. ಮಳೆ ಬರುವ ಮುನ್ಸೂಚನೆಯಾಗಿ ಅಲ್ಲಲ್ಲಿ ಮುಗಿಲು ಬಿದ್ದಿದ್ದು ಇದ್ದಕ್ಕಿದ್ದಂತೆಯೇ ಧಾರಾಕಾರವಾಗಿ ಸುರಿಯಲಾರಂಭಿಸಿತು. ಜೊತೆಗೆ ಆಲಿಕಲ್ಲುಗಳು ಬೇರೆ. ಹುಡುಗರೆಲ್ಲ ಓಡಿ ಬಸವಣ್ಣನ ಗುಡಿ ಹೊಕ್ಕರು. ದೇವರಾಜ ಗುಡಿಯಿಂದ ಇಣಿಕಿ ನೋಡಿದ. ಮಳೆಯ ಮಸುಕು ಮಸುಕಾದ ಬೂದಿ ಬಣ್ಣದ ಪರದೆ ಆಚೆ ಏನಿರುವುದೆಂದು ಸ್ಪಷ್ಟವಾಗಲಿಲ್ಲ. ಮಳೆಯ ಹೊಡೆತವನ್ನು ತಡೆಯಲಾರದೆ ದನಗಳು ಊರಿನ ದಾರಿ ಹಿಡಿದುವು. ದೇವರಾಜ ನೋಡಿದ. ತನ್ನ ಹಸು ಕಣ್ಣಿಗೆ ಬೀಳಲಿಲ್ಲ. ಬೇರೆ ದಾರಿಯಲ್ಲಿ ಹೋಗಿರಬೇಕು. ಕರುಗಳನ್ನು ಅದು ಬಿಟ್ಟಿರಲಾರದು ಎಂದು ಸಮಾಧಾನ ಪಟ್ಟುಕೊಂಡ. ಮಳೆಯಲ್ಲೇ ನೆನೆದು ಮನೆಗೆ ಹೋಗಿ ನೋಡಬೇಕು ಎಂದು ತವಕಪಟ್ಟರೂ ಮಳೆಯ ರಭಸವನ್ನು ನೋಡಿ ಮನೆಗೆ ಹೋಗುವುದರೊಳಗೆ ನೆನೆದು ಮುದ್ದೆಯಾಗಬೇಕಾಗುತ್ತದೆಂದು ಸುಮ್ಮನಾದ. ಬಸವಣ್ಣನ ಗುಡಿಯ ಮೆಟ್ಟಲುಗಳ ಮೇಲೆ, ಅವುಗಳ ಸುತ್ತಮುತ್ತ ಬೀಳುವ ಆಲಿಕಲ್ಲುಗಳನ್ನು ಕೈಯಲ್ಲಿ ಹಿಡಿದು ತಿನ್ನುವುದು.

"ಅಯ್ಯಯ್ಯೋ ಅವ್ವಾ" ಎಂದು ಕಣ್ಣುಮುಚ್ಚಿಕೊಂಡು ನಡುಗುತ್ತ ನುಂಗುವ ತಮಾಷೆಯಲ್ಲಿ ಕಾಲ ಉರುಳಿದ್ದೇ ಅವನಿಗೆ ತಿಳಿಯಲಿಲ್ಲ. ಮಳೆಯ ರಭಸ ತಗ್ಗುವುದರೊಳಗೆ ಕತ್ತಲೆ ಆಗಲೇ ಮೆಲ್ಲಮೆಲ್ಲಗೆ ಬಾನಿನಿಂದ ಇಳಿಯಲು ಪ್ರಾರಂಭಿಸಿತ್ತು.

ಮತ್ತೆ ಹಸುವಿನ ಗೀಳು ಅವನನ್ನು ಕಾಡತೊಡಗಿತು. ಏನಾಯಿತೋ ಎಂದು ದಿಗಿಲಿನಿಂದ ಮಳೆಯಲ್ಲೇ ಮನೆ ಕಡೆ ಓಡಿದ.

ಕರುಗಳು "ಅಂಬಾ....ಅಂಬಾ" ಎಂದು ಒಂದೇ ಸಮನೆ ಕಿರುಚುತ್ತಿವೆ. ಮನೆಯ ಮೆಟ್ಟಲುಗಳನ್ನು ನಾಗಾಲೋಟದಿಂದ ಬಂದು ಹತ್ತಿದ ದೇವರಾಜನಿಗೆ ಎದೆ ಧಸಕ್ಕೆಂದಿತು. ಕೆಂಪಕ್ಕ ದೇವರಾಜನನ್ನು "ಹಸ ಎಲ್ಲಾಲ ಮಗ? ಎಲ್ಲಾರ ದನಗೋಳೂ ಬಂದೋ, ಕರಗಳ ನೆನಕಂಡು ಓಡೋಡಿ ಬತ್ತಿದ್ದ ಹಸ ಇವತ್ತು ಯಾಕೆ ಬರಲಿಲ್ಲ?" ಎಂದು ಕೇಳಿದರೆ, ಅದಕ್ಕೆ ಅಳುವೇ ಉತ್ತರವೋ ಎನ್ನವಂತೆ ದೇವರಾಜ ಅಳಲಾರಂಭಿಸಿದ. ಕೆಂಪಕ್ಕನಿಗೆ ಚಿಂತೆ ಶುರುವಾಯಿತು. ಹಸು ಕರುಗಳನ್ನು ಮಾರಬೇಕೆಂದು ಮಗ ಮನಸ್ಸು ಮಾಡಿ ಗಿರಾಕಿಗಳನ್ನು ಕರೆದುಕೊಂಡು ಬಂದು ತನ್ನ ಕೈಯಲ್ಲಿ 'ಮೋಕ್ಷ' ಇಳಿಸಿಕೊಂಡು ಹೋದ ದಿನವೇ ಹೀಗಾಗಬೇಕೆ? ಎಂದು ಗೊಣಗಿದಳು. ಮಳೆಗೆ ಸಿಕ್ಕಿ ಕರುಗಳನ್ನು ನೆನೆದು ಊರಿನ ದನಗಳ ಜೊತೆಯಲ್ಲಿ ಊರಿನ ಕಡೆ ಓಡಿ ಬರುವಾಗ ಎಲ್ಲಾದರೂ ಕಾಲುವೆ ನೆಗೆಯುವಾಗ ಜಾರಿ ಬಿದ್ದು ಚಪ್ಪೆಗೋ, ಕಾಲಿಗೋ ಅಪಾರ ಏಟು ಬಿದ್ದು ಏಳಲಾರದೇ ಮಲಗಿ ಬಿಟ್ಟಿರಬೇಕು. ಮೊದಲೇ ಮುದಿ ಹಸುವಾದ್ದರಿಂದ ಕೆಂಪಕ್ಕನ ತಲೆಯಲ್ಲಿ ಚಿಂತೆಗಳು ಒಂದಾದಮೇಲೊಂದರಂತೆ ಸುಳಿಯಲಾರಂಭಿಸಿದವು. ಒಳಗೆರೆಗೆ ಕಷ್ಟವಾದರೂ ಹೋಗಿ ನೋಡಿಕೊಂಡು ಬರಬೇಕೆಂದು ಕೆಂಪಕ್ಕನ ಮನಸ್ಸು ತವಕಿಸಿದರೂ ಮಳೆ ಇನ್ನೂ ಬೀಳುತ್ತಿದ್ದುದರಿಂದ ಸುಮ್ಮನಾದಳು. "ಎಲ್ಲೋ ನಿಂತಿರಬೇಕು. ಎಲ್ಲಿಗೋದಾದು ಬತ್ತದೆ ಸುಮ್ಮಿನಿರು ಅಳಬೇಡ" ಎಂದು ದೇವರಾಜನನ್ನು ಸುಮ್ಮನಿರಿಸಲು ಧೈರ್ಯದ ಮಾತುಗಳನ್ನಾಡಿದಳು. ಅವನು ತನ್ನ ಅಪ್ಪ, ಚನ್ನಣ್ಣ ಮನೆಗೆ ಬರುತ್ತಲೇ 'ಕಜ್ಜಾಯ' ಚೆನ್ನಾಗಿ ಬೀಳುತ್ತವೆ ಎನ್ನುವುದನ್ನು ನೆನೆದುಕೊಂಡಾಗಲೆಲ್ಲ ರಾಗವನ್ನು ಜೋರುಮಾಡುತ್ತಿದ್ದ. ಕರುಗಳು, ಪುಟ್ಟರಾಮ ಎಷ್ಟು ಸಂತೈಸಿದರೂ "ಅಂಬಾ...ಅಂಬಾ" ಎಂದು ತಾಯಿಯನ್ನು ನೆನೆದುಕೊಂಡು ಅರಚುವುದು ಸ್ವಲ್ಪವೂ ನಿಲ್ಲಲಿಲ್ಲ. ಇನ್ನೂ ಜೋರಾದುವು. ಕೆಂಪಕ್ಕ ದೀಪ ಹತ್ತಿಸಿದಳು. ಎಲ್ಲ ದೇವರನ್ನೂ ನೆನೆದಳು. ವಿಶೇಷವಾಗಿ ನಂದಿ ಬಸಪ್ಪನನ್ನು ನೆನೆದು

'ಹಸೀಗೆ ಏನೂ ನೋವಾಗ್ದೆ ವೊತಾರೆ ಹೊತ್ಗೆ ಬಂದ್ರೆ ನಿನ್ಗೆ ಮುಂದಿನ ಸಂಕ್ರಾಂತಿಗೆ ಬೆಳ್ಳಿಯ ಅಣಸ ಮಾಡಸ್ತೀನಿ' ಎಂದು ಹರಕೆ ಕಟ್ಟಿಕೊಂಡಳು.

ಮಳೆ ನಿಧಾನವಾಗಿ ನಿಲ್ಲಲಾರಂಭಿಸಿತು.

ಕುಟುಕಲು ಮಳೆಯಲ್ಲಿ ನೆನೆದುಕೊಂಡು ಬಂದ ಚನ್ನಣ್ಣ "ಅಂಬಾ...ಅಂಬಾ" ಎಂದು ಒಂದೇ ಸಮನೆ ತಬ್ಬಲಿಗಳಂತೆ ಅರಚುತ್ತಿರುವ ಕರುಗಳನ್ನು ನೋಡಿ ಕೊಟ್ಟಿಗೆಯಲ್ಲಿ ರಾತ್ರಿಯಾದರೂ ಹಸುವನ್ನು ಕಾಣದೆ ಕೆಂಡವಾಗಿ ಹೋದ. ಅಪ್ಪನನ್ನು ಕಾಣುತ್ತಲೇ ದೇವರಾಜ ಕೋಣೆಯನ್ನು ಸೇರಿ ಕೆಂಪಕ್ಕನ ಬೆನ್ನು ಬಿದ್ದ.

"ಲೋ! ದೇವರಾಜ ಹಸ ಎಲ್ಲಲಾ. ಮೇಯಾಕೆ ಬುಟ್ಟುಬುಟ್ಟು ಎಲ್ಲಿ ಕುಣೀತಾ ನಿಂತಿದ್ದೊ? ಇದೆಲ್ಲಾನೂ ಕಂಡೇ ಅಲ್ವೆ ನಾನು ಮಾರುಬುಡ್ಬೇಕು ಅನ್ನೋದು. ಅವ್ವಾ ಅವ್ವೋ ಆ ದೇವರಾಜನ್ನ ಆಚೆಗೆ ನೂಕು ಇಲ್ಲಿ, ಹುಟ್ಟಿದ ದಿನ ಕಾಣಿಸ್ತೀನಿ. ಯಾರ ಬತ್ತಕ್ಕೆ, ಕಬ್ಬಿಗೆ ಹೋಗಿ ಹಿಡ್ದು ಕಟ್ಟಾಕಿಕೊಂಡಿದ್ದಾರೋ ಏನು ಕತೆಯೋ" ಎಂದು ಗಡುಸಾಗಿ ಹೇಳಿದ್ದನ್ನು ಕೇಳಿ ಕೆಂಪಕ್ಕ "ಸುಮ್ನೆ ಯಾಕೆ ರೇಗಿ? ಮಳೆ ಬತ್ತು ದೇವರಾಜ ಎಲ್ಲೋ ನಿಂತ್ಕಂಡ. ಎಲ್ಲೋ ತಪ್ಪಿಸ್ಕಂಡು ನಿಂತಿರಬೇಕು. ಅದೇನು ಮಾಡೂಕಾದಾತು? ಲಾಟೀನು ಹತ್ತುಸ್ಕೊಂಡು ನೋಡ್ಕಂಡು ಬಾ. ದೇವರಾಜನಿಗೆ ಬೆನ್ ಮೇಲೆ ಕೈ ಮಡಗಿದರೆ ನನ್ನಾಣೆ" ಎಂದಳು.

ಚನ್ನಣ್ಣ, "ಎದ್ರೆ ಬಿದ್ರೆ ನಿನ್ದು ಆಣೆ–ಭಾಷೆ ತಾನೆ. ಥೂ! ಒಳ್ಳೆ ಅನಿಷ್ಟದ ಕೆಲ್ಸವಾಯ್ತಲ್ಲಪ್ಪ, ಎಲ್ಲ ಲಾಟೀನು" ಎಂದು ತಾನೇ ಹುಡುಕಿ ತೆಗೆದುಕೊಂಡು ದೀಪದ ಬೆಳಕಿನಲ್ಲಿ ಗಾಜು ಒರಸಿ, ಬತ್ತಿ ಸರಿಮಾಡಿ, ಎಣ್ಣೆ ಹಾಕಿ ಹತ್ತಿಸಿಕೊಂಡು, ಕೊಡೆ ತೆಗೆದುಕೊಂಡು ಬೀದಿಗಿಳಿದಾಗ ಮಳೆ ಮತ್ತೆ ಗಡುಸಾಗಲು ಪ್ರಾರಂಭಿಸಿತು. ಬೀದಿಯ ಕೊನೆಗೆ ಬಂದಾಗ ತಲೆಯ ಮೇಲೆ ಚೌಕ 'ಗುಬ್ಬರ' ಹಾಕಿಕೊಂಡು ಎದುರು ಬಂದ ಶಿವಲಿಂಗೇಗೌಡರ ಮನೆಯ ಆಳು ನಿಂಗಣ್ಣ, "ಯಾರಲ್ಲಿ ಲಾಟೀನು ಹಿಡ್ಕೊಂಡೋಗೂರೂ? ಚನ್ನಣ್ಣನೇ ?" ಎಂದ.

"ಹೂಂ ಕನೋ ನಿಂಗಣ್ಣ. ಹಸ ತಪ್ಪಿಸಿಕೊಂಡದೆ, ನೋಡೂವ ಅಂತ."

"ಇಲ್ಲಿ ಹುಡುಕಿದ್ರೆ ಎಲ್ಲಿ ಸಿಕ್ಕಾದು ಹಸ. ನಮ್ಮ ಗೌಡ್ರ ಎರ್ಡು ಹಸುಗೋಳು ನಿಮ್ದು ಕೆರೆ ಮೇಗಳ ದೊಡ್ಡಿಯೋರ ಕಬ್ಬಿನ ಗದ್ದೇಲಿ ನುಗ್ಗಿ ಮೇಯ್ತಾ ಇದ್ದವಂತೆ

ಹೊಡ್ಕೊಂಡೋದ್ರಂತೆ ಕನೋ ಮಾರಾಯ. ಈ ಮಳೇಲಿ ಎರಡು ಮೈಲಿ ಯಾರು ಹೋದಾರು ಬೆಳಕರೀತಲೇ ಹೋಗಿ ಬುಡಸ್ಕಂಡ್ ಬರುವ" ಎಂದವನೆ ಮನೆಯ ದಾರಿ ಹಿಡಿದ.

ಚನ್ನಣ್ಣನ ಮನಸ್ಸಿಗೂ ನಿಂಗಣ್ಣ ಹೇಳಿದ್ದೇ ಸರಿ ಎಂದು ಮನೆಯ ದಾರಿ ಹಿಡಿದು, ಮನೆ ಸೇರಿ ನಡೆದುದನ್ನು ಕೆಂಪಕ್ಕನಿಗೆ ಹೇಳಿ ಮೂಲೆಯಲ್ಲಿ ನಿಂತಿದ್ದ ದೇವರಾಜನಿಗೆ "ಲೇ, ನಿನ್ನ ಚರ್ಮ ಸುಲ್ದು ಸಾಯಿಸಬೇಕು. ಹೋಗು ಕೆರೇ ಮೇಗಳ ದೊಡ್ಡಿಯೋರು ಹಿಡಕೊಂಡೋಗಿದ್ದಾರಂತೆ. ಬುಡಸ್ಕಂಡ್ ಬಾ. ಅವರ ಕಬ್ಬೆಲ್ಲಾನೂ ನುಣ್ಗೆ ಮೇದಿದ್ದಾದಂತೆ!" ಎಂದು 'ಹೂಂ'ಕರಿಸಿ ದುರುಗುಟ್ಟಿ ನೋಡಿದ. ದೇವರಾಜ ಅಳುತ್ತಾ ಕೆಂಪಕ್ಕನ ಬಳಿ ಹೋಗಿ ನಿಂತು ಚಿನ್ನಣ್ಣನ ಕಡೆ ಕ್ಷಮೆ ಬೇಡುವವನಂತೆ ನೋಡಿದ.

ಕರುಗಳು ನಿಂತ ಜಾಗದಲ್ಲಿ ನಿಲ್ಲದೆ ತುಯ್ದಾಡುತ್ತ "ಅಂಬಾ...ಅಂಬಾ" ಎಂದು ಕಿರುಚಿಕೊಳ್ಳಲಾರಂಭಿಸಿದುವು. ಮುಂದೆ ಬಿದ್ದಿರುವ ಹಸಿರು ಹುಲ್ಲು ಮುಟ್ಟಲಿಲ್ಲ. ಹುರುಳಿ ಆಡಿಸಿ ಮುದ್ದೆ ಮಾಡಿ ಕೊಟ್ಟರೆ ಸ್ವಲ್ಪ ತಿಂದು ಉಳಿದುದನ್ನು ಉಗಿದು, ಬಾಗಿಲು ಕಡೆಯೇ ನೆಟ್ಟ ದೃಷ್ಟಿಯಿಂದ ನೋಡುತ್ತಾ "ಅಂಬಾ...ಅಂಬಾ" ಎಂದು ತಮ್ಮ ಭಾಷೆಯಲ್ಲಿ ಮನೆಗೆ ಬಾರದ ಅವ್ವನನ್ನು ಕೂಗಿ ಕರೆಯುವುವು. ಚನ್ನಣ್ಣನಿಗೆ ತಲೆ ಚಿಟ್ಟು ಹಿಡಿದುಹೋಯಿತು. "ಈ ಹಾಳಾಗೋದೋವು ಅದೇನಿಂಗೆ ಅರಚಾವು. ಥೂ" ಎಂದು ಗದರಿಸಿದ.

ಕೆಂಪಕ್ಕನಿಗೆ ಕೆಣಕಿದಂತಾಯಿತು. "ಅವಕ್ಕೆ ಅವ್ವ ಅಂದ್ರೆ ಏನು ಅಂತ ಗೊತ್ತು, ಅರಚತಾವೆ. ನೀನು ಸುಮ್ಮನಿರು. ನಿನಗೆ ಏನು ಅರ್ಥವಾದಾತು" ಎಂದು ತಾಯಿಯನ್ನು ಕಳೆದುಕೊಂಡು ತನ್ನ ಆಸರೆಯಲ್ಲಿ ಬೆಳೆಯುತ್ತಿರುವ, ಸದ್ದಿಲ್ಲದೆ ದೀಪದ ಬೆಳಕಿನಲ್ಲಿ ಗೋಡೆ ಒರಗಿ ಕುಳಿತಿರುವ ಮೊಮ್ಮಕ್ಕಳನ್ನು ನೋಡಿದಳು. ಅವರೂ ತಮ್ಮ ಅವ್ವನನ್ನು ಒಳಗೊಳಗೇ ಕರೆದು ಕೊರಗುತ್ತಿರುವುದನ್ನು ಅವರ ಕಳೆಗುಂದಿದ ಮುಖಗಳೇ ಸಾರುತ್ತಿದ್ದವು. ಅಲ್ಲಿಂದ ದೃಷ್ಟಿ ಕಿತ್ತು ಮಗನ ಕಡೆ ನೋಡುವುದಕ್ಕೂ ಕರುಗಳು ಮತ್ತೆ "ಅಂಬಾ" ಎಂದು ಅರಚುವುದಕ್ಕೂ ಒಂದಾಯಿತು. ಚನ್ನಣ್ಣ ಕೊಟ್ಟಿಗೆಗೆ ಹೋಗಿ ಅವುಗಳ ಮುಂದೆ ನಿಂತ. ಅವು ಕತ್ತೆತ್ತಿ ಅವನು ನೀಡಿದ ಕೈಗಳನ್ನು ಪ್ರೀತಿಯಿಂದ ಮೂಸಿ, ನೆಕ್ಕಲಾರಂಭಿಸಿದುವು. ಅವನ

ಕೈಬೆರಳುಗಳನ್ನು ತಮ್ಮ ಅವ್ವನ ಬಳಿ ಹಾಲು ಕುಡಿಯುವಾಗ ಚೀಪುವಂತೆ ಚೀಪಲಾರಂಭಿಸಿದುವು.

ಮಳೆ ಇನ್ನೂ ಹುಯ್ಯತ್ತಲೇ ಇತ್ತು. ಮನೆಯವರೆಲ್ಲ ಉಂಡು ಮಲಗುವುದಕ್ಕೆ ಮುಂಚೆ ಚನ್ನಣ್ಣ ಕರುಗಳ ಬೆನ್ನನ್ನು ಚೆನ್ನಾಗಿ ತೀಡಿ ಮುಂದಕ್ಕೆ ಇನ್ನಷ್ಟು ಹಸಿರು ಹುಲ್ಲನ್ನು ಹಾಕಿ, ಬೆಚ್ಚಗೆ ಕೆಡೆದುಕೊಳ್ಳಲಿ ಎಂದು ಕೆಳಕ್ಕೆ ಒಣ ನೆಲ್ಲುಲ್ಲನ್ನು ಹಾಸಿ ತಾನೂ ಹಜಾರದಲ್ಲಿ ಮಲಗಿಕೊಂಡ. ದೀಪ ತುಂಬಿದ. ಮಿಂಚು ಆಗಾಗ್ಗೆ ಕಾಣಿಸಿಕೊಂಡು ಮಾಯವಾಗುತ್ತಿತ್ತು. ಮಿಂಚಿದ ನಂತರ ಒಮ್ಮೊಮ್ಮೆ ಗುಡುಗಿಗೆ ಕರುಗಳು ಬೆದರಿ ಕೂಗುತ್ತಿದ್ದವು.

ಬೇರೆ ಊರಿನಲ್ಲಿ ಈಗ ಕೆಚ್ಚಲು ತುಂಬಾ ಹಾಲು ತುಂಬಿಕೊಂಡು ಕಬ್ಬಿನ ಗದ್ದೆಯಲ್ಲಿ ಬಾಯಿ ಆಡಿಸಿದ ತಪ್ಪಿಗೆ ಬಿಗಿಯಾಗಿ ಹಗ್ಗದಲ್ಲಿ ಜಗ್ಗದಂತೆ ಕಟ್ಟು ಹಾಕಿಕೊಂಡು ನಿಂತಿರುವ ಮುದಿಯ ಹಸುವಿನ ಸ್ಥಿತಿ ಏನಾಗಿರಬಹುದು ಎಂದು ಚನ್ನಣ್ಣ ಯೋಚಿಸಿದ. ಈ ಯೋಚನೆ ಜೊತೆಗೆ ಅದು ಈ ಕರುಗಳನ್ನು ತಮ್ಮ ಊರಿನ ವಳಗೆರೆಯಲ್ಲಿ ಒಡಕೆಯ ಮಧ್ಯದಲ್ಲಿ ಈಯ್ದು "ಅಂಬಾ" ಎಂದು ಕೂಗುತ್ತಾ ಕರುಗಳನ್ನು 'ಲೊಚಲೊಚನೆ' ನೆಕ್ಕುತ್ತಾ ನಿಂತಿದ್ದು, ತಾನು ಕೆಲವರೊಡನೆ 'ತೆನೆ ಹಸ, ರಾತ್ರಿ ಆದರೂ ಬರಲಿಲ್ಲವಲ್ಲ' ಎಂದು, ದೇವರಾಜನನ್ನು ಬಯ್ಯುತ್ತ, ಹುಡುಕುತ್ತ ಹೋದಾಗ ತನ್ನನ್ನು ಬೇಗ ಗುರುತಿಸದೆ ಯಾರೋ ಕರುಗಳನ್ನು ಕದಿಯೋಕೋ ಏನೋ ಬಂದಿರಬೇಕೆಂದು ತಿವಿಯಲು ಬಂದು "ಹೋ ಹೋ!" ಎಂದು ಜೋರಾಗಿ ಕೂಗಿದಾಗ ನಿಂತು, ಧ್ವನಿಯನ್ನು ಗುರುತಿಸಿ, ಹಾಲಿನಂತಿದ್ದ ತಿಂಗಳ ಬೆಳಕಿನಲ್ಲಿ ಮುಖವನ್ನು ಗುರುತಿಸಿ, ಮೆಲ್ಲಗೆ "ಅಂಬಾ" ಎಂದು ಅರಚುತ್ತಾ ಮೆಲ್ಲನೆ ಕರುಗಳ ಬಳಿ ಹೋಗಿ ನಿಂತು, ಮತ್ತೆ ಮೂಸಿ, ನೆಕ್ಕುತ್ತಾ ನಿಂತ ದೃಶ್ಯವನ್ನು ನೆನೆದು, ಅದು ಈಗ ಕಾದ ಕೊಪ್ಪರಿಗೆಯಲ್ಲಿ ಹಾಕಿದಂತೆ ಕಟ್ಟುಹಾಕಿದ ಜಾಗದಲ್ಲೇ ಕುಣಿಯುತ್ತಿರಬಹುದು. ಅದಕ್ಕೆ ಮೊದಲಿನಿಂದಲೂ ತನ್ನ ಕರುಗೋಳು ಅಂದ್ರೆ ಪಂಚಪ್ರಾಣ ಎಂದುಕೊಂಡಾಗ ತಾನು ಹನ್ನೆರಡು ವರ್ಷದವನಿದ್ದಾಗ ನಡೆದ ಘಟನೆಯನ್ನು ಮೆಲುಕುಹಾಕತೊಡಗಿದ. ಅವತ್ತು ಕೆಂಪಕ್ಕ ಮಜ್ಜಿಗೆ ಸಿಲುಬುತ್ತಿದ್ದಳು. ಸಾಹುಕಾರು ವೀರಭದ್ರಯ್ಯನವರು ಬಂದು ಕೂಗಿದರು,

"ಕೆಂಪಿ...ಯೇ..ಕೆಂಪಿ"

"ಸ್ವಾಮಿ...ಬಂದೆ ಸ್ವಾಮಿ ಬಡವಿ, ಜೊತೆಗೆ ಮುಂಡೆ. ಬಡ್ಡಿಕೊಡಲಾರೆ. ಅಸಲು ಕೊಟ್ಟುಬುಡ್ತೀನಿ" ಎಂದು ಮಜ್ಜಿಗೆ ಸಿಲುಬುವುದನ್ನು ಅಷ್ಟಕ್ಕೇ ನಿಲ್ಲಿಸಿ, ಗುಡಾಣದಲ್ಲಿ ಮಡಗಿದ್ದ ಇನ್ನೂರು ರೂಪಾಯಿಗಳನ್ನು ಕಣ್ಣು ಮಿಟುಕಿಸುವುದರೊಳಗೆ ತೆಗೆದುಕೊಂಡು ಬಂದು ಕೈ ಮುಗಿದು ನಿಂತಳು.

ವೀರಭದ್ರಯ್ಯನವರು "ಬಡ್ಡಿ ಕೊಟ್ಟೇ ಕೊಡಬೇಕು" ಎಂದು ಮುಖ ಸಿಂಡರಿಸಿಕೊಂಡರು.

"ಕೊಡಲಾರೆ, ಕೈಲಿಲ್ಲ" ಕೆಂಪಕ್ಕ ಗೋಗರೆದಳು.

"ಇಲ್ಲದೇ ಇದ್ರೆ ನಿನ್ನ ಮಗನ್ನ ಎರಡು ವರ್ಷ ನಂಮನೇಲಿ ಜೀತಕ್ಕಿರಿಸು."

"ಸ್ವಾಮಿ, ಇನ್ನೊಂದು ಸಾರಿ ಜೀತಕ್ಕೆ ನನ್ನ ಮಗನ್ನ ನಿಂಮನೇಲಿ ಇಸ್ರೂರ್ ಅನ್ನೋ ವಾಕ್ಸು ನೀವು ಕಡೀಸಬ್ಯಾಡಿ. ನಾಳೆ ಬನ್ನೋಗಿ. ನಿಂಬಡ್ಡಿ ಅದೇನು ಬಿಸಾಕ್ತಿನಿ. ದೂಸ್ರ ಮಾತಾಡಬ್ಯಾಡಿ" ಎಂದು ಮುಟ್ಟಿ ನೋಡಿಕೊಳ್ಳುವಂತೆ ಹೇಳಿ; ಓಲೆ, ಕಡಗ, ಅಡ ಮಡಗಿ ಸಾಹುಕಾರನ ಮುಖಕ್ಕೆ ಬಡಿದಂತೆ ಬಡ್ಡಿ ಬಿಸಾಡಿ; ಮುಂದೆಯೂ ಛಲದಿಂದ ದುಡಿದು, ಬದುಕಿ ತನ್ನ, ಸಾಕಿ ಬೆಳೆಸಿದ ತನ್ನ ಅವ್ವ ಕೆಂಪಕ್ಕನ ವ್ಯಕ್ತಿತ್ವ ಚನ್ನಣ್ಣನ ಮುಂದೆ ನೆಲದಿಂದ ಸೂರಿನ ತನಕ ನಿಂತಂತಾಗಿ ಬೆಪ್ಪಾಗಿಹೋದ. "ಇವತ್ತು ಹಸ ಕರುಗೋಳ ಮಾರ್ತಿನಿ ಅಂತ ಆ ದಳ್ಳಾಳಿ ಕಚ್ಚೆ ಮಾತು ಕಟ್ಕಂಡು ಏನೇನೋ ಅಂದುಬುಟ್ಟೆ" ಎಂದು ನೊಂದುಕೊಂಡ ಮನಸ್ಸಿನಿಂದ ಹೊರಳಾಡಿದ.

ಧಡ್...ಧಡೀರ್–ಗುಡುಗೊಂದು ನೆಲ ನಡುಗುವಂತೆ ಗುಡುಗಿತು. ಕರುಗಳೆರಡೂ ಬೆಚ್ಚಿ ಒಮ್ಮೆಯೇ "ಅಂಬಾ" ಎಂದು ಅರಚಿಕೊಂಡವು. ತಬ್ಬಲಿತನದ ಕೂಗು ಅದು.

ಗುಡುಗಿನ ಸದ್ದಿಗೆ ಬೆಚ್ಚಿ ಪುಟ್ಟರಾಮು, ದೇವರಾಜ "ಅಮ್ಮ–ಅಮ್ಮೋ" ಎಂದು ಬೆಚ್ಚಿ ಕೆಂಪಕ್ಕನನ್ನು ತಬ್ಬಿಕೊಂಡರು.

* * *

ಎರಡನೆಯ ಕೋಳಿ ಕೂಗಿತು. ಎಚ್ಚರವಾಗಿ ಕಣ್ಣುಬಿಟ್ಟುಕೊಂಡು ತೊಟ್ಟಿಯಲ್ಲಿ ಕಾಣುತ್ತಿದ್ದ ಆಕಾಶದ ಕಡೆ ನೋಡುತ್ತಿದ್ದ ಚನ್ನಣ್ಣನಿಗೆ ಬೀದಿಯಲ್ಲಿ ದಢ ದಢನೆ ಏನೋ

ಓಡಿಬಂದ ಸದ್ದು ಕೇಳಿಸಿತು. ಅದರ ಹಿಂದೆಯೇ "ಅಂಬಾ" ಎಂದು ಊರು ಒಂದಾಗುವಂತೆ ಕಿರುಚಿದ ತಮ್ಮ ಹಸುವಿನ ಸದ್ದು. ಅವ್ವನ ಧ್ವನಿಯನ್ನು ಗುರುತಿಸಿ ಕರುಗಳು "ಅಂಬಾ" ಎಂದು ಕಾತರದಿಂದ ಧ್ವನಿಗೂಡಿಸಿದವು.

ಚನ್ನಣ್ಣ ದೀಪ ಹತ್ತಿಸಿ ಸರಸರನೆ ಬಾಗಿಲ ತೆಗೆದ. ಬಾಗಿಲು ತೆಗೆಯುತ್ತಿದ್ದಂತೆಯೇ ಹಸು ಮಿಂಚಿನಂತೆ ಕರುಗಳ ಬಳಿ ಧಾವಿಸಿತು. ಚನ್ನಣ್ಣ ನೋಡಿದ. ತನ್ನನ್ನು ಕಟ್ಟಿಹಾಕಿದ ಗೂಟವನ್ನೇ ಮುರಿದುಕೊಂಡು ಓಡೋಡಿ ಬಂದಿದೆ. ಓಡಿ ಬರುವಾಗ ಗೂಟ ಮುಂಗಾಲುಗಳಿಗೆ ಬಡಿದು ಅಲ್ಲಲ್ಲಿ ರಕ್ತ ಜಿನುಗುತ್ತಿದೆ.

ಕರುಗಳು ಹಗ್ಗವೇ ಕಿತ್ತು ಬರುವಂತೆ ತುಯ್ಯಲಾರಂಭಿಸಿದವು. ಚನ್ನಣ್ಣ ಅವನ್ನು ಕತ್ತಿನ ಬಳಿಯೇ ಕಳೆದುಬಿಟ್ಟ. ಅವು ಬಾಲ ಕುಣಿಸುತ್ತಾ ಕೆಚ್ಚಲಿಗೆ ಬಾಯಿ ಹಾಕಿದವು, ಓಡಿಬಂದ ದಣಿವನ್ನು ಲೆಕ್ಕಿಸದೇ ಹಸು ತನ್ನ ಕರುಗಳ ಮೈಯನ್ನು ಪ್ರೀತಿಯಿಂದ ನೆಕ್ಕಲಾರಂಭಿಸಿತು.

* * *

**ಬೆಸಗರಹಳ್ಳಿ ರಾಮಣ್ಣ :** ಅವರು ಮಂಡ್ಯ ಜಿಲ್ಲೆಯ ಬೆಸಗರಹಳ್ಳಿಯಲ್ಲಿ ಜನಿಸಿದರು. ಇವರ ತಾಯಿ ದೊಡ್ಡತಾಯಮ್ಮ, ತಂದೆ ಚಿಕ್ಕಎಲ್ಲೇಗೌಡ. ತಮ್ಮಲ್ಲಿದ್ದ ಪ್ರತಿಭೆ, ಶಕ್ತಿ, ಚೈತನ್ಯಗಳನ್ನು ಗ್ರಾಮೀಣ ಸಮುದಾಯದ ನೋವು, ನಲಿವು, ಶೋಷಣೆಗೆ, ಅಜ್ಞಾನಕ್ಕೆ ಸ್ಪಂದಿಸಲು ಮೀಸಲಿಟ್ಟವರು ರಾಮಣ್ಣ. ಪ್ರಾರಂಭಿಕ ಶಿಕ್ಷಣ ಬೆಸಗರಹಳ್ಳಿ ಮತ್ತು ಮದ್ದೂರಿನಲ್ಲಿ. ಇಂಟರ್ಮೀಡಿಯೇಟ್ ನಂತರ ಎಂ.ಬಿ.ಬಿ.ಎಸ್. ಪದವಿ ಪಡೆದದ್ದು ಮೈಸೂರಿನಲ್ಲಿ. ನಂತರ ಅರಿವಳಿಕೆ ಶಾಸ್ತ್ರದಲ್ಲಿ ಪಡೆದ ಡಿಪ್ಲೊಮಾ. ಅಮೆರಿಕ ಮುಂತಾದ ವಿದೇಶಗಳಿಂದ ಉದ್ಯೋಗಕ್ಕೆ ಆಹ್ವಾನ ಬಂದರೂ ಆಯ್ದುಕೊಂಡದ್ದು ಹಳ್ಳಿಯ ವೈದ್ಯಕೀಯ ಸೇವೆಯ ಬದುಕು. ಗ್ರಾಮೀಣ ಪ್ರದೇಶದಲ್ಲಿ ಸುಮಾರು 20 ವರ್ಷಗಳ ಕಾಲ ವೈದ್ಯರಾಗಿ ಕಾರ್ಯನಿರತರಾಗಿದ್ದರು. ಸರಕಾರಿ ವೈದ್ಯರಾಗಿ ನೇಮಕಗೊಂಡು ಕೊಡಿಯಾಲ, ಬೆಳ್ಳೂರು, ಮೇಲುಕೋಟೆ, ಶ್ರೀರಂಗಪಟ್ಟಣ, ಹಳೇಬೀಡು ಮುಂತಾದ ಗ್ರಾಮಾಂತರ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೇವೆಸಲ್ಲಿಸಿ 1996 ರಲ್ಲಿ ನಿವೃತ್ತಿ ಪಡೆದರು.

ಇವರ ಕಥೆಗಳು 'ನೆಲದ ಒಡಲು', 'ಗರ್ಜನೆ', 'ಹರಕೆಯ ಹಣ', 'ಒಂದು ಹುಡುಗನಿಗೆ ಬಿದ್ದ ಕನಸು', 'ನೆಲದ ಸಿರಿ' ಎಂಬ ಕಥಾಸಂಕಲನಗಳು. 'ಕನ್ನಂಬಾಡಿ' ಎಂಬ ಸಮಗ್ರ ಕಥಾಸಂಕಲನವಲ್ಲದೆ ನಂತರ ಬರೆದ 18 ಕಥೆಗಳ ಸಂಕಲನ 'ಕೊಳಲು ಮತ್ತು ಖಡ್ಗ' ಕಥಾಸಂಕಲನಗಳವೂ ಪ್ರಕಟವಾಗಿವೆ. 'ರಕ್ತಕಣ್ಣೀರು' ಮತ್ತು 'ತೋಳಗಳ ನಡುವೆ' ಇವರು ಬರೆದ ಎರಡು ಕಾದಂಬರಿಗಳಾದರೆ 'ಶೋಕಚಕ್ರ' ಕವನ ಸಂಕಲನ. ಕಲ್ಲೇಶಿವೋತ್ತಮರಾವ್ ರವರು ಜನ ಪ್ರಗತಿಯ ಸಂಪಾದಕರಾಗಿದ್ದ ಸಂದರ್ಭದಲ್ಲಿ 'ರಕ್ತಕಣ್ಣೀರು' ಕಾದಂಬರಿಯನ್ನೂ ಧಾರಾವಾಹಿಯಾಗಿ ಪ್ರಕಟಿಸಿದರು.

**ಕೆಲವು ಗ್ರಾಮ್ಯ ಪದಗಳ ಅರ್ಥ**

ವಾಕ್ಸು–ಮಾತು, ದೂಸರ–ಮತ್ತೊಂದು, ಇನ್ನೊಂದು. ಸಿಲುಬು–ಕಡೆಯುವುದು, ತೀಡಿ–ಉಜ್ಜಿ, ಗುಡಾಣ–ಗಟ್ಟಿಯಾದ ದೊಡ್ಡ ಮಡಕೆ.

# ಪ್ರಬಂಧ ಭಾಗ:

## 1. ದೀಪಾವಳಿಯ ನೆನಪುಗಳು

**–ಹಾ.ಮಾ. ನಾಯಕ**

'ಕರ್ಮವೀರ' ಪತ್ರಿಕೆಯ ಸಂಪಾದಕ ಮಿತ್ರರು ತಮ್ಮ ದೀಪಾವಳಿಯ ಸಂಚಿಕೆಗೆ ನಾನೊಂದು ಹರಟೆಯನ್ನು ಬರೆದುಕೊಡಬೇಕೆಂದು ಕೇಳಿದ್ದಾರೆ. ಇದುವರೆಗೂ ನನ್ನನ್ನು ಯಾರೂ ಹರಟೆ ಬರೆದುಕೊಡುವಂತೆ ಕೇಳಿಲ್ಲ, ಮಾತ್ರವಲ್ಲ 'ಹರಟೆ ಹೊಡೆ'ಯಲು ಕೂಡ ನನ್ನ ಮಿತ್ರರು ಆಹ್ವಾನಿಸಿದ್ದಿಲ್ಲ. ಸ್ವಭಾವತಃ ಹರಟೆಮಲ್ಲನಲ್ಲದ ನನ್ನ ವಿಷಯದಲ್ಲಿ ಈ ಕೃಪೆ ತುಂಬ ದೊಡ್ಡದು. ಆದರೆ ಈಗ ಈ ಮಿತ್ರರು ನನ್ನನ್ನು ಉರುಳಿನಲ್ಲಿ ಸಿಕ್ಕಿಸಿಬಿಟ್ಟಿದ್ದಾರೆ.

"ಹರಟೆ ಎನ್ನುವುದು ಬೇಜಾರಿಗೆ, ಪೂರ್ವಾನುಭವಗಳೆಂಬ ಸ್ವಪ್ನಾರಣ್ಯದಲ್ಲಿ ಪೋಲಿ ಪೋಲಿಯಾಗಿ ಅಲೆಯುವುದೇ ಹರಟೆ" ಎಂದು ಕವಿ ಕುವೆಂಪು ಹೇಳಿದ್ದಾರಂತೆ. ಹರಟೆ ಬರೆಯಲು (ಹೊಡೆಯಲು?) ಸಂಪಾದಕ ಮಿತ್ರನ ಆಹ್ವಾನ ಬಂದಾಗ ನನಗೆ ಮೊದಲು ಹೊಳೆದದ್ದು ಈ ಕವಿವಾಣಿ. ಅದರಲ್ಲಿಯೇ ನಾನು ಪೂರ್ಣ ಆಶ್ರಯವನ್ನೂ ಪಡೆದುಕೊಂಡೆ. ಅರಣ್ಯ ಸ್ವಪ್ನವೋ ಅಲ್ಲವೋ, ಪೋಲಿಪೋಲಿಯಾಗಿ ಅಲೆಯಲಂತೂ ಋಷಿಕವಿಗಳೇ ಅನುಮತಿ ಕೊಟ್ಟಿದ್ದಾರಲ್ಲ ಎಂದು ಸಮಾಧಾನ ತಂದುಕೊಂಡೆ. ಒಡನೆಯೆ ಮನಸ್ಸು ಕೊರಳು ಕಳಚಿಕೊಂಡು ಕಳೆದ ಕಾಲದ ಕೋಟೆಯನ್ನು ಲಗ್ಗೆಯೇರುವ ಪ್ರಯತ್ನದಲ್ಲಿ ತೊಡಗಿತು. ಕಳೆದುಹೋದ ಕಾಲದ ಕತ್ತಲಲ್ಲಿ ಕಾಲು ಶತಮಾನದ ಕೆಳಗಿನ ದೀಪಾವಳಿಯ ದೀಪಗಳು ಪ್ರಜ್ವಲಿಸಿದುವು. ಅವುಗಳ ದಿವ್ಯ ಕಾಂತಿಗೆ ಬೆರಗಾಗಿ ಮನಸ್ಸು ಒಂದು ಕ್ಷಣ ಅಲ್ಲಿಯೇ ನಿಂತುಬಿಟ್ಟಿತು. ಫಲವಾಗಿ ನಾನು ಸಂಪಾದಕ ಮಿತ್ರರಿಂದ ಬಚಾವಾದೆನೆಂದುಕೊಂಡಿದ್ದೇನೆ.

ದಿನಗಳ ಮೇಲೆ ದಿನ ಕಳೆದು ಮತ್ತು ಮತ್ತೆ ಬರುತ್ತಿದೆ ದೀಪಾವಳಿ.

ನೆನಪಿನ ಎಳೆ ಬಿಸಲಿನಲ್ಲಿ ಹಿಂದಿನ ದೀಪಾವಳಿಯ ನೆನಹುಗಳನ್ನು ಮೆಲುಕಾಡಿಸುವುದೇ ಒಂದು ಆನಂದ. ಇಂದಿನ ಈ ಬೇಸರದ ದಿನಗಳಲ್ಲಿ ಹಲವು ವರ್ಷಗಳ ಹಿಂದೆ ನಾವು ಹುಡುಗರಾಗಿದ್ದಾಗ ಬರುತ್ತಿದ್ದ ದೀಪಾವಳಿ ಅಂದಿಗೇ ಮಾಯವಾಗಿ ಹೋದಂತೆ ಕಾಣಿಸುತ್ತದೆ. ಆದರೆ ಸುಖ ಸಂತೋಷಗಳ ಚೀಲ.

ಚೀಲಗಳನ್ನು ಹೊತ್ತು ತರುತ್ತಿದ್ದ ಆ ದೀಪಾವಳಿಗಳ ನೆನಪು ಮಾತ್ರ ಸ್ಮೃತಿಫಲಕದಲ್ಲಿ ಹಚ್ಚ ಹಸುರಾಗಿದೆ, ಹೊಚ್ಚ ಹೊಸದಾಗಿದೆ.

ಈ ಅಂತರದಲ್ಲಿ ಕಳೆದುಹೋಗಿರುವ ಹತ್ತಿಪ್ಪತ್ತು ವರ್ಷಗಳ ಅವಧಿಯೇನೋ ಚಿಕ್ಕದಾಗಿ ತೋರುತ್ತದೆ. ಆದರೆ ಜೀವನದಲ್ಲಿ ಅವಧಿಯೊಳಗೇ ಒಂದು ಅನಂತ ಯಾತ್ರೆ ಸಾಗಿಹೋಗಿದೆ. ಬದಲಾವಣೆಗಳ ಯಾತ್ರೆ ಅದು. ಲೋಕದ ಮಾತು ಇರಲಿ, ನಮ್ಮ ಹಳ್ಳಿಯಲ್ಲ–ನಿಸರ್ಗದಡಿಯಲ್ಲಿ, ನೀರವ ಪ್ರಶಾಂತ ಕಣಿವೆಯಲ್ಲಿ, ಸುಖವಾಗಿ ನಿದ್ರಿಸುತ್ತಿದ್ದ ಆ ನಾಲ್ಕೇ ನಾಲ್ಕು ಮನೆಗಳ ಗುಂಪಿನಲ್ಲಿ (ನಮ್ಮ ಕಡೆ ಊರೆಂದರೊಂದೆ ಮನೆ') ಎಷ್ಟೆಲ್ಲ, ಏನೆಲ್ಲ ಬದಲಾವಣೆಗಳಾಗಿ ಹೋಗಿವೆ. ಕ್ಷಣಕ್ಷಣಕ್ಕೂ ಹೊಸ ನೀರು ಹರಿದು ಬರುತ್ತದೆ, ಹೊಸ ದಿಕ್ಕು ಹಿಡಿದು ಹೋಗುತ್ತದೆ.

ನಮ್ಮ ಹಳ್ಳಿಯಲ್ಲಿ ಅಥವಾ ಸುತ್ತಣ ಹಳ್ಳಿಗಳಲ್ಲಿ ಎಲ್ಲೂ ಈಗಿನಂತೆ ಶಾಲೆ ಇರಲಿಲ್ಲ. ಹಾಗಾಗಿ ನನ್ನ ಎಳೆಯ ದಿನಗಳೆಲ್ಲ ವಿದ್ಯಾಭ್ಯಾಸದ ನೆವದಿಂದ ದೂರದ ಬಂಧುಗಳ ಮನೆಯಲ್ಲಿ ಕಳೆದುಹೋದುವು. ದೂರದಿಂದಲೂ ನನಗೆ ನಮ್ಮ ಮನೆಯ ನೆನಪು ನಮ್ಮ ಹಳ್ಳಿಯ ನೆನಪು ಸದಾ ಕಾಡುತ್ತಿರುತ್ತಿತ್ತು. ಭೂಮಿಹುಣ್ಣಿಮೆ ಎಂದು ಬರುವುದೋ ಎಂದು ದಿನಗಳನ್ನು ಎಣಿಸುತ್ತಿದ್ದೆ. ಮುಂದಣ ಅಮಾವಾಸ್ಯೆಯೇ ದೀಪಾವಳಿ, ಭೂಮಿ ಹುಣ್ಣಿಮೆ ನನಗೆ, ನನ್ನಂಥ ಹಳ್ಳಿ ಹುಡುಗರಿಗೆ ಆ ದಿನಗಳಲ್ಲಿ ದೀಪಾವಳಿಯ ಬರುವಿನ ಸೂಚನೆ, ಮೊದಲ ಘಂಟೆ. ಅಂದಿನಿಂದ ಮೇಲಿನ ಹದಿನೈದೂ ದಿನಗಳು ದೀಪಾವಳಿಯ ಸಂಭ್ರಮ ಸಡಗರಗಳಿಗೆ ಸಾಲದಾಗುತ್ತಿದ್ದವು.

ಏನು ಅಡ್ಡಿ ಅಡಚಣೆಗಳುಂಟಾದರೂ ಭೂಮಿ ಹುಣ್ಣಿಮೆಗೆ ನಾಲ್ಕು ದಿನಗಳಿರುವ ಹಾಗೆಯೇ ನಾನು ನಮ್ಮ ಹಳ್ಳಿಯ ಹಾದಿ ಹಿಡಿಯುತ್ತಿದ್ದೆ. ಶಾಲಾಜೀವನದಲ್ಲಿ ವರ್ಷಕ್ಕೊಮ್ಮೆ

ಬರುತ್ತಿದ್ದ ರಸಮಯ ರಜಾದಿನಗಳ ಅವಧಿ ಅದು. ಅದಕ್ಕಿಂತ ಮಿಗಿಲಾಗಿ ಹತ್ತು ಹರ್ಷದಾಯಕ ದಿನಗಳೂ ಅವೇ ಆಗಿದ್ದವು.

ನಮ್ಮ ಹಳ್ಳಿಯಿಂದ ಪಟ್ಟಣಕ್ಕೆ ವಿದ್ಯಾಭ್ಯಾಸದ ಸಲುವಾಗಿ ಹೋದ ಹುಡುಗ ನಾನೊಬ್ಬನೆ. ಆದ್ದರಿಂದ ನನ್ನ ಬರುವಿಕೆಯನ್ನು ನನ್ನೂರಿನ ಮುಗ್ಧ ಮಿತ್ರರೆಲ್ಲ ಕುತೂಹಲದಿಂದ ನಿರೀಕ್ಷಿಸುತ್ತಿದ್ದುದ್ದು ಸಹಜವೇ ಆಗಿತ್ತು. ಊರು ಸೇರಿದ ಮರುದಿನ ನಾವು ಪರಸ್ಪರ ಎದುರಿಗಿಲ್ಲದಾಗ ನಡೆದುಹೋದ ಕೌತುಕ ಸಂಗತಿಗಳ ವಿನಿಮಯ, ಪರಾಮರ್ಶೆ ನಡೆಯುತ್ತಿತ್ತು. ಎರಡನೆಯ ದಿನದಿಂದಲೇ ಆರಂಭವಾಗುತ್ತಿತ್ತು ನಮ್ಮ ದೀಪಾವಳಿ.

ದೀಪಾವಳಿ ದೀಪಗಳ ಹಬ್ಬ ಹಾಗೆಯೇ ನಮಗೆ ಗೋವುಗಳ ಹಬ್ಬ ಕೂಡ ಆಗಿತ್ತು. ಲಕ್ಷ ಲಕ್ಷ ದೀಪಗಳನ್ನು ಹತ್ತಿಸಿ ದೀಪಾವಳಿಯ ಸೊಬಗನ್ನು ಕಾಣುವ ಹಾಗೆಯೇ, ನಾವು ಗೋವುಗಳನ್ನು ಸಿಂಗರಿಸಿ ಪೂಜೆ ಮಾಡಿ ಅವುಗಳ ಅಲಂಕಾರದಲ್ಲಿಯೇ ತೃಪ್ತಿಪಡುತ್ತಿದ್ದೆವು. ಆ ಗೋವುಗಳೇ ನಮ್ಮ ಬದುಕಿನ ಉಸಿರಾಗಿದ್ದವು. ದೀಪಾವಳಿಯಂದು ಅವನ್ನು ಸಿಂಗರಿಸುತ್ತಿದ್ದುದು ಬರಿಯ ಬಣ್ಣದ ಹೂವುಗಳ ಸರದಿಂದಲ್ಲ, ಜೊತೆಗೆ ಇನ್ನೂ ಒಂದೆರಡು ಬಗೆಯ ವಿಶಿಷ್ಟ ಸರಗಳಿರುತ್ತಿದ್ದವು. ಒಂದು ಉಗುಣೆಕಾಯಿ ಸರ, ಇನ್ನೊಂದು ಗಿಲಗಿಚ್ಚಿ ಕಾಯಿನ ಸರ. ಪೊದೆ ಪೊದೆಗಳಲ್ಲಿ ಹಬ್ಬಿಕೊಳ್ಳುವ ಉಗುಣೆಬಳ್ಳಿ ತೆಳುನೇರಿ ಬಣ್ಣದ ಸೊಗಸಿನ ಹೂಗಳನ್ನು ಬಿಡತೊಡಗಿದೊಡನೆಯೇ ನಮಗೆ ದೀಪಾವಳಿಯ ಅನುಭವದ ಆರಂಭವಾಗುತ್ತಿತ್ತು. ಈ ಕಾಯಿಗಳನ್ನು ಕೊಯ್ದು ಸಂಗ್ರಹಿಸಲು ತೊಡಗಿದ ದಿನದಿಂದಲೇ ನಿಜವಾದ ದೀಪಾವಳಿ. ನಾವು ಎಷ್ಟು ಉಗುಣೆಕಾಯಿ, ಗಿಲಗಿಚ್ಚಿಕಾಯಿ ಸಂಗ್ರಹಿಸಿ ನಮ್ಮ ನಮ್ಮ ಮನೆಯ ಹಸುಗಳಿಗೆ, ಎತ್ತುಗಳಿಗೆ (ಎಮ್ಮೆ ಕೋಣಗಳಿಗೆ ಆ ಪುಣ್ಯವಿಲ್ಲ) ಸರ ಮಾಡುತ್ತಿದ್ದೆವೋ ಆ ಸರಗಳ ಸಂಖ್ಯೆಯ ಮೇಲೆಯೇ ನಮ್ಮ ಸಾಮರ್ಥ್ಯ ಗೊತ್ತಾಗುತ್ತಿದ್ದುದು. ನಮ್ಮ ಮನಸ್ಸಿಗೆ ಸಮಾಧಾನವಾಗುತ್ತಿದ್ದುದು. ಜೊತೆಗಾತಿಯರಾದ ಚೆಲುವೆಯರಿಗೆ ನಮ್ಮ ವಿಷಯದಲ್ಲಿ ಇದರಿಂದಾಗಿಯೆ ಒಂದು ಬಗೆಯ ಆಸಕ್ತಿ ಮೂಡುತ್ತಿತ್ತು. ಅನುರಾಗಪೂರ್ವಕವಾದ ಅಚ್ಚರಿ ಬೆರೆತ ನಗುವಾದರೂ ಅವರ ಮುಖದಲ್ಲಿ ಮಿಂಚಿ ಮಾಯವಾಗುವುದಕ್ಕೆ ಇದು ಒಂದು ಅವಕಾಶವಾಗಿತ್ತು.

ಚಾಟರಬಿಲ್ಲಿನಿಂದ ಹಕ್ಕಿಗಳ ಷಿಕಾರಿಗೋ, ಬಿಳುಮಾರಲ ಹಣ್ಣುಗಳ ಶೋಧನೆಗೋ ಕಾಡುಮೇಡುಗಳಲ್ಲಿ ಅಲೆಯುತ್ತಿದ್ದಾಗ ನಮ್ಮ ಒಂದು ಕಣ್ಣು ಉಗುಣೆ ಬಳ್ಳಿಗಳ ಮೇಲ್ಲೋ, ಗಿಲಗಿಚ್ಚಿ ಗಿಡಗಳ ಮೇಲ್ಲೋ ತಪ್ಪದೆ ಇರುತ್ತಿತ್ತು. ಹೀಗಾಗಿ ಈ ಗಿಡಗಳು, ಬಳ್ಳಿಗಳು ಎಲ್ಲೆಲ್ಲಿವೆಯೆಂಬ ಭೂಗೋಳವೆಲ್ಲ ನಮಗೆ ತಿಳಿದಿರುತ್ತಿತ್ತು

ಯಾವುದನ್ನೂ ಹೊಸದಾಗಿ ಶೋಧಿಸಬೇಕಾಗಿರಲಿಲ್ಲ. ಒಂದು ನಿಮಿಷವನ್ನೂ ವ್ಯಯಿಸದೆ ಸುತ್ತಣ ಗುಡ್ಡ ಬೆಟ್ಟ ಕಣಿವೆ ಕಾಲುವೆಗಳೆಲ್ಲ ಅಲೆದು ಕಾಯಿಗಳನ್ನು ಆರಿಸುತ್ತಿದ್ದೆವು. ಒಂದೊಂದು ಗುಂಪಿನಲ್ಲಿ ಇಬ್ಬರು, ಮೂವರು; ಇಂಥ ಗುಂಪುಗಳು ಮೂರು ನಾಲ್ಕು. ಎಲ್ಲೆಲ್ಲಿಯೋ ಹತ್ತಿ ಹಾರಿ ನೆಗೆದು ನುಸುಳಿ ಜಿಗಿದು ಜಾರಿ ಸಂಜೆ ಇಳಿಬಿಸಿಲಿನ ಸಮಯದಲ್ಲಿ ಎಲ್ಲರೂ ಪೂರ್ವನಿಯೋಜಿತ 'ಗೊತ್ತಿ'ನಲ್ಲಿ ಸೇರುತ್ತಿದ್ದೆವು. ಒಬ್ಬೊಬ್ಬರ ಬಳಿಯೂ ಆಗ ಒಂದೆರಡು ಕೊಳಗ ಕಾಯಿಗಳ ಸಂಗ್ರಹವಾಗಿರುತ್ತಿತ್ತು. ಪರಸ್ಪರ ಪರಾಕ್ರಮ ಪ್ರಶಂಸೆಗಳಿಗಂತೂ ಲೆಕ್ಕವಿರಲಿಲ್ಲ.

ಕೆಲವು ಸಲ ಯಾವುದೋ ಗಿಡದ ಬುಡದಲ್ಲಿ ಮರದ ಪೊಟರೆಯಲ್ಲಿ ನೆರೆಯೂರಿನ ಹುಡುಗರು ಕೊಯ್ದು ಅಡಗಿಸಿಟ್ಟಿರುತ್ತಿದ್ದ ಕಾಯಿಗಳನ್ನೂ ನಾವು ಅಪಹರಿಸುತ್ತಿದ್ದೆವು. ಬದಲಿಗೆ ನಮ್ಮ ಸಂಗ್ರಹವೂ ಸರಗಳು ಮಾಯವಾಗಿ ಹೋಗುತ್ತಿದ್ದ ಸಂದರ್ಭಗಳೂ ವಿರಳವಾಗಿರಲಿಲ್ಲ. ಕಳ್ಳತನಕ್ಕಾಗಿಯೇ ಆಗಾಗ ಕದ್ದು ಓಡಾಡುವುದೂ ಸಾಮಾನ್ಯವಾಗಿತ್ತು. ಯಾವುದಾದರೂ ದೊಡ್ಡ ಶೇಖರಣೆಗೆ ಮುತ್ತಿಗೆ ಹಾಕಿದಾಗಲಂತೂ ಅಪರಾಧ ದೊಡ್ಡವರ ಕಿವಿಯತನಕ ಹೋಗುತ್ತಿತ್ತು.

ಹಗಲೆಲ್ಲ ಸಂಗ್ರಹಿಸುತ್ತಿದ್ದ ಉಗುಣೆ ಗಿಲಗಿಚ್ಚಿ ಕಾಯಿಗಳನ್ನು ರಾತ್ರಿ ನಾಲ್ಕಾರು ಹಣತೆಗಳ ಮಂದಬೆಳಕಿನಲ್ಲಿ ಸರ ಮಾಡುತ್ತಿದ್ದೆವು. ಈ ಕಾರ್ಯದಲ್ಲಿ ಮನೆಯ ಹಿರಿಯರೂ ಕೈಹಾಕುತ್ತಿದ್ದರು. ಆ ಹೊತ್ತಿನಲ್ಲಿ ಹಬ್ಬದ ಏರ್ಪಾಡುಗಳೆಲ್ಲ ಚರ್ಚೆಗೆ ಬರುತ್ತಿದ್ದವು. ಗೋಪೂಜೆಯಲ್ಲಿ ಪ್ರಾತಿನಿಧಿಕವಾದ ದನ ಯಾವುದು? ಕರು ಯಾವುದು? ಕಳೆದ ವರ್ಷ ಕೆಂಪು ಹೋರಿ ಮೈತೊಳೆಸಿಕೊಳ್ಳದೆ ಗಲಾಟೆ– ಮಾಡಿತಲ್ಲ, ಈ ಸಲ ಅದನ್ನು ಉಪಾಯವಾಗಿ ನೀರಿಗಿಳಿಸುವ ಬಗೆಯೇನು? ಕೂಡು ಕೊಟ್ಟಿಗೆಯಲ್ಲಿ ಸುಣ್ಣ ಕೆಮ್ಮಣ್ಣುಗಳ

ಸೇರು ಗುರುತನ್ನು ಹಾಕುವ ವಿಧಾನ ಯಾವುದು? ಸಮಸ್ಯೆಗಳು ಒಂದೆ, ಎರಡೆ? ದೊಡ್ಡವರಿಗೂ ಚಿಕ್ಕವರಿಗೂ ಸಮನಾಗಿ ಒಪ್ಪಿಗೆಯಾಗುವ ಪರಿಹಾರಗಳನ್ನು ಹುಡುಕುವುದೂ ಎಷ್ಟೋ ಸಲ ಕಷ್ಟಸಾಧ್ಯವಾಗುತ್ತಿತ್ತು. ಅವರವರ ನೆಚ್ಚಿನ 'ಕಾಲ್ನಡೆ'ಗಳಿಗೆ ಅವರವರು ವಿಶೇಷ ರೀತಿಯ ಸರಗಳನ್ನು ಸಿದ್ಧಪಡಿಸುತ್ತಿದ್ದರು.

ಹಾಗೂ ಹೀಗೂ ದಿನಗಳು ಉರುಳಿ ಹೋಗುತ್ತಿದ್ದವು. ದೀಪಾವಳಿ ತೀರ ಸನಿಹಕ್ಕೆ ಬಂದು ಬಿಡುತ್ತಿತ್ತು. ಇನ್ನೇನು ನಾಲ್ಕು ದಿನ ಇದೆ ಎನ್ನುವಾಗ ಪಕ್ಕದ ಹಳ್ಳಿ ಅಸಿಕೊಪ್ಪದ ಫಕೀರ ಸಾಹೇಬರು ನಮ್ಮೂರಿನಲ್ಲಿ ಬೀಡು ಬಿಡುತ್ತಿದ್ದರು. ಬಣ್ಣ ಬಣ್ಣದ ಕಾಗದಗಳನ್ನು ತಂದು ಗೂಡುದೀಪಗಳನ್ನು ಮಾಡಿಕೊಡುವುದು. ಅವನ್ನು ತೂಗುಹಾಕಲು ನಾನಾ ಎತ್ತರದ ಕಂಬಗಳನ್ನು ನೆಟ್ಟು, ಅವುಗಳ ಸೊಗಸನ್ನು ಹೆಚ್ಚಿಸುವಂತೆ ಸಿಂಗರಿಸುವುದು ಫಕೀರ ಸಾಹೇಬರ ಪಾಲಿನ ಕೆಲಸವಾಗಿತ್ತು. ಹಣ್ಣು ಗಡ್ಡದ ನಡುವೆ ಮಂದಹಾಸದ ನಗೆಯನ್ನು ಚೆಲ್ಲುತ್ತಾ, ಆ ನಗುವೇ ತಮ್ಮ ಬದುಕಿನ ಆಸರೆಯೇನೋ ಎಂಬಂತೆ ಅತ್ತಿತ್ತ ಓಡಾಡುತ್ತಿದ್ದ ಅವರು ಮಕ್ಕಳ ಪಡೆಗೊಂದು ನಿಧಿಯಾಗಿದ್ದರು. ಗೂಡುದೀಪ ಮಾಡುವಾಗ ಕತ್ತರಿಸುತ್ತಿದ್ದ ಬಣ್ಣದ ಕಾಗದಗಳ ಚೂರುಪಾರನ್ನು ನಮ್ಮ ಪ್ರೀತಿಪಾತ್ರ ಎಳಗರುಗಳ ಸಿಂಗಾರಕ್ಕಾಗಿ ಅವರು ಕೊಡುತ್ತಿದ್ದರು. ಬದಲಿಗೆ ನಾವು ಸಾಹೇಬರಿಗೆ ಎರಡು ವೀಳೆಯದೆಲೆಗಳನ್ನೂ, ನಾಲ್ಕು ಅಡಿಕೆಗಳನ್ನೂ ಕೊಡುತ್ತಿದ್ದೆವು. ಆದರೆ ಅವರಿಗೆ ಈ ಎಲೆ ಅಡಿಕೆಗಳಿಗಿಂತ ನಮ್ಮ ಸಂತೋಷವೇ ನೂರುಪಾಲು ಹೆಚ್ಚಿನ ಆನಂದವನ್ನು ಕೊಡುತ್ತಿತ್ತು. ಒಂದೊಂದು ಸಲ ಅವರೇ ಕಾಗದದ ಸರಗಳನ್ನೂ ಕೋಡುಮಟ್ಟೆಗಳನ್ನೂ ಮಾಡಿಕೊಡುತ್ತಿದ್ದುದೂ ಉಂಟು.

ಅಮಾವಾಸ್ಯೆಯ ದಿವಸವೇ 'ಕಾಲ್ನಡೆ'ಗಳನ್ನೂ 'ಮೈತೊಳೆಸ'ಬೇಕಾಗುತ್ತಿತ್ತು. ಹೊಳೆಯಲ್ಲಿ ನಡೆಯುತ್ತಿದ್ದ ಈ ಮಹಾಕಾರ್ಯದಲ್ಲಿ ದೊಡ್ಡವರಿಗಿಂತ ಹುಡುಗರದೇ ಉತ್ಸಾಹ, ಆರ್ಭಟ. ಆದರೆ ನಿಜವಾಗಿ ಕೆಲಸ ನಡೆಯುತ್ತಿದ್ದುದು ದೊಡ್ಡವರಿಂದಲೆ. ದೊಡ್ಡ ದೊಡ್ಡ ಎತ್ತುಗಳೂ, ಗೌರಿಯಂಥ ಚೂಪು ಕೋಡಿನ ಹಸುಗಳೂ ನಮ್ಮಿಂದ ಮೈತೊಳೆಸಿಕೊಳ್ಳಲು ಸರ್ವಥಾ ಒಪ್ಪುತ್ತಿರಲಿಲ್ಲ. ಗಾಬರಿಯಿಂದ ಗುಂಡಿಗೆ ಹಾರಿ ಈಜಿಕೊಂಡು ದಡ ಸೇರುತ್ತಿದ್ದ ಹೋರಿಗಳೂ, ಚಂಗಾಳಿಯಾಡುತ್ತಿದ್ದ ಗುಡ್ಡ ಮಣಕಗಳೂ,

ಕೇಕೆಹಾಕಿ ಚಪ್ಪಾಳೆ ತಟ್ಟಿ ಅವನ್ನು ಹಿಂಬಾಲಿಸುತ್ತಿದ್ದ ಹುಡುಗರೂ ದೊಡ್ಡವರ ಶಾಪಕ್ಕೆ ಗುರಿಯಾಗುತ್ತಿದ್ದರು. ಆ ದಿನ ರಾತ್ರಿ ಮನೆಯಲ್ಲಿ ಯಾರಿಗೂ ನಿದ್ದೆಯಿಲ್ಲ. ಅದೂ 'ಬೂರೆ'ಯ ರಾತ್ರಿ, ಅಭ್ಯಂಜನಕ್ಕೆ ಸಿದ್ಧಪಡಿಸುವ ರಾತ್ರಿ. ಹೆಣ್ಣುಮಕ್ಕಳಿಗೆಲ್ಲ ನೀರು ತುಂಬುವ ಹಬ್ಬದ ಸಿದ್ಧತೆ. ಸಾಹಸಿಗಳಿಗೆ ಮಾತ್ರ 'ಬೂರೆ ಕಳುವಿ'ನ ಅವಕಾಶ. ಅಂದಿನ ಕಳ್ಳತನಕ್ಕೆ ಯಾವ ದೋಷವೂ ತಟ್ಟದು. ಸಾಹಸದ ಕಥೆಗಳಿಗೆ ಕೊನೆಯಿಲ್ಲ ಮೊದಲಿಲ್ಲ. ಮರುದಿನದ ಸಡಗರದ ಸಿದ್ದತೆಗಳಿಗೆ ರಾತ್ರಿ ಸಾಕಾಗುತ್ತಲೇ ಇರಲಿಲ್ಲ. ರಾಶಿರಾಶಿ ಚೆಂಡುಹೂಗಳನ್ನು ಮಾಲೆ ಕಟ್ಟುವುದರಲ್ಲಿಯೇ ಬೆಳಗಾಗಿ ಹೋಗುತ್ತಿತ್ತು. ಒಂದೊಂದು 'ಕಾಲ್ನಡಿ'ಗೆ ಕೊನೆಯ ಪಕ್ಷ ಒಂದಾದರೂ ಚೆಂಡುಹೂವಿನ ಸರ ಇಲ್ಲದಿದ್ದರೆ ದೀಪಾವಳಿ ಬಂದಾದರೂ ಏನು ಪ್ರಯೋಜನ?

ಬೆಳಗಾದ ಮೇಲೆ, ಗೋಪೂಜೆಯಾಗುವುದಕ್ಕೆ ಮೊದಲೇ, ಉಳಿದ ಎಲ್ಲ ದನ ಕರುಗಳ ಶೃಂಗಾರವೂ ಮುಗಿದಿರುತ್ತಿತ್ತು. ಉಗುಣೆಕಾಯಿ ಸರ, ಗಿಲಗಿಚ್ಚಿಕಾಯಿ ಸರ, ಚೆಂಡುಹೂವಿನ ಸರ, ಕೆಮ್ಮಣ್ಣು ಪಟ್ಟಿ, ಜೇಡಿಪಟ್ಟಿ, ಕೋಡು ಕೊಗಳುಗಳಿಗೆ ಬಣ್ಣ ಬಗೆಯ ಸಿದ್ಧತೆಗಳು ನಡೆಯುತ್ತಿದ್ದವು. ಪಚ್ಚೆತೆನೆ, ಹಣ್ಣಡಿಕೆ, ಬಾಳೆಹಣ್ಣು, ವೀಳೆಯದೆಲೆ, ಚಪ್ಪೆರೊಟ್ಟಿ ಮುಂತಾದವುಗಳನ್ನೂ ಕಟ್ಟಿ ಮಾಡಿದ 'ಚಪ್ಪೆ ರೊಟ್ಟಿ ಸರ'ವನ್ನೂ ಎಲ್ಲ 'ಕಾಲ್ನಡೆ'ಗಳಿಗೂ ಕಟ್ಟಿ ಮುಗಿಸಿದ ಮೇಲೆಯೇ ಗೋಪೂಜೆ. ನಮ್ಮ ಮನೆಗೇ ಅತಿ ಮೆಚ್ಚಿನದಾದ, ಆದರೆ ಆ ಹೊತ್ತಿನಲ್ಲಿ 'ಕರಾವು' ಇರುವ, ಕರು ಇರುವ ಯಾವುದಾದರೊಂದು ಹಸುವಿಗೆ ವಿಶೇಷ ಪೂಜೆ. ಅತ್ತ ಕೊಟ್ಟಿಗೆಯಲ್ಲಿ ಒಂದರ ಕೊರಳಲ್ಲಿರುವ ಚಪ್ಪೆರೊಟ್ಟಿಯನ್ನು ಕಿತ್ತು ತಿನ್ನಲು ಇನ್ನೊಂದರ ಸತತ ಸಾಹಸ. ಹೀಗಾಗಿ ಕೊಟ್ಟಿಗೆಯೆಲ್ಲ ಗುದ್ದುಬಳಿ ಬರುತ್ತಿತ್ತು. ಗುಲ್ಲೋಗುಲ್ಲಾಗುತ್ತಿರುತ್ತಿತ್ತು. ಅಂದು ತಿನ್ನಲು ದೊರೆಯುತ್ತಿದ್ದ ಅಕ್ಕಿ ಕಾಯಿ ಬಾಳೆಹಣ್ಣುಗಳ ರುಚಿಯಿಂದ ಅವೆಲ್ಲ ನಿತ್ಯ ದೀಪಾವಳಿಯನ್ನು ಹಾರೈಸಿದ್ದರೆ ಆಶ್ಚರ್ಯವಿಲ್ಲ.

ಪೂಜೆ ಮುಗಿದ ಮೇಲೆ ಎಲ್ಲವನ್ನೂ ಒಟ್ಟಿಗೆ ಬಿಟ್ಟು ಗದ್ದಲವೆಬ್ಬಿಸಿ ಗಡಿಬಿಡಿ ಮಾಡಿ, ಕೋವಿ ಈಡುಗಳನ್ನು ಹಾರಿಸಿ, ಜಾಗಟೆ ಬಡಿದು ಗಂಟೆ ಬಾರಿಸಿ, ಡಬ್ಬಿ ಹೊಡೆದು ಬಯಲಿಗೆ ಓಡಿಸುತ್ತಿದ್ದೆವು. ಹಸುಗಳನ್ನೂ ಕರುಗಳನ್ನೂ ಒಟ್ಟಿಗೆ ಬಿಡುತ್ತಿದ್ದುದರಿಂದ ಕರುಗಳಿಗೆ ಕೆಚ್ಚಲಲ್ಲಿ

ಬಾಯಿಡುವುದಕ್ಕೆ ಅವಸರ. ಹಸುವಿಗೋ ಈ ಗದ್ದಲದಿಂದ ಬಿಡುಗಡೆಯಾದರೆ ಸಾಕೆಂಬ ಕಾತರ. ಕಣ್ಣುಕಟ್ಟಿದ ಇಂಥ ಪರಿಸ್ಥಿತಿಯಲ್ಲಿ ಓಡುವ ಕಾಲ್ನಡೆಗಳ ಕೊರಳಿನಿಂದ ಚಪ್ಪೆರೊಟ್ಟಿಗಳನ್ನು ಕಸಿದುಕೊಳ್ಳುವ ಹುಡುಗರ ದಂಡು; ಅವರ ಕೇಕೆ ಕೋಲಾಹಲ; ಇದೊಂದೂ ಅರ್ಥವಾಗದೆ ಸುಮ್ಮನೆ ರಂಪವೆಬ್ಬಿಸುವ ನಾಯಿಗಳ ಬೊಗಳಿಕೆ–ಒಟ್ಟಿನಲ್ಲಿ ವಿಚಿತ್ರ ಮೇಳ, ಎಲ್ಲವೂ ಗದ್ದಲಮಯ.

ಗೋಪೂಜೆ ಮುಗಿಯುತ್ತಲೇ ಬಲೀಂದ್ರ ಪೂಜೆಗೆ ಸಿದ್ದವಾಗುತ್ತಿದ್ದೆವು. ಚಾವಡಿಯ ಒಂದು ಮೂಲೆಯಲ್ಲಿ ಗೃಹಕೃತ್ಯದ, ವ್ಯವಸಾಯದ ಸಲಕರಣೆಗಳನ್ನೆಲ್ಲ ಚೆನ್ನಾಗಿ ತೊಳೆದು ಅಂದವಾಗಿ ಜೋಡಿಸಿಡಲಾಗುತ್ತಿತ್ತು. ನೇಗಿಲು ನೊಗ ಕತ್ತಿಗಳಿಂದ ಹಿಡಿದು ಬೀಸುವಕಲ್ಲು ಕಡೆಗೋಲುಗಳ ತನಕ ಎಲ್ಲವನ್ನೂ ಸೇರಿಸಲಾಗುತ್ತಿತ್ತು. ಇವು ಪ್ರತಿಯೊಂದನ್ನೂ ಹೂವು ಮಾವಿನಸೊಪ್ಪುಗಳಿಂದ ಹಲಸು ಜೇಡಿ ಕೆಮ್ಮಣ್ಣು ಬಣ್ಣಗಳಿಂದ ಬಗೆಬಗೆಯಾಗಿ ಅಲಂಕರಿಸುತ್ತಿದ್ದೆವು. ಮೇಲುಗಡೆಗೆ ಮೋಹಕವಾಗಿ ಪಳುವಳಿಕೆಗಳನ್ನು ಕಟ್ಟುತ್ತಿದ್ದೆವು. ಬಲೀಂದ್ರ ಪೂಜೆಯ ಸಿದ್ಧತೆ ಅವರವರ ರಸಿಕ ದೃಷ್ಟಿಗೆ ಅನುಗುಣವಾಗಿರುತ್ತಿತ್ತು. ಒಟ್ಟಿನಲ್ಲಿ ಇದು ತುಂಬ ದೀರ್ಘಕಾಲದ ಸಿದ್ಧತೆಯಾಗಿತ್ತು.

ಎಲ್ಲವೂ ಸಿದ್ದವಾಗಿ ಬಲೀಂದ್ರ ಪೂಜೆ ಮುಗಿಯುವ ಹೊತ್ತಿಗೆ ಸಂಜೆ ನಾಲ್ಕು ಐದು ಘಂಟೆಯಾಗುತ್ತಿತ್ತು. ಅದಾದಮೇಲೆ ತುಲಸಿ, ಬೇಟೆ ಕೊಟ್ಟಿಗೆ ಪಣ್ಣ, ಗಾಡಿ ಹಾಗೂ ಕತ್ತಲಾಗಿಬಿಡುತ್ತಿತ್ತು..

ಆಗ ಎಲ್ಲರೂ ಅವರವರ ಗದ್ದೆ ತೋಟಗಳಿಗೆ ದೀಪ ತೋರಿಸಲು ಹೊರಡುತ್ತಿದ್ದರು. ಅವರ ಜೊತೆ ನಾವಿಲ್ಲದಿದ್ದರೆ ಆಗುತ್ತಿರಲಿಲ್ಲ. ಚಿಕ್ಕದಾಗಿ ಸೀಳಿದ ಅಡಕೆದಬ್ಬೆ ಕಡ್ಡಿಗಳಿಗೆ ಎಣ್ಣೆಯಲ್ಲಿ ತೋಯಿಸಿದ ಬಟ್ಟೆಯನ್ನು ಸುತ್ತಿ ಅವುಗಳ ಕಟ್ಟನ್ನು ಮೊದಲೆ ಸಿದ್ಧಪಡಿಸಿರುತ್ತಿದ್ದರು. ಈಗ ಒಂದೊಂದಕ್ಕೂ ಉರಿತಾಗಿಸಿ ಪ್ರತಿಗದ್ದೆಗೂ ಒಂದೊಂದನ್ನು ಹಿಗಿಯುವುದಷ್ಟೇ ಕೆಲಸ. ಬಲಿಚಕ್ರವರ್ತಿ ತನ್ನ ನೆಲದಲ್ಲಿ ಬೆಳಕು ಕಾಣದೆ ನಿರಾಶನಾಗಬಾರದಲ್ಲ. ದೀಪ ಹೊತ್ತಿಸಲು ಹೋದವರ ಕೂಗು 'ದಿಪ್ಪ್ ದಿಪ್ಪ್ ದೀಪೊಳಿಗೆ ಎಲ್ಲ ಕಡೆಯೂ ಪ್ರತಿಧ್ವನಿಸುತ್ತಿತ್ತು. ಬಂಗಾರವನ್ನೇ ತೆನೆಗರ್ಭದಲ್ಲಿ ಅಡಗಿಸಿಟ್ಟುಕೊಂಡ

ಹಸಿರು ಹೊಲಗಳ ತುಂಬ ಮಿಣಿಮಿಣಿ ಮಿನುಗುತ್ತಿದ್ದ ಸಹಸ್ರಾವಧಿ ದೀಪಗಳು ಬಾನನ್ನೇ ಬುವಿಗಿಳಿಸಿಬಿಡುತ್ತಿದ್ದವು. ಆ ಚೆಲವು ನಮ್ಮ ಎಳೆಯ ಹೃದಯಗಳನ್ನು ಅರಳಿಸಿ ತೇಲಿಸುತ್ತಿತ್ತು. ಈ ದೀಪಮಾಯೆಯನ್ನು ನೋಡಲು ಬಲಿ ಬಯಸಿದ್ದರೆ ಆಶ್ಚರ್ಯವೇನು?

ದೀಪ ತೋರಿಸಲು ಹೊರಗೆ ಹೋದವರೆಲ್ಲ ಮನೆಗೆ ಬಂದೊಡನೆಯೇ, ಅಂಗಳದಲ್ಲಿ ಗೂಡುದೀಪಗಳನ್ನು ಏರಿಸುವ ಕಾರ್ಯಕ್ರಮ. ಇದರಲ್ಲಿ ಹೆಂಗಸರೂ ಪಾಲುದಾರರು. ಅನಂತರ ಈ ಮೊದಲೆ ಪೂಜೆಗೊಂಡಿದ್ದ ಬಲೀಂದ್ರ, ಕೊಟ್ಟಿಗೆ, ಬೇಟೆ, ಹೊಸ್ತಿಲು ಮೊದಲಾದವುಗಳಿಗೆ ಇನ್ನೊಮ್ಮೆ ಪೂಜೆ ಮಾಡಿ ಹಾಲುತುಪ್ಪ ತೋರಿಸಬೇಕಾಗುತ್ತಿತ್ತು. ಆಮೇಲೆ ಊಟವಾಗುವ ಹೊತ್ತಿಗೆ ರಾತ್ರಿ ಎಂಟು ಗಂಟೆ ದಾಟಿರುತ್ತಿತ್ತು.

ಇಷ್ಟೆಲ್ಲ ಆದಮೇಲೆ 'ಅಂಟಿಗೆ ಪಂಟಿಗೆ'ಯವರ ಹಾಡು ಕೇಳದೆ ನಿದ್ದೆ ಬರುತ್ತದೆಯೆ? ಅಂಟಿಗೆ ಪಂಟಿಗೆ ನಮ್ಮ ಕಡೆ ಒಕ್ಕಲಿಗರ ದೀಪಾವಳಿಯ ವೈಶಿಷ್ಟ್ಯ ನಮ್ಮ ಜಾನಪದದ ಒಂದು ಮುಖ್ಯ ಅಂಶ. ಇದು ಎಷ್ಟೋ ಸಲ ನನಗೆ ಕ್ರಿಸ್ಮಸ್ ಕೆರಾಲಿನ ನೆನಪು ಬರುತ್ತದೆ. ದೀಪಾವಳಿಯ ರಾತ್ರಿಗಳಲ್ಲಿ ಮನೆಯಿಂದ ಮನೆಗೆ ದೀಪ ಮುಟ್ಟಿಸುತ್ತ ಹಾಡುತ್ತ ಹೋಗುವ ಆಕರ್ಷಣೀಯ ಸಂಪ್ರದಾಯ ಇದು. ಹಾಡುಗಾರರ ಮುಖ್ಯ ತಂಡ ಹಾಡುತ್ತದೆ. ಆ ಹಾಡುಗಳೋ ಜನಪದ ಕವಿಗಳು ಕಂಡ ಪೌರಾಣಿಕ ಪ್ರಪಂಚ, ಶೃಂಗಾರ, ವೀರ, ಹಾಸ್ಯ, ಕರುಣೆಗಳ ಮಡುಗಳು, ಅಲ್ಲಿನ ಪಾತ್ರವೈವಿಧ್ಯ, ವರ್ಣನಾಚಾತುರ್ಯ ಸಂಭಾಷಣೆಯ ಸೊಗಸು ಅಲ್ಲಿಗೇ ಮೀಸಲು. ಹಿಮ್ಮೇಳದವರು ಪಲ್ಲವಿ ಹಾಡುತ್ತಾರೆ. ಹಾಡುಗಾರರ ಜೊತೆ ದೀವಟಿಗೆಯವರು. ಸಂಭಾವನೆ ಹೊರುವವರು ಉತ್ಸಾಹರಸಿಕರು ಹೀಗೆ ಹಲವರ ಒಂದು ಗುಂಪೇ ಇರುತ್ತದೆ. ಮನೆ ಮನೆ ತಿರುಗಿ ಅಕ್ಕಿಯನ್ನೊ, ಬತ್ತವನ್ನೂ ಜೊತೆಗೆ ಹಣವನ್ನೂ ಸಂಗ್ರಹಿಸುತ್ತಾರೆ. ಈ ಸಂಗ್ರಹದಿಂದ ಮುಂದೆ ಒಂದು ದಿನ ಔಂತ್ಲ (ಔತಣ) ಮಾಡಿ ಊರಿನವರನ್ನೆಲ್ಲ ಆಹ್ವಾನಿಸಿ ರಸಕವಳ ಹಾಕಿ ಕೆರೆಯ ನೀರನ್ನು ಕೆರೆಗೆ ಚೆಲ್ಲುತ್ತಾರೆ.

ನಮ್ಮ ಜಾನಪದದ ಜೀವಂತ ಸಂಪ್ರದಾಯಗಳಲ್ಲಿ ಒಂದಾಗಿರುವ ಅಂಟಿಗೆ ಪಂಟಿಗೆ ಹಾಡುಗಳು ಕೇಳಲು ತುಂಬ ಆಕರ್ಷಕ. ಈ ಗುಂಪಿನವರು ಎಷ್ಟು ಹೊತ್ತಿಗೆ ಬಂದಾರು? ಈ ವರ್ಷ ಎಷ್ಟು ಗುಂಪುಗಳು ಬಂದಾವು? ಎಂಬುದು ಆ ರಾತ್ರಿಯ ನಮ್ಮ

ಚರ್ಚಾವಿಷಯವಾಗಿರುತ್ತಿತ್ತು. ಪ್ರಾಸಂಗಿಕವಾಗಿ ಹಿಂದಿನ ವರ್ಷದ ಔಂತ್ರದಲ್ಲಿ ಆದ ನ್ಯೂನತೆಗಳು, ಕಣ್ಮರೆಯಾಗಿ ಹೋದ ಹಳೆ ಕಾಲದ ಹಾಡುಗಾರರು– ಹೀಗೆ ನಾನಾ ವಿಷಯಗಳು ಪ್ರಸ್ತಾಪಕ್ಕೆ ಬರುತ್ತಿದ್ದವು. ಈ ಮಾತುಗಳು ಮುಗಿಯುವ ಮೊದಲೆ ತೂಕಡಿಕೆಯ ತೊಟ್ಟಿಲು ನಮ್ಮನ್ನು ತೂಗುತ್ತಿರುತ್ತಿತ್ತು.

ಮರುಕ್ಷಣವೆ ಕಾಡ ಮೌನವನ್ನು ಸೀಳಿಬಂದ 'ದಿಪ್ಪಡು' ನಮ್ಮನ್ನೆಲ್ಲ ಎಚ್ಚರಿಸುತ್ತಿತ್ತು. ಗಿಪ್ಪ್ ಗಿಪ್ಪ್ ದೀಪೋಳಿಗೆ' ಅದೇ ಆ ಕೂಗು. ವಿನೋದಕ್ಕೆ ಅದೇ ಗುಂಪಿನ ಹುಡುಗರ ಮರುದನಿ 'ಹಾಕಿ ಮನೆ ಹೋಳಿಗೆ'. ಗುಂಪು ಹತ್ತಿರ ಬಂದಂತೆ ಕೂಗೂ ಸ್ಪಷ್ಟ. ಅಂಗಳಕ್ಕೆ ಬರುವ ಹೊತ್ತಿಗೆ ಕೂಗು ನಿಂತು ಹಾಡು ಪ್ರಾರಂಭವಾಗುತ್ತದೆ. 'ತಂದೀವಿ ದೀಪ ದೇವರ ಕೊಳ್ಳಿರಯ್ಯ' ಎಂದು ಅವರು ಆಹ್ವಾನಿಸುತ್ತಾರೆ. ಮನೆಯ ಗೃಹಿಣಿ ಬಾಗಿಲು ತೆಗೆಯಬೇಕು. 'ಬಾಗಿಲು ತೆಗೆದ ಕೈಗೆ ಭಾಗ್ಯದ ಮಳೆ ಬರಲಿ' ಎಂದೂ ದೀಪ ಕೊಂಡವರಿಗೆ ದೊರೆಪದವಿ ದೊರಕಲೆಂದೂ ಅವರು ಹರಸುತ್ತಾರೆ. ತಾವು ಎಂಥ ಕಲ್ಲುಮುಳ್ಳಿನ ಹಾದಿಯಲ್ಲಿ ದೀಪವನ್ನು ಉಳಿಸಿಕೊಂಡು ಬಂದಿದ್ದೇವೆಂದು ಅವರು ಹಾಡುತ್ತಾರೆ. ಓ! ಆ ಹಾಡುಗಳನ್ನು ನೆನಸಿಕೊಂಡರೇ ಹೃದಯ ಕುಣಿದು ಕುಪ್ಪಳಿಸುತ್ತದೆ.

ಬಾಗಿಲು ತೆರೆಯುತ್ತದೆ. ಗುಂಪು ಹಾಡುತ್ತಲೇ ಒಳಗೆ ಬರುತ್ತದೆ. ನಾವೆಲ್ಲ ಭಯಭಕ್ತಿ ಕುತೂಹಲ ಆನಂದಗಳಿಂದ ದಡಬಡನೆ ಎದ್ದು ಕಣ್ಣರಳಿಸಿ ಕುಳಿತುಕೊಳ್ಳುತ್ತೇವೆ. ಮನೆಯ ಗೃಹಿಣಿ–ನನ್ನ ತಾಯಿ–ದೀವಟಿಗೆಗೆ ಎಣ್ಣೆ ಸುರಿದು, ಕಾಸು ಹಾಕಿ, ತನ್ನ ಹಣತೆಯನ್ನು ಹಚ್ಚಿಕೊಂಡು ಒಳಗೆ ಹೊಗಿ ತನ್ನ ಒಲೆಗೆ 'ಅಗ್ನಿ ಕೂಡಿ'ಸುತ್ತಾಳೆ. ಹಾಡು ಅವುಗಳ ಉದ್ದಕ್ಕೆ ತಕ್ಕಂತೆ, ಹಾಡುಗಾರರ ಉತ್ಸಾಹಕ್ಕೆ ತಕ್ಕಂತೆ ಮುಂದುವರಿದು ಮುಗಿಯುತ್ತದೆ. ನಮ್ಮ ಶಕ್ತನುಸಾರ ನಾವು ಸಂಭಾವನೆ ಕೊಡುತ್ತೇವೆ. ಗುಂಪೆಲ್ಲ ಕುಳಿತು ವೀಳ್ಯ ಮೆಲ್ಲುತ್ತದೆ. ಹರಟೆ ಹೊಡೆಯುತ್ತದೆ. ಮುಂದಿನ ಮನೆಗೆ ಹಾದಿ ಕೇಳುತ್ತದೆ. ಮುಕ್ತಾಯಸೂಚಕವಾಗಿ, ವಂದನೆಯ ಸಂಕೇತವಾಗಿ ಮತ್ತೆ ಕೂಗು ಮೊಳಗುತ್ತದೆ. 'ದಿಪ್ಪ್ ದಿಷ್ ದೀಪೋಳಿಗೆ' ತುಂಟ ಹುಡುಗರು ದನಿಗೂಡಿಸುತ್ತಾರೆ. 'ಹಾರ ಮನೆ ಹೋಳಿಗೆ.

ಒಂದು ಗುಂಪು ಹೋಗುತ್ತದೆ. ನಾವು ಹುಡುಗರು ಇನ್ನೊಂದರ ದಾರಿ ಕಾಯುತ್ತೇವೆ. ಒಂದು ರಾತ್ರಿಗೆ ಮೂರು ನಾಲ್ಕು ಗುಂಪುಗಳ ಹಾಗೆ ಮೂರು ರಾತ್ರಿ ಬರುತ್ತಿದ್ದುದುಂಟು. ಈ ಸಂಖ್ಯೆ ಹೆಚ್ಚಿದಷ್ಟೂ ನಮಗೆ ಉತ್ಸಾಹ ಹೆಚ್ಚಾಗುತ್ತಿತ್ತು. ಒಂದು ಗುಂಪಿನ ದೀವಟಿಗೆಯನ್ನು ಇನ್ನೊಂದು ಗುಂಪಿನವರು ನೋಡಬಾರದೆಂಬುದೂ ಒಂದು ಪದ್ಧತಿ. ಇದನ್ನು ಕಾಯ್ದುಕೊಳ್ಳುವುದಕ್ಕಾಗಿ ಪ್ರತಿ ಗುಂಪಿನವರೂ ಕೂಗುತ್ತಾ ಇನ್ನೊಂದು ಗುಂಪಿನವರಿಗೆ ದಾರಿಯ ಎಚ್ಚರ ಸೂಚಿಸುತ್ತಿರುತ್ತಾರೆ. ಇನ್ನೇನು ನಿದ್ದೆ ಬಂತು ಎಂದುಕೊಳ್ಳುವಷ್ಟರಲ್ಲಿ ಇನ್ನೊಂದು ಗುಂಪಿನ ಕೂಗು ಹೊಡೆದು ಎಚ್ಚರಿಸುತ್ತದೆ. ಹಾಗೆಯೇ ಬೆಳಗಾಗುತ್ತದೆ

ಎರಡನೆಯ ದಿನ ಕರಿ. ಅಂದು ಊರಿನವರೆಲ್ಲ ಒಟ್ಟಾಗಿ ಷಿಕಾರಿಗೆ ಹೊರಡುತ್ತಾರೆ. ನಮಗೆ ಹುಡುಗರಿಗೆ ಸ್ವಚ್ಛಂದವಾಗಿ ಕಾಡುಮೇಡುಗಳನ್ನು ಅಲೆಯಲು ಇದೊಂದು ಅವಕಾಶ. ಈ ಹಾರಾಟ ನೆಗೆದಾಟಗಳೇ ನಮ್ಮ ಪಾಲಿಗೆ ದೊಡ್ಡ ದೀಪಾವಳಿಯಾಗುತ್ತಿತ್ತು.

ದೀಪಾವಳಿಯ ಮೂರನೆ ದಿನ ವರ್ಷತೊಡಿಕೆ. ನಮ್ಮ ಪದ್ಧತಿಯಲ್ಲಿ ಅಂದು ಹೆಚ್ಚಿನದೇನಿಲ್ಲ. ಮೊದಲ ದಿನ ಪೂಜೆ ಮಾಡಿದವಕ್ಕೆಲ್ಲ ಇಂದು ಎಡೆ ಹಾಕಿ ಮತ್ತೆ ಪೂಜೆ ಮಾಡಬೇಕು. ಇದೆಲ್ಲ ಮಧ್ಯಾಹ್ನದ ಹೊತ್ತಿಗೆ ಮುಗಿದುಹೋಗುತ್ತದೆ. ಆದರೆ ರಾತ್ರಿಯೂ ಒಂದು ಹೊತ್ತು ಅವಕ್ಕೆಲ್ಲ ಹಾಲು ತುಪ್ಪ ತೋರಿಸಬೇಕು. ಈ ದೀಪಾವಳಿಯ ವೇಳೆಗೆ ದೀಪಕಾಂತಿ ಮಸಗುಗೊಳ್ಳುತ್ತಿರುತ್ತದೆ. ಉತ್ಸಾಹ ಆರತೊಡಗುತ್ತಿರುತ್ತದೆ. ನಾಲ್ಕನೆಯ ದಿನ ಬೆಳಗಾಗುವ ಮೊದಲೆ, ಜೋಡಿಸಿಟ್ಟ ಬಲೀಂದ್ರನ ವಿಸರ್ಜನೆಯಾಗುತ್ತದೆ, ಬಾಗಿಲುಗಳಲ್ಲಿ ಹೂಡಿದ್ದ 'ಕೆರಕಲು'ಗಳನ್ನು ತೆಗೆದುಬಿಡುತ್ತಾರೆ. ಅದರೊಂದಿಗೆ ಆ ವರ್ಷದ ದೀಪಾವಳಿಯ ಕುರುಹು ಅಳಿಸಿಹೋಗುತ್ತದೆ.

'ಕೆರಕಲು' ಎಂದೊಡನೆ ಇನ್ನೊಂದು ಮಾತು ನೆನಪಿಗೆ ಬರುತ್ತದೆ. ಇದೂ ನಮ್ಮ ಕಡೆಯ ವಿಶಿಷ್ಟ ಸಂಪ್ರದಾಯವೆ. ಕುಡಿಬಾಳೆ ಎಲೆಗಳಲ್ಲಿ ಐದೈದು ಸಗಣಿಯ ಸಣ್ಣ ಸಾಲುಗಳನ್ನು ನಿರ್ಮಿಸಿ ಅವುಗಳಲ್ಲಿ ನೆಲ್ಲಿಕಾಯಿ, ಹಣ್ಣಡಿಕೆ, ಪಚ್ಚತೆನೆ, ಉತ್ತರಾಣಿ, ಗರುಕೆ ಮೊದಲಾದವುಗಳನ್ನು ನೆಡುತ್ತಾರೆ. ಇಂಥ ಪೂಜಾರ್ಹವಾದ ಎರಡೆರಡು ಎಲೆಗಳನ್ನು

ಗೋಪೂಜೆಯ ಸಮಯದಲ್ಲಿ, ಬಲೀಂದ್ರ, ಬೇಟೆ, ಹೊಸ್ತಿಲು ಮೊದಲಾದವುಗಳ ಪೂಜೆಯ ಸಮಯದಲ್ಲಿ ಇಡುತ್ತಾರೆ. ಈ ಎಲೆಗಳಿಗೆ 'ಕೆರಕಲು' ಸಾಮಾನ್ಯವಾಗಿ ಗಂಡ–ಹೆಂಡತಿ, ಅತ್ತಿಗೆ–ನಾದಿನಿಯರು, ಭಾವ–ನೆಂಟರು ಇವರ ಮಧ್ಯೆ ಇದು ಜಾಣನ ಪ್ರಶ್ನೆ. ಎಂದರೆ ಕೆರಕಲು ಕೊಡಲು ಇಚ್ಚಿಸಿದವರು ಎದುರಿನವರಿಂದ 'ಹೂಂ' ಎನ್ನಿಸಬೇಕು. 'ಹೂಂ ಎಂದಾಗ ಒಂದು ಕೆರಕಲಾಯಿತು ಎಂದರ್ಥ.

ಉದಾಹರಣೆಗೆ–

"ಭಾವ ಯಾವಾಗ ಬಂದಿರಿ?"

"ನೆನ್ನೆ"

"ನೆನ್ನೆ ಬಂದಿರಾ?"

"ಹೂಂ"

"ಕೆರಕೊಳ್ಳಿ".

ಈಗ ಭಾವನ ಮೇಲೆ ಒಂದು ಕೆರಕಲಾಯಿತು. ಜಾಣ ಭಾವ ಒಡನೆಯೇ ಕೇಳುತ್ತಾನೆ:

"ಕೆರಕೋಬೇಕ?"

"ಹೂಂ" ಮರೆವಿನಿಂದ ಉತ್ತರ ಬರುತ್ತದೆ.

ಗೆದ್ದ ಭಾವ ಹೇಳುತ್ತಾನೆ: "ಕೆರಕೊ"–ಭಾವನ ಮೇಲಾದ ಕೆರಕಲು ಈಗ ತೀರಿತು. ನಾವು ಹುಡುಗರಿದ್ದಾಗ ಮೂರು ದಿನ ಈ ಕೆರಕಲುತ್ಸವ ನಡೆಯುತ್ತಿತ್ತು. ಎಷ್ಟು ಜಾಣ್ಮೆಯಿಂದ ಯಾವ ಅನುನಯದಿಂದ ಎದುರಿನವರನು 'ಹೂಂ' ಎನ್ನಿಸಲು ಪ್ರಯತ್ನಿಸುತ್ತಿದ್ದೆವು. ದೊಡ್ಡವರಿಂದ ಬೈಸಿಕೊಳ್ಳುತ್ತಿದ್ದೆವು ಎನ್ನುವುದೇ ಒಂದು ಪ್ರತ್ಯೇಕ ಪುರಾಣ.

ಹದಿನೈದು ದಿನಗಳ ಸಡಗರವೆಲ್ಲ ಮೂರು ದಿನಗಳಲ್ಲಿ ಮುಗಿದುಹೋಗುತ್ತಿತ್ತು. ಆದರೆ ಅದು ಅಲ್ಲಿಗೇ ನಿಲ್ಲುತ್ತಿರಲಿಲ್ಲ. ಮುಂದಿನ ದೀಪಾವಳಿ ಎಂದು ಬರುತ್ತದೆ ಎಂದು ಮತ್ತೆ ಲೆಕ್ಕಹಾಕಲು ಪ್ರಾರಂಭಿಸುತ್ತಿದ್ದೆವು. ಈ ಸಲ ಯಾವ ದನಕ್ಕೆ ಪೂಜೆ ಮಾಡಬೇಕು ಎಂಬ ಯೋಚನೆ ಆರಂಭವಾಗುತ್ತಿತ್ತು. ನಮ್ಮ ಎಳೆಗಾಲದ ದೀಪಾವಳಿ, ಇಷ್ಟು ಹಸುರಾಗಿತ್ತು,

ಪೂರ್ಣವಾಗಿತ್ತು. ಆ ನಲಿವು, ಆ ಗೆಲುವು, ಆ ಸುಖ ಸಂತೋಷ, ಆ ಸಡಗರ, ಉತ್ಸಾಹ ಎಷ್ಟು ಕೋಟಿ, ಕೋಟಿ, ಎಷ್ಟು ಬರೆದರೇನು? ಎಷ್ಟು ನೆನಸಿದರೇನು? ಕಾಸಿನಷ್ಟೂ ತೀರದು.

ಕಾಲಯಾತ್ರೆ ನಡೆದಿದೆ. ಅಂದಿನ ದಿನಗಳು ಇಂದಿಲ್ಲ. ಇಂದಿನ ನವ ಊರು ಅಂದಿನ ಹಾಗಿಲ್ಲ. ಆ ಫಕೀರ ಸಾಹೇಬರು ಈಗ ಬದುಕಿಲ್ಲ. ನಮ್ಮ ಅಜ್ಜಿ, ಜೊತೆಗಾರರಾದ ಪುಟ್ಟಣ್ಣ ಸೀನಪ್ಪ ಮೊದಲಾದವರು ಉಳಿದಿಲ್ಲ. ಅಂಟಿಗೆ ಅಡ್ಡೆಗೆ ನಾಯಕ ಅನಂತಯ್ಯ ತೀರಿಹೋಗಿ ವರ್ಷಗಳೇ ಸಂದವು. ನಮ್ಮ ಊರಿನ ಮುಗ್ಧ ಚೆಲುವೆಯರು ಮದುವೆಯಾಗಿ ಯಾವುದೋ ಹಳ್ಳಿ ಸೇರಿದ್ದಾರೆ. ಅವರೆಲ್ಲಾ ಕೂಡಿ ಸೃಷ್ಟಿಸಿದ್ದ ಆ ಸ್ವಪ್ನಪ್ರಪಂಚ ಈಗ ಹೇಗೆ ಲಭ್ಯವಾಗಬೇಕು? ದೀಪಾವಳಿಯೇನೋ ತಪ್ಪದೆ ಬರುತ್ತದೆ. ಆದರೆ ಅಂದಿನ ತುಂಬಿಕೆ ಇಂದು ಉಳಿದಿಲ್ಲ.

ನೆನೆದರೇ ಪುಲಕಗೊಳಿಸುವಂಥ ಅಂದಿನ ಆ ದೀಪಾವಳಿಗಳು ಈಗ ಏನೋ ಸ್ವಪ್ನಾರಣ್ಯಗಳು. ಅಂದು ಅವು ನಮ್ಮ ಸಂಪ್ರದಾಯದ ಒಂದು ಸಮೃದ್ಧ ಭಾಗಗಳಾಗಿದ್ದವು. ಈಗ ಅವು ಬಣ್ಣ ಕಂದಿವೆ. ಹನಿಗುಂದಿವೆ.

ಬಾಳೇ ಬರಡಾಗಿರುವಾಗ ದೀಪಾವಳಿ ಎಲ್ಲಿ ಬೆಳಗೀತು? ಈಗ ಅದೆಲ್ಲ ನಮ್ಮ ಸಾಂಸ್ಕೃತಿಕ ಇತಿಹಾಸದ ಒಂದು ಪುಟ ಅಷ್ಟೆ.

ಆದರೆ ನೆನಪಿನ ಬುತ್ತಿ ಅಕ್ಷಯ ಮೆಲುಕುಹಾಕಿದಷ್ಟೂ ಅದು ಸಮೃದ್ದ. ಅಲ್ಲಿ ಪುಟಿಯುವ ಸವಿ ಸ್ಮರಣೆಯ ಕಾರಂಜಿಗಳೋ ಅನಂತ. ಬತ್ತಲಾರದ ಬುಗ್ಗೆಗಳು ಅವು. ಅಂತೆಯೇ ಆ ಕಾಲದ ದೀಪಾವಳಿಗಳು ನನ್ನ ಪಾಲಿಗಿನ್ನೂ ಚಿರನೂತನವಾಗಿವೆ. ನೆನಪಿನಾಗಸದಲ್ಲಿ ಅಂದಿನ ತಾರೆಗಳು ಮಿನುಗುತ್ತಲೇ ಇವೆ.

* * *

**ಹಾ.ಮಾ.ನಾಯಕ :** 1931–2000. ಕನ್ನಡ ಅಂಕಣ ಪ್ರಕಾರಕ್ಕೆ ಘನತೆ, ಗೌರವ, ಕೀರ್ತಿ ತಂದ ಮಹತ್ವದ ಗದ್ಯಲೇಖಕರಲ್ಲೊಬ್ಬರಾದ ಹಾ.ಮಾ.ನಾ. ರವರು ಹುಟ್ಟಿದ್ದು ತೀರ್ಥಹಳ್ಳಿ ತಾಲ್ಲೂಕಿನ ಹಾರೋಗದ್ದೆಯಲ್ಲಿ. ತಂದೆ ಶ್ರೀನಿವಾಸ ನಾಯಕರು, ತಾಯಿ ರುಕ್ಮಿಣಿಯಮ್ಮ. ಪ್ರಾರಂಭಿಕ ಶಿಕ್ಷಣ ಮೇಗರವಳ್ಳಿ, ತೀರ್ಥಹಳ್ಳಿಯಲ್ಲಿ ಇಂಟರ್ ಮೀಡಿಯೆಟ್ ಶಿವಮೊಗ್ಗ

ಪ್ರಥಮ ದರ್ಜೆ ಕಾಲೇಜು. ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎ. (ಆನರ್ಸ್–1955) ಮತ್ತು ಕೊಲ್ಕತಾ ವಿಶ್ವವಿದ್ಯಾಲಯದಿಂದ ಭಾಷಾ ಶಾಸ್ತ್ರದಲ್ಲಿ ಎಂ.ಎ. ಪದವಿ. (1958). ಶಿವಮೊಗ್ಗ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಕ. ನಂತರ ಮೈಸೂರು ವಿ.ವಿ.ದಲ್ಲಿ ಭಾಷಾ ಶಾಸ್ತ್ರದ ರೀಡರ್ ಆಗಿ, ಮಾನಸ ಗಂಗೋತ್ರಿಯ ಸ್ನಾತಕೋತ್ತರ ಕನ್ನಡ ಕೇಂದ್ರದಲ್ಲಿ ಕಾರ್ಯ ನಿರ್ವಹಣೆ, ಫುಲ್‌ಬ್ರೈಟ್ ವಿದ್ಯಾರ್ಥಿ ವೇತನ ಪಡೆದು ಅಮೆರಿಕದ ಇಂಡಿಯಾನ ವಿ.ವಿ.ದಲ್ಲಿ ಅಧ್ಯಯನ ನಡೆಸಿ 'ಕನ್ನಡ ಸಾಹಿತ್ಯ ಮತ್ತು ಆಡುಭಾಷೆ' ಮಹಾಪ್ರಬಂಧ ಮಂಡಿಸಿ ಪಡೆದ ಪಿಎಚ್.ಡಿ. ಪದವಿ. ನಂತರ ಭಾಷಾಶಾಸ್ತ್ರದ ಪ್ರಾಧ್ಯಾಪಕರಾಗಿ, ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಗುಲಬರ್ಗಾ ವಿಶ್ವವಿದ್ಯಾಲಯದಿಂದ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದರು.

ಸಾಹಿತ್ಯ ಸಲ್ಲಾಪ, ಸಲ್ಲಾಪ, ಸಂಪುಟ, ಸಂಪದ ಮೊದಲ್ಗೊಂಡು ಸಾರಸ್ವತದವರೆಗೆ ಬರೆದ 19 ಲೇಖನ ಸಂಗ್ರಹಗಳು. ಅಂಕಣ ಬರಹ ಸಂಗ್ರಹ 'ಸಂಪ್ರತಿಗೆ' ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ. ಹಲವಾರು ವ್ಯಕ್ತಿಚಿತ್ರ, ಸಂಕೀರ್ಣ, ಸೃಜನಶೀಲ ಕೃತಿಗಳ ರಚನೆ. ಅಕ್ಕಮಹಾದೇವಿ, ಆಲೂರು ವೆಂಕಟರಾಯರು, ಭಾರತೀಯ ಸಾಹಿತ್ಯದಲ್ಲಿ ಗಾಂಧಿ, ಕಾವ್ಯ ಕಾರಂಜಿ, ಕಾವ್ಯದೀಪ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಸ.ಸ. ಮಾಳವಾಡ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾಲಯದ ಸುವರ್ಣಮಹೋತ್ಸವ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಮತ್ತು ಯಕ್ಷಗಾನ ಅಕಾಡಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಮುಂತಾದುವು.

# 2. ಮಳೆಗಾಲದ ಚಕ್ರ

**–ಕೆ.ಪಿ. ಪೂರ್ಣಚಂದ್ರ ತೇಜಸ್ವಿ**

ಮಳೆಯ ಮೇಲೆ ಮಾತಾಡುವವರನ್ನು ನೋಡಿದ್ದೇನೆ. ಮಳೆಯ ವೈಭವವನ್ನು, ಮರಗಿಡಗಳ, ಹಕ್ಕಿಗಳ, ಮಕ್ಕಳ ಹಿಗ್ಗನ್ನು ವರ್ಣಿಸುವವರನ್ನು ನೋಡಿದ್ದೇನೆ. ಇಲ್ಲಾ ಮಳೆಯ ಗೋಳನ್ನು, ಚಳಿಯನ್ನು ಹೊರಗೆ ಹೊರಡಲಾರದಂತೆ ಬಿಗಿ ಹಿಡಿಯುವ ಅದರ ಅದೃಶ್ಯ ಹಸ್ತಗಳನ್ನು ತೆಗಳುವವರನ್ನು ನೋಡಿದ್ದೇನೆ. ಆದರೆ ನನಗೆ ಮಳೆಯ ಬಗ್ಗೆ ಈವರೆಗೂ ಅಂಥದೊಂದು ಧೋರಣೆಯನ್ನು ತಳೆಯಲು ಸಾಧ್ಯವೇ ಆಗಿಲ್ಲ. ಮಳೆ ಬರೀ ಮಳೆ ಅಷ್ಟೇ. ನನಗೆ ಮಳೆ ನನ್ನ ಮನಸ್ಸನ್ನು ನೆನಪುಗಳನ್ನು ಕೆದಕುವ ಕೋಳಿಯಂತೆ ಮಾಡುತ್ತದೆ. ಮಳೆ ಮತ್ತು ಮಳೆಗೆ ಸಂಬಂಧಿಸಿದ ನೂರಾರು ಘಟನೆಗಳು ನನ್ನ ನೆನಪಿನಲ್ಲಿ ಮೂಡುತ್ತವೆ.

ಕಾಫಿ ತೋಟಗಳ ನಮ್ಮೂರಿಗೆ ಮಳೆ, ಅದೂ ಏಪ್ರಿಲ್‌ನಲ್ಲಿ ಬರುವ ಮಳೆ, ಕಾಫಿ ಬೆಳೆಗಾರರು ಉಸಿರು ಹಿಡಿದು ಪ್ರತೀಕ್ಷೆಯಿಂದ ನೋಡುವಂತೆ ಮಾಡುತ್ತದೆ. ಕಾಫಿಗೆ ಏಪ್ರಿಲ್ ಮಳೆ ಬೆಳೆಗಾರರ ಜೀವ ಉಳಿಸುವ ಅಥವಾ ಸಾಯಿಸುವ ಮಳೆ. ಈ ಕಾಫಿಗಿಡದ ಪ್ರಕೃತಿ ಅತಿ ವಿಚಿತ್ರ. ಬೇಸಿಗೆಯ ಉರಿಯಲ್ಲಿ ಗಿಡಗಳೆಲ್ಲಾ ಬಾಡಿ ಎಲೆಗಳೆಲ್ಲಾ ಜೋಲಿದಾಗ ಇದರಲ್ಲಿ ಮೊಗ್ಗು ಮೂಡತೊಡಗುತ್ತವೆ. ಆದರೆ ಮೂಡಿದ ಮೊಗ್ಗುಗಳು ಹೂವಾಗುವುದಿಲ್ಲ. ಹಾಗೆ ನಿಂತು ಮಳೆಗೆ ಕಾಯತೊಡಗುತ್ತವೆ. ಏಪ್ರಿಲ್ ಮಳೆಗಾಗಿ. ಏಪ್ರಿಲ್ ಮೊದಲಲ್ಲಿ ಸರಿಯಾಗಿ ಒಂದು ಇಂಚಾದರೂ ಮಳೆಯಾಗಲೇ ಬೇಕು. ಮಳೆ ಬಂದ ಒಂಭತ್ತು ದಿನಕ್ಕೆ ಸರಿಯಾಗಿ ಹೂವು ಮುಂದಕ್ಕೆ ಬಂದು ಇಡೀ ಕಾಫಿ ತೋಟ ಹಾಲು ಚೆಲ್ಲಿದಂತೆ ಬೆಳ್ಳಗಾಗುತ್ತದೆ. ಇಡೀ ಊರಿಗೆ ಊರೇ ಗಮಗಮ ವಾಸನೆ. ಬೆಳಗಾಗುವುದರೊಳಗೆ ತಂಬೂರಿಯ ನಾದದಂತೆ ಜೇನುಗಳ ಜೋಗುಳ, ಆದರೆ ನೆನಪಿರಲಿ, ಸರಿಯಾಗಿ ಒಂದಿಂಚು ಮಳೆಯಾಗಬೇಕು. ಇಲ್ಲದಿದ್ದರೆ ಕಾಫಿಯ ಕತೆ ಮುಗಿಯಿತು. ಮಳೆ ನಾಲ್ಕು ದಿನ ತಡವಾಗಿ ಬಂದರೂ ತೊಂದರೆ ಇಲ್ಲ. ಅರೆಬರೆ ಮಳೆ ಮಾತ್ರ ಆಗಕೂಡದು.

ಬೆಳ್ಳಿಯಪ್ಪ ಅಂತ ಒಬ್ಬರು ಇದ್ದರು. ತುಂಬಾ ದೊಡ್ಡ ತೋಟ ಅವರದ್ದು. ಮಳೆಯ ದೆಸೆಯಿಂದಾಗಿ ಅವರು ನೆಲಹಿಡಿದು ಕೊನೆಗೆ ತೋಟ ಮಾರಿ ದೇಶಾಂತರ ಹೋದುದು ನನಗೆ ನೆನಪಿದೆ. ಒಂದಲ್ಲ ಒಂದು ದಿನ ದುಡ್ಡು ಸಿಕ್ಕೇ ಸಿಗುತ್ತದೆ ಎಂದು ಸುಮಾರು ಸಾಲ ಮಾಡಿ ತೋಟಕ್ಕೆ ಹಾಕಿದ್ದರು. ಆದರೆ ಅವರಿಗೆ ಕೆಲವು ವರ್ಷ ಏಪ್ರಿಲ್ ಮಳೆ ಸರಿಯಾಗಿ ಬರಲೇ ಇಲ್ಲ. ಮಳೆ ಸರಿಯಾಗಿ ಬಾರದಿದ್ದರೆ ರೈತರಿಗೆ ತೊಂದರೆ ಎಂದು ಕೇಳಿದ್ದೆನಾದರೂ ಈ ರೀತಿ ತೋಟ ಮಾರಿ ಗುಳೆ ಹೋಗಬೇಕಾಗಿ ಬರುತ್ತದೆಂದು ನಾನು ತಿಳಿದಿರಲಿಲ್ಲ. ಎಲ್ಲ ಕಡೆ ಜೋರಾಗಿ ಮಳೆ ಬಂದಿತ್ತು. ನಾನು ಆಗಿನ್ನೂ, ಕಾಫಿ ತೋಟ ಮಾಡಿರಲಿಲ್ಲ. ಬೆಳ್ಳಿಯಪ್ಪನವರನ್ನು ಕಂಡಾಗ ಮಳೆ ಬಗ್ಗೆ ವಿಚಾರಿಸಿದೆ. ಮುಖ ಹಿಂಜಿಕೊಂಡು ಮಳೆ ಕೊಂಚವೇ ಉದುರಾಡಿ ಹೋಯ್ತೆಂದು ಗೊಣಗಿದರು. ಅವರ ತೋಟಕೆ ಸ್ವಲ್ಪ ಸ್ವಲ್ಪ ಮಳೆಯಾಗಿತ್ತು. ಪರ್ವಾಗಿಲ್ಲ. ನೆಲ ಅಷ್ಟೊಂದು ನೆನೆದಿಲ್ಲ. ಈ ಮಳೆಗೆ ಮೊಗ್ಗುಗಳೇನೂ ಮುಂದೆ ಬರುವುದಿಲ್ಲ. ಇವತ್ತು ನಾಳೆಯಲ್ಲಿ ಒಳ್ಳೆ ಮಳೆ ಖಂಡಿತ ಬರುತ್ತದೆಂದು ಸಮಾಧಾನ ಹೇಳಿದೆ.

ಒಳ್ಳೆ ಮಳೆ ಬಂದವರು ಖುಷಿಯಲ್ಲಿ ಓಡಾಡುತ್ತಾ ಇದ್ದರು. ಬ್ಯಾಂಕುಗಳಿಗೆ ಮುಂಗಡ ಹಣಕ್ಕೆ ಅರ್ಜಿ ಹಾಕುತ್ತಾ ಹೂವಿನ ದಿನ ಯಾವತ್ತೆಂದು ಲೆಕ್ಕ ಹಾಕುತ್ತಾ ಅವತ್ತಿನ ಡಿನ್ನರಿಗೆ ಏನೇನು ತಯಾರು ಮಾಡಬೇಕೆಂದು ಯೋಚಿಸುತ್ತಾ ಬಂಧುಮಿತ್ರರ ಪಟ್ಟಿ ರೆಡಿಮಾಡುತ್ತಿದ್ದರು. ಬೆಳ್ಳಿಯಪ್ಪ ಆಕಾಶದ ಕಡೆ ನೋಡಿ ನಿಟ್ಟುಸಿರು ಬಿಡುತ್ತಿದ್ದರು. ಮಳೆ ಎಷ್ಟು ಅನಿರೀಕ್ಷಿತವಾಗಿ ಬಂದಿತ್ತೋ ಅಷ್ಟೇ ಅನಿರೀಕ್ಷಿತವಾಗಿ ಜಾಗ ಖಾಲಿ ಮಾಡಿತ್ತು. ಮಳೆ ತೀರಾ ಕಡಿಮೆ ಬಂದದ್ದರಿಂದ ಅನಾಹುತ ಆಗಲಾರದೆಂಬ ನಮ್ಮ ನಂಬಿಕೆ ದಿನಗಳೆದಂತೆ ಹುಸಿಯಾಯ್ತು. ಮೊಗ್ಗುಗಳು ನಿಧಾನವಾಗಿ ದೊಡ್ಡವಾಗತೊಡಗಿದವು. ಸದ್ಯದಲ್ಲೇ ಇನ್ನೊಂದು ಮಳೆ ಬಾರದಿದ್ದರೆ ಆ ಮೊಗ್ಗುಗಳು ಉದುರುವುದಲ್ಲಿ ಅನುಮಾನವೇ ಇರಲಿಲ್ಲ.

ಮೂರಾಲ್ಕು ದಿನಗಳಾದ ಮೇಲೆ ಮತ್ತೆ ಆಕಾಶದಲ್ಲಿ ಮೋಡ ಕಟ್ಟತೊಡಗಿತು. ಹಾಗಾದರೆ ಸದ್ಯ ಇನ್ನೊಂದು ಮಳೆ ಬರಬಹುದು ಎಂದು ಬೆಳ್ಳಿಯಪ್ಪ ಆಸೆಯಿಂದ ಕಾದರು. ಆದರೆ ಕಾಫಿ ತೋಟದಲ್ಲಿ ಕಾಲುಭಾಗ ಮೊಗ್ಗುಗಳಾಗಲೆ ಮುಂದೆ ಬಂದು ಬಿಟ್ಟಿದ್ದವು.

ಮುಂದಿನ ಮೂರುನಾಲ್ಕು ದಿನದೊಳಗೆ ಮಳೆ ಬಂದರೆ ಮಾತ್ರ ಅವು ಕಾಯಿಕಟ್ಟುತ್ತಿದ್ದವು. ಆದರೆ ಮಳೆ ಬರಲೇ ಇಲ್ಲ. ದಿನಾ ಗುಡುಗು ಮಿಂಚು ಸಿಡಿಲಿನ ಭರಾಟೆ ಆಗಸದಲ್ಲಿ. ಅವರ ಮನೆಯ ಮೇಲೆ ಕರಿಗಟ್ಟಿ ನಿಂತ ಮೋಡವೂ ನಿಧಾನವಾಗಿ ಜರುಗಿ ಬೇರೆಲ್ಲೋ ಧಾರಾಕಾರ ಮಳೆ ಸುರಿಸುತ್ತಿತ್ತು. ದಿನವೂ ಅಲ್ಲಿ ಆಯ್ತಂತೆ ಮಳೆ ಇಲ್ಲಿ ಆಯ್ತಂತೆ ಮಳೆ ಅನ್ನುವ ವರ್ತಮಾನ ಒಂದೇ ಬೆಳ್ಳಿಯಪ್ಪನವರ ಕಿವಿಗೆ. ಮಳೆ ಮಾತ್ರ ಬರಲೇ ಇಲ್ಲ. ಕಾಫಿ ಗಿಡದಲ್ಲಿ ಮುಂದಕ್ಕೆ ಬಂದಿದ್ದ ಕಾಲು ಭಾಗ ಮೊಗ್ಗುಗಳು ಮುಂದಕ್ಕೆ ಬಂದು ಬೆಳ್ಳಗಾದವು. ಆದರೆ ಅರಳಲು ತ್ರಾಣವೇ ಇಲ್ಲ. ದಳಗಳು ಮುಚ್ಚಿಕೊಂಡೇ ಕುಳಿತವು. ದುಂಬಿ ಕೂರಲೇ ಇಲ್ಲ. ಪರಾಗಸ್ಪರ್ಶ ಆಸ್ಪದವೇ ಇಲ್ಲ. ಐದನೆಯ ದಿನಕ್ಕೆ ಮೊಗ್ಗುಗಳೆಲ್ಲಾ ಕೆಂಪಾದವು. ಅಲ್ಲಿಗೆ ಅದರ ಕತೆ ಮುಗಿಯಿತು. ಗಿಡಗಳನ್ನು ಅಲ್ಲಾಡಿಸಿದರೆ ಸಾಕು, ಭತ್ತದ ಕಾಳುಗಳಂತೆ ಸುಟ್ಟು ಕೆಂಚಾದ ಮೊಗ್ಗುಗಳೂ ಜಳಜಳನೆ ಉದುರುತ್ತಿದ್ದವು.

ಮುಂದಕ್ಕೆ ಬಂದ ಮೊಗ್ಗುಗಳೆಲ್ಲಾ ಉದುರಿ ನಾಶವಾದ ಮೇಲೆ ಮತ್ತೊಮ್ಮೆ ಭಯಂಕರ ಮೋಡ ಕಟ್ಟಿತು. ಆಕಾಶದಲ್ಲಿ ಅದರ ಗಲಭೆ ನೋಡಿದರೆ ದೊಡ್ಡ ಜಲಪ್ರಳಯದ ಮುನ್ನುಡಿಯಂತಿತ್ತು. ಭರೋ ಎಂದು ಮೋಡ ಮೊರೆಯುತ್ತಿತ್ತು. ನಾನು 'ಪರ್ವಾ ಇಲ್ಲ, ಬೆಳ್ಳಿಯಪ್ಪನವರಿಗೆ ಅದೃಷ್ಟ ಇದೆ' ಎಂದುಕೊಂಡೆ. ಬೆಳಿಗ್ಗೆ ಎದ್ದಾಗ ನೆಲವೆಲ್ಲಾ ಒದ್ದೆ, ಭೂಮಿ ಎಲ್ಲಾ ಕೆಸರೆದ್ದು ಹೋಗಿದೆ. ಸರಿ, ಬೆಳ್ಳಿಯಪ್ಪನವರಿಗೆ ಡಿನ್ನರಿಗೆ ಏರ್ಪಾಡು ಮಾಡಿರೆಂದು ಹೇಳಬೇಕೆಂದುಕೊಂಡೆ. ಆದರೆ ಆಶ್ಚರ್ಯ–ಬೆಳ್ಳಿಯಪ್ಪನವರ ತೋಟದ ಹತ್ತಿರ ಹತ್ತಿರವಾದಂತೆ ಮಳೆ ಕಡಿಮೆಯಾಗಿತ್ತು. ಅವರ ತೋಟದ ಗಿಡಗಳಂತೂ ಬಾಡಿದ ಮುಖದಲ್ಲೇ ನಿಂತಿದ್ದವು. ಬೆಳ್ಳಿಯಪ್ಪ ಹರಳೆಣ್ಣೆ ಕುಡಿದ ಮುಖ ಮಾಡಿಕೊಂಡು ನಿಂತಿದ್ದರು. ಕಳೆದ ಸಾರಿ ಆದಷ್ಟೇ ಅರೆಬರೆ ಮಳೆ ಬಿದ್ದಿತ್ತು. ಅವರಿಗೆ ಯಾವರೀತಿ ಸಮಾಧಾನ ಹೇಳಬೇಕೆಂದು ತೋಚಲಿಲ್ಲ. ನಾನೂ ಆಕಾಶದ ಕಡೆಗೆ ನೋಡಿ ನಿಟ್ಟುಸಿರು ಬಿಟ್ಟು ಇವತ್ತಾದರೂ ಒಳ್ಳೆ ಮಳೆ ಬರಬಹುದೇನೋ ಎಂದು ಹಾರೈಸಿದೆ. ಆದರೆ ಬರಲೇ ಇಲ್ಲ. ಸುತ್ತ ಮುತ್ತೆಲ್ಲಾ ಬೀಳುತ್ತಿದ್ದ ಮಳೆಯೂ ಅವರ ತೋಟಕ್ಕೆ ಒಂದರೆಡು ಹನಿ ಚಿಮುಕಿಸಿ ಇದ್ದಬದ್ದ ಅಲ್ಪಸ್ವಲ್ಪ ಮೊಗ್ಗನ್ನೂ ಜಳ್ಳು ಮಾಡಿ ಹೋಗುತ್ತಿತ್ತು. ಗಿಡದ ಬುಡಕ್ಕೆ ಕಾಲಿನಲ್ಲಿ

ಒದ್ದರೆ ಗಳಗಳ ಮೊಗ್ಗುಗಳು ಜಳ್ಳು ಬಿದ್ದು ಉದುರುತ್ತಿದ್ದವು. ಕಳೆದ ಒಂದೆರಡು ವರ್ಷಗಳಿಂದ ಹೀಗೆ ಆಗಿ ಮೈಮೇಲೆ ಸಾಲ ಏರಿಕುಳಿತಿದ್ದ ಬೆಳ್ಳಿಯಪ್ಪನವರು ಆ ವರ್ಷ ಸಂಪೂರ್ಣ ನೆಲ ಹಿಡಿದರು. ತೋಟ ಮಾರದೇ ವಿಧಿಯೇ ಇರಲಿಲ್ಲ.

ಮಳೆ ಬರುವುದನ್ನೇ ಕಾಯುತ್ತ ಮಳೆ ಬಂದ ತಕ್ಷಣ ಒಂಭತ್ತು ದಿನಗಳೊಳಗೆ ಹೂ ಬಿಡುವ ಕಾಫಿಗಿಡಗಳ ಈ ವಿಚಿತ್ರ ಪ್ರಕೃತಿ ನಾನು ತಿಳಿದಂತೆ ಬೇರಾವ ಕೃಷಿ ಸಸ್ಯಗಳಿಗೂ ಇರುವಂತೆ ಕಾಣಲಿಲ್ಲ. ಅದಕ್ಕೆ ಕಾಫಿ ಬೆಳೆಗಾರ ಎಂದರೆ ವರ್ಷಕ್ಕೊಮ್ಮೆ ಮಳೆಯ ಜೊತೆ ಜೂಜಾಡುವವನು ಎಂದೇ ಪ್ರತೀತಿ. ಮಳೆಗಾಲದಲ್ಲಿ ಮಳೆ ಹೆಚ್ಚು ಕಡಿಮೆಯಾದರೂ ಕಾಫಿ ಬೆಳೆಗಾರ ಯೋಚಿಸುವುದಿಲ್ಲ. ಆದರೆ ಏಪ್ರಿಲ್‌ನಲ್ಲಿ ಹೂವಿನ ಮಳೆ ಮಾತ್ರ ಸರಿಯಾಗಿ ಬರಲೇಬೇಕು. ಅದು ಒಂದು ಇಂಚು ಮೇಲ್ಪಟ್ಟು ಬಂತೋ ಗೆದ್ದ. ಅವನ ಸಂಭ್ರಮ ಸಂತೋಷ ಯಾಕೆ ಹೇಳುತ್ತೀರಿ? ನೆಂಟರಿಷ್ಟರಿಗೆಲ್ಲಾ ಊಟಕ್ಕೆ ಟೆಲೆಗ್ರಾಂಗಳೇ ಹೋಗುತ್ತವೆ. ಹಳೆ ಕಾರು ಮಾರಿ ಹೊಸ ಕಾರು ಕೊಳ್ಳುವ, ಮಗಳಿಗೆ ಅದ್ದೂರಿ ವಿವಾಹ ಮಾಡುವ, ಕ್ಲಬ್ಬಿನಲ್ಲಿ ಹೆಚ್ಚು ಹೊತ್ತು ಇಸ್ಪೀಟಾಡುವ, ಎಲ್ಲ ಚಾಳಿಗಳೂ ನವೀಕರಿಸಲ್ಪಡುತ್ತವೆ.

ಏಪ್ರಿಲ್ ಆಕಾಶ ಬೆಳೆಗಾರರಿಗೆ ಕೊಂಚವಾದರೂ ರಕ್ತದ ಒತ್ತಡ ಹೆಚ್ಚಿಸದೇ ಬಿಡುವುದೇ ಇಲ್ಲ. ಆಗ ಬರುವ ರೇವತಿ ಮಳೆಯ ರೀತಿಯೇ ಹಾಗೆ, ಒಂದು ಕಡೆ ಬಂದರೆ ಇನ್ನೊಂದು ಕಡೆ ಇಲ್ಲ. ಎಷ್ಟೋ ಸಾರಿ ಮಳೆ ಭೋರ್ಗರೆಯುತ್ತ ಬಂದು ತೋಟದ ಬೇಲಿಯಾಚೆಯೇ ನಿಂತು ಬಿಟ್ಟಿದ್ದನ್ನೂ ನೋಡಿದ್ದೇನೆ. ತೋಟದ ಬೇಲಿ ದಾಟದೆ ಹಾಗೆ ಹೋದರೆ ಏನೂ ತೊಂದರೆ ಇಲ್ಲ. ಆದರೆ ಅಷ್ಟಿಷ್ಟು ಎರಚಿ ಕೀಟಲೆ ಮಾಡಿ ಹೋದರೆ ಮಾತ್ರ ಅವನು ಸತ್ತ. ಬೆಳ್ಳಿಯಪ್ಪನವರಿಗಾದ. ಗತಿಯೇ ಅವನಿಗೂ ಈ ಮಳೆ ಪ್ರತಿ ವರ್ಷ ಎಲ್ಲಾದರೂ ಯಾರಿಗಾದರೂ ತೊಂದರೆ ಆದರೆ ಯಾವಾಗಲೋ ಕೊಟ್ಟೇ ಕೊಡುತ್ತೆ. ಒಮ್ಮೊಮ್ಮೆ ತೊಂದರೆಕೊಟ್ಟರೆ ಪರವಾ ಇಲ್ಲ. ಸತತವಾಗಿ ಮೂರ್ನಾಲ್ಕು ವರ್ಷ ಹಾಗಾಯ್ತು ತೋಟ ಮಾರದೆ ವಿಧಿಯೇ ಇರುವುದಿಲ್ಲ.

ಏಪ್ರಿಲ್ ಬಂತೆಂದರೆ ಆಕಾಶವಾಣಿಯ ಹವಾಮಾನ ಕೇಳುವವರೇನು? ಟೀವಿಯ ಇನ್ಸಾಟ್ ಫೋಟೋ ನೋಡಿ ಲೆಕ್ಕಾಚಾರ ಹಾಕುವವರೇನು? ಜಾತಕ

ನೋಡಿಸುವವರೇನು? ಜೋಯಿಸರ ಹತ್ತಿರ ಪಂಚಾಂಗ ನೋಡಿಸುವವರೇನು? ರಾತ್ರಿ ಕಪ್ಪೆ ಕೂಗುತ್ತದೆಯೊ ಕಿವಿಗೊಟ್ಟು ಆಲಿಸುವವರೇನು?

ನಮ್ಮೂರಿನ ಪಕ್ಕದ ಹಳ್ಳಿಯ ಪಾಪಣ್ಣ, ಅವರ ಹಳ್ಳಿ ಕಿಟ್ಟಪ್ಪ ಜೋಯಿಸರ ಕೈಲಿ ಪಂಚಾಂಗ ನೋಡಿಸಿ ಬಂದು ಈ ಸಾರಿ ಮಳೆ ಹೇಗೆಂದು ಹೇಳುತ್ತಿದ್ದ. ಜೋಯಿಸರ ಮಾತುಗಳೋ ಎಷ್ಟೊಂದು ಒಗಟುಗಳಂತಿರುತ್ತಿದ್ದುವೆಂದರೆ ಅವುಗಳಿಂದ ಎಲ್ಲಾ ಅರ್ಥ ಬರುವಂತಿರುತ್ತಿದ್ದವು. ಮಳೆ ಬರಲಿ, ಬರದೆ ಇರಲಿ 'ನಾ ಮೊದಲೇ ಹೇಳಲಿಲ್ಲೇನು' ಎಂದು ಪಾಪಣ್ಣ ಹಲ್ಲು ಕಿರಿಯುವುದನ್ನು ಬಿಡುತ್ತಿರಲಿಲ್ಲ.

ಹಾಗೆ ನೋಡಿದರೆ ಕಿಟ್ಟಪ್ಪ ಜೋಯಿಸರ ಅರ್ಥಗರ್ಭಿತ ಮಾತುಗಳಿಗೂ ಆಕಾಶವಾಣಿಯ ಹವಾಮಾನ ಮುನ್ಸೂಚನೆಗೂ ಹೆಚ್ಚು ವ್ಯತ್ಯಾಸ ಇರುವಂತೆ ತೋರುವುದಿಲ್ಲ. ಸಾಧಾರಣದಿಂದ ಹಿಡಿದು ಭಾರಿಯಾಗಿ ದಕ್ಷಿಣ ಒಳನಾಡಿನ ಹಲವೆಡೆಗಳಲ್ಲಿ ಸುರಿಯಬಹುದಾದ ಮಳೆಯ ಬಗ್ಗೆ ಕೊಡುವ ಮುನ್ನೆಚ್ಚರಿಕೆ ಕೇಳಿ ನಾವು ಹೊರಗೆ ಬಂದು ಇಣುಕಿದರೆ ನಕ್ಷತ್ರಮಯವಾದ ವಿಶಾಲ ಅಂತರಿಕ್ಷ ಅಪಹಾಸ್ಯ ಮಾಡುತ್ತದೆ. ಭವಿಷ್ಯದ ಅನಿಶ್ಚಯತೆಯೇ ಈ ರೀತಿಯ ವಾಕ್ ಸಂಪ್ರದಾಯವನ್ನು ಸೃಷ್ಟಿಸಿದೆ ಎಂದು ಕಾಣುತ್ತದೆ. ಕಿಟ್ಟಪ್ಪ ಜೋಯಿಸರಿಂದ ಹಿಡಿದು ಆಕಾಶವಾಣಿ ಮತ್ತು ಪುಟ್ಟಪರ್ತಿ ಸಾಯಿಬಾಬನವರೆಗೆ ಎಲ್ಲರೂ ಶಕುನ ಹೇಳುವ ಬುಡುಬುಡುಕೆಯವರ ವಾಕ್ ಸಂಪ್ರದಾಯವನ್ನೇ ಅಭ್ಯಾಸ ಮಾಡಿಕೊಂಡಿದ್ದಾರೆ.

ಪಾಪಣ್ಣ ಈ ಸಾರಿ ಕಿಟ್ಟಪ್ಪ ಜೋಯಿಸರ ಹವಾಮಾನ ಮುನ್ಸೂಚನೆ ಕೇಳುವುದನ್ನು ಬಿಟ್ಟು ಮುತ್ತುಗದ ಮರದಲ್ಲಿ ಕಾಯಿ ಬರುವ ರೀತಿಯನ್ನು ನೋಡಿ ಲೆಕ್ಕ ಹಾಕಬೇಕೆಂದು ಹೇಳುತ್ತಿದ್ದ. ಕಿಟ್ಟಪ್ಪ ಜೋಯಿಸರು ಏನು ಹೇಳಿದರೆಂದು ಕೇಳಿದ್ದಕ್ಕೆ ಅವರನ್ನು ಊರವರೆಲ್ಲಾ ಹೊಡೆದು ಊರು ಬಿಡಿಸಿದರೆಂದು ಹೇಳಿದ. ಕಿಟ್ಟಪ್ಪ ಜೋಯಿಸರು ತಮ್ಮ ವಾಕ್‌ಶೈಲಿಯನ್ನು ಬದಲಿಸಿಕೊಂಡು ಖಚಿತವಾಗಿ ಹೇಳಿದ್ದೇ ಇದಕ್ಕೆ ಕಾರಣವಾಗಿತ್ತು. ಹೋದವರ್ಷ ಅರ್ಧ ಮಳೆ ಗುಡುಗಿದ್ದನ್ನೇ ಕಾರಣ ಮಾಡಿಕೊಂಡು, 'ಅದ್ರಿ ಮಳೆ ಗುಡುಗಿದರೆ ಆರು ವರ್ಷ ಮಳೆ ಇಲ್ಲ, ಇನ್ನ ಆರು ವರ್ಷ ಮಳೆ ವಿಷಯ ಕೇಳುವುದಕ್ಕೆ ನೀವು ಯಾರೂ ಇಲ್ಲಿಗೆ ಬರುವುದೇ

ಬೇಡ' ಎಂದರಂತೆ. ಇಷ್ಟೇ ಕಾರಣಕ್ಕೆ ಅವರನ್ನು ಊರು ಬಿಡಿಸಿದ್ದಲ್ಲ. ದಕ್ಷಿಣೆ ಪೂಜೆ ಇತ್ಯಾದಿಗಳೆಲ್ಲಾ ಇಳಿಮುಖ ಆಗಿ ಹೊಟ್ಟೆಪಾಡಿಗೆ ಲಾಟರಿ ಟಿಕೆಟ್ಟು ಮಾರಬೇಕಾದ ದುಃಸ್ಥಿತಿಗೆ ಬಂದಿದ್ದ ಕಿಟ್ಟಪ್ಪ ಜೋಯಿಸರು ಪಂಚಾಂಗ ಹಿಡಿದುಕೊಂಡೇ ಊರವರಿಗೆ ತರತರದ ಕಾಟ ಕೊಟ್ಟರಂತೆ. ನಾಲ್ಕಾರು ಮದುವೆಗಳಿಗೆ ಜಾತಕ ಕೂಡಿಸಿಕೊಡಲು ಕೇಳಿದಾಗ ಗಂಡು ಹೆಣ್ಣಿನ ಜಾತಕವೇನೋ ಕೂಡುತ್ತದೆ. ಆದರೆ ಗಂಡಿನ ತಂದೆತಾಯಿಗಳಿಗೆ ಮಾತ್ರ ಈ ವಿವಾಹದಿಂದ ಯಮಗಂಡವಿದೆ ಎಂದರಂತೆ. ಇದೇ ರೀತಿ ಗೃಹ ಪ್ರವೇಶ, ಮಗು ತೊಟ್ಟಿಲಿಗೆ ಹಾಕುವುದು, ಎಲ್ಲದಕ್ಕೂ ತರತರದ ಕಣಿ ಹೇಳಿ ಊರವರಿಗೆಲ್ಲಾ ಕೋಪ ಬರಿಸಿ ಕಿರಿಕಿರಿ ಉಂಟು ಮಾಡಿದರು. ಅದಕ್ಕೆ ಆ ಗಂಡುಗಳು, ಮನೆಕಟ್ಟಿಸಿದವರು ಎಲ್ಲರೂ ಎಲ್ಲರಿಗೂ ಸಂಬಂಧಿಸಿದ ಒಂದು ಸಾರ್ವಜನಿಕ ಕಾರಣಕ್ಕಾಗಿ ಕಾದಿದ್ದರು. ಮಳೆ ಅದನ್ನು ಒದಗಿಸಿಕೊಟ್ಟಿತ್ತು. "ಈ ದರಿದ್ರ ಹಾರುವನ ಅಬದ್ಧ ತಾಳುವುದಕ್ಕೆ ಆಗುವುದಿಲ್ಲ, ಆರು ವರ್ಷ ಮಳೆ ಬರದಿದ್ದ ಮೇಲೆ ಈ ಹಾರುವ ಇದ್ದರೆಷ್ಟು ಸತ್ತರೆಷ್ಟು? ಇವನಿಗೆ ಸ್ವಲ್ಪವಾದರೂ ಊರಿನ ಮೇಲೆ ಕರುಣೆ ಬೇಡವೆ, ಈ ಕಂಟಕ ಕಳೆಯೋದಕ್ಕೆ ಏನಾದರೂ ಶಾಂತಿಗೀಂತಿ ಹೇಳುತ್ತಾನ? ಅದೂ ಇಲ್ಲಾ ಅಂತಾನೆ. ಒದ್ದೋಡಿಸಿರೋ ಇವನ್ನ" ಎಂದು ಕೂಗಾಡಿದರಂತೆ. ಇವನಿಂದ ತೊಂದರೆಗೊಳಗಾಗಿದ್ದ ನಾಲ್ಕಾರು ಗಂಡುಗಳು ಒಂದರೆಡು ಏಟು ಕೊಟ್ಟೂ ಬಿಟ್ಟರಂತೆ. ಆದರೆ ಕಿಟ್ಟಪ್ಪ ಜೋಯಿಸರು ಊರು ಬಿಟ್ಟುಹೋಗಲು ಪಾಪಣ್ಣ ಕೊಟ್ಟ ಅಧಿಕೃತ ಕಾರಣಮಾತ್ರ "ಅದ್ರಿ ಮಳೆ ಗುಡುಗಿದರೆ ಆರು ವರ್ಷ ಮಳೆ ಇಲ್ಲಾಂದ ಜೋಯಿಸ" ಎಂದು.

ಪಾಪಣ್ಣ ಒಬ್ಬ ಸೋಮಾರಿ ಸಿದ್ದ. ಮಳೆಯನ್ನು ಸದಾ ಬಯ್ಯುವುದೇ ಅವನ ಕೆಲಸ. ಅವನಿಗೆ ಪಿತ್ರಾರ್ಜಿತವಾದ ಮೂರು ಎಕರೆ ಗದ್ದೆ ಇದೆಯಂತೆ. ಯಾವತ್ತೂ ಅವನು ಗದ್ದೆ ಉತ್ತುದನ್ನಾಗಲೀ, ನಾಟಿ ಮಾಡಿದ್ದಾನ್ನಾಗಲೀ ನಾನು ನೋಡಿಲ್ಲ. ಪ್ರತಿ ವರ್ಷವೂ 'ಮಳೆ ಸರಿಯಾಗಲಿಲ್ಲ, ನನ್ನ ಗದ್ದೆ ಕೆಸರು ಮಾಡಲು ನೀರು ಸಾಕಾಗಲಿಲ್ಲ,' ಎಂದು ಬೊಗಳುತ್ತಿದ್ದ.

ಒಂದು ವರ್ಷ ಒಂದು ಸಾರಿ ಮಳೆ ಬಂತು. ಕೇವಲ ಏಳು ಇಂಚಿಗೆ ಬೆಂಗಳೂರಿನ ಜನ 'ಶತಮಾನದ ಮಳೆ' ಇತ್ಯಾದಿ ವಿಶೇಷಣ ಕೊಟ್ಟು ಕೂಗಾಡುತ್ತಾರೆ. ಆದರೆ ನಮಗೆ

ಅವತ್ತು ಬಿದ್ದಿದ್ದು ಕೇವಲ ಎಂಟುಗಂಟೆಗಳಲ್ಲಿ ಹದಿನಾರು ಇಂಚು ಮಳೆ. ದಬದಬ ಎಂದು ಕೊಡ ಮಗುಚಿದಂತೆ ಆಕಾಶದಿಂದ ಬೀಳುತ್ತಿದ್ದ ಮಳೆ ಕಂಡು ಜನ ಬೆಟ್ಟ ಗುಡ್ಡಗಳೆಲ್ಲಾ ಕರಗಿ ನೀರಾಗುತ್ತವೆಂದು ಹೌಹಾರಿದ್ದರು. ಮಳೆ ಕೊನೆಕೊನೆಗಂತು ಹನಿಹನಿಯಾಗಿ ಬೀಳದೆ ದೊಡ್ಡದೊಡ್ಡ ಧಾರೆಯಾಗಿ ಬೀಳತೊಡಗಿತು. ಮೋಡ ಹೇಗೆ ಘನೀಭವಿಸಿ ಕತ್ತಲು ಕಟ್ಟಿತೆಂದರೆ ಮನೆಯೊಳಗೆ ನಿಜಕ್ಕೂ ಮೊಂಬತ್ತಿ ಹಚ್ಚಿಡಬೇಕಾದ ಸನ್ನಿವೇಶ ಒದಗಿತು. ಕಾರಿನಷ್ಟು ಕತ್ತಲೆ ಕರಿಯ ಮೋಡದಿಂದ ಸ್ಪಟಿಕ ಶುಭ್ರವಾದ ನೀರು ಹೇಗೆ ಬರುತ್ತದೆ ಎಂದು ನಾನಂತೂ ಆಶ್ಚರ್ಯಚಕಿತನಾದೆ. ಮನೆ ಎದುರು ಅಂಗಳದಲ್ಲಿ, ಬಟ್ಟೆ ಒಗೆಯುವಲ್ಲಿ, ಕೆಸುವಿನ ಗಿಡಗಳ ಮಗ್ಗುಲಲ್ಲಿ, ಎಲ್ಲೆಂದರಲ್ಲಿ ಜಲ ಒಡೆದು ನೀರು ಧಾರಾಕಾರವಾಗಿ ಉಕ್ಕತೊಡಗಿತು. ಮನೆಯೆದುರೇ ಜಲ ಉದ್ಭವವಾಗಿದ್ದು ನನಗೆ ಮೊದಮೊದಲು ಗೊತ್ತಾಗಲೇ ಇಲ್ಲ. ಹೆಂಚಿನ ನೀರೇ ಇನ್ನೂ ಇಳಿದು ಹರಿದುಹೋಗುತ್ತದೆ ಎಂದು ತಿಳಿದಿದ್ದೆ. ಆದರೆ ಮಳೆ ನಿಂತರೂ ಹರಿಯುತ್ತಲೇ ಇರುವ ನೀರನ್ನು ನೋಡಿದ ಮೇಲೆ ನನಗೆ ಅನುಮಾನ ಶುರುವಾಗಿದ್ದು, ಹರಿಯುವ ನೀರಿನ ಜಾಡುಗಳನ್ನೆಲ್ಲಾ ಹಿಡಿದು ಮೂಲ ನೋಡಿದರೆ ಅದು ಮಳೆ ನೀರಲ್ಲ. ನೆಲದಿಂದ ಉಕ್ಕುತ್ತಿರುವ ಜಲ. ಇಡೀ ಪರಿಸರವೇ ಎಂಥ ತೇವಮಯವಾಗಿತ್ತೆಂದರೆ ಮನೆಯೊಳಗಿನ ಹೊಲಸು, ರೀಪು ಪಿಕಾಸುಗಳಿಂದೆಲ್ಲ ಅಣಬೆಗಳು ಹುಟ್ಟತೊಡಗಿದವು. ಹಕ್ಕಿಗಳು ಹೊರಗೆ ಹೊರಡಲಾರದೆ ಮರದಲ್ಲೇ ಕುಳಿತು ಕುಗುರಿ ಕುಗುರಿ ಕೊನೆಗೆ ಪ್ರಜ್ಞೆ ತಪ್ಪಿ ಗಿಡಗಳ ಅಡಿ ತೊಯ್ದು ಸತ್ತು ಬಿದ್ದಿದ್ದವು. ದೊಡ್ಡ ಮನುಷ್ಯರು ಮೈ ಬೆಚ್ಚಗಿರಿಸಿಕೊಳ್ಳಲು ಬ್ರಾಂಡಿ ಕುಡಿದರೆ ಹರಿಜನರ ಹೆಂಗಸರು ಹಸಿ ಮೆಣಸಿನಕಾಯಿ ತುಂಡು ಮಾಡಿ ನಾಲಿಗೆ ಅಡಿ ಇಟ್ಟುಕೊಂಡು ನಾಟಿ ಕೆಲಸಕ್ಕೆ ಹೋಗುತ್ತಿದ್ದರು. ಚಳಿ ಬಂದು ಗಡಗಡ ನಡುಗುತ್ತಾ ಉಡರು ಹಿಡಿದ ದನಗಳಿಗೆ ಬೆನ್ನಿಗೆ ಎಷ್ಟು ಬಿಸಿ ಬೂದಿ ಹಾಕಿ ತಿಕ್ಕಿದರೂ ಚಳಿ ಬಿಡದೆ ಸುಮಾರು ದನಗಳು ಸತ್ತೇ ಹೋದವು. ಇಂಥ ಮಾರ್ತಾಂಡ ಮಳೆಯಲ್ಲೂ ಒಂದಷ್ಟು ಜನ ದೊಣ್ಣೆ ಹಿಡಿದುಕೊಂಡು ಹೋಗುತ್ತಿದ್ದರು. ಎಲ್ಲಿಗೆ ಎಂದು ಕೇಳಿದ್ದಕ್ಕೆ 'ಹಳ್ಳದ ನೀರು ಗದ್ದೆಗೆ ನುಗ್ಗಿದೆಯಂತೆ, ಮಾನು

ಹತ್ತಿರವೆ' ಎಂದು ಹೊರಟಿದ್ದರು. ಹೇಮಾವತಿ ನದಿ ಸಮುದ್ರದಂತೆ ಕಾಣುತ್ತಿತ್ತು. ಉಕ್ಕುತ್ತಿದ್ದ ಹೊಳೆ ಗದ್ದೆ ಕೂಗಿನ ಉದ್ದಗಲಕ್ಕೂ ಒದ್ದು ನಿಂತಿತ್ತು.

ಪಾಪಣ್ಣ ಮಾತ್ರ 'ಬಿದ್ದ ನೀರೆಲ್ಲಾ ಎತ್ತಲಾಗಿ ಹೋಯ್ತೋ ಏನೋ? ನನ್ನ ಗದ್ದೆಗಂತೂ ನೀರೇ ಆಗಲಿಲ್ಲ' ಎಂದು ಹಳೇ ರಾಗ ಹೇಳಿದ. ನನಗಂತೂ ಅವನ ಮಾತು ಕೇಳಿ ರೇಗಿ ಹೋಯ್ತು. 'ಇಂಥಾ ಮಳೆಗೂ ನೀರಾಗದಿದ್ದರೆ ಅದೇನು ಗದ್ದೆ ನಿನ್ನದು ನೋಡೋಣ ನಡಿ' ಅಂದೆ. ಅವನೂ ದೊಣ್ಣೆ ಹಿಡಿದು ಮಾನು ಹಿಡಿಯುವವರೊಡನೆ ಹೊರಟಿದ್ದ. 'ಬನ್ನಿ, ಹೋಗುವ, ದಾರಿಯಲ್ಲೇ ಇದೆ ತೋರಿಸುತ್ತೇನೆ,' ಎಂದು ನನ್ನನ್ನು ಕರೆದುಕೊಂಡು ಹೊರಟ. ನಮ್ಮ ಮನೆ ಅಂಗಳದಲ್ಲೆಲ್ಲಾ ಜಲ ಹೊರಟು ಹರಿಯುತ್ತಿರಬೇಕಾದರೆ ಇವನಿಗೆ ಯಾಕೆ ಗದ್ದೆಗೆ ನೀರಾಗುತ್ತಿಲ್ಲ ನೋಡೇ ಬಿಡಬೇಕೆಂದು ಹೊರಟಿದ್ದೆ.

ಹೊಳೆಗೆ ಹೋಗುವ ಹಾದಿಯಲ್ಲಿ ಗದ್ದೆ ಕೋಗುಗಳನ್ನು ದಾಟಿ ಉರವಣಿಸಿ ಹರಿಯುತ್ತಿದ್ದ ಹಳ್ಳಗಳಲ್ಲೆಲ್ಲಾ ಜಾರಿ ಬಿದ್ದು, ಪ್ಯಾಂಟೆಲ್ಲಾ ಕೆಸರು ಮಾಡಿಕೊಂಡು ಮೊಣಕಾಲುದ್ದ ಕೆಸರಲ್ಲಿ ಚಪ್ಪಲಿ ಹುಗಿದುಹೋಗಿ ಹೇಗೋ ಬರಿಗಾಲನ್ನು ಹೊರಗೆಳೆದುಕೊಂಡು ಜೇನು ಜೈಲು ಗುಡ್ಡ ಹತ್ತಿದೆವು. ಬಹುಶಃ ಗುಡ್ಡದ ಆ ಕಡೆ ಪಾಪಣ್ಣನ ಗದ್ದೆ ಇರಬೇಕೆಂದು ನನ್ನ ಊಹೆ.

ಗುಡ್ಡದ ನೆತ್ತಿಯ ಮೇಲೆ ಒಂದಷ್ಟಗಲ ಬೈಲು ಇತ್ತು. ಸುತ್ತ ಅಂಚು ಕಟ್ಟಿದಂತೆ ತೆವರಿಗಳಿದ್ದವು. ಗುಡ್ಡದ ನೆತ್ತಿ ಹತ್ತಿದ ಮೇಲೆ ಪಾಪಣ್ಣ "ನೋಡಿ ಇದೇ ನನ್ನ ಗದ್ದೆ. ನೀವೇ ಹೇಳಿ ಇಲ್ಲಿ ನೀರು ಆಗಿದೆಯ? ಕೆಸರು ಮಾಡಿ ಗದ್ದೆ ನಾಟಿ ಮಾಡಬಹುದ?' ಎಂದ. ಗುಡ್ಡದ ತಲೆಯ ಮೇಲಿದ್ದ ಪಾಪಣ್ಣನ ಗದ್ದೆಗಳಿಗೆ ನೀರು ಒದಗುವುದು ಎಂದೆಂದೂ ಸಾಧ್ಯವಿರಲಿಲ್ಲ. 'ಇಲ್ಲಿ ಗದ್ದೆ ಮಾಡಿದವರು ಮೊದಲು ಮಳೆ ಕಾಣರುರು. ತಗ್ಗಿನ ಪ್ರದೇಶವೋ ಅಥವಾ ಮೇಲಿನಿಂದ ಯಾವುದಾದರೂ ಹಳ್ಳದ ನೀರೋ ಒದಗಿದ್ದರೆ ಅಲ್ಲಿ ಗದ್ದೆ ಮಾಡಬಹುದಿತ್ತೇ ವಿನಃ ಮಳೆಯ ಆಸರೆಯಲ್ಲಿ ಅಲ್ಲಿ ಗದ್ದೆ ಬೆಳೆಯಲು ಎಂದೂ ಸಾಧ್ಯವಿರಲಿಲ್ಲ. ದಿನಕ್ಕೆ ಹದಿನಾರು ಇಂಚು ಮಳೆ ಇರಲಿ, ಸಾಕ್ಷಾತ್ ಜಲ ಪ್ರಳಯವೇ ಆದರೂ ಸಹ ಪಾಪಣ್ಣನ ಗದ್ದೆಗಳಿಗೆ ಭತ್ತ ನೆಡುವಷ್ಟು ನೀರಾಗುತ್ತಿರಲಿಲ್ಲ' ಎಂದು 'ಸದಾ

ಬಯ್ಯುತ್ತಿಯಲ್ಲ. ಅನ್ನ ತಿನ್ನುವ ಜನಸಾಮಾನ್ಯರೆಲ್ಲರಿಗೂ ಹೊಳೆಯುವ ವಿಷಯ ನಿನಗೆ ಹೇಗೆ ಗೊತ್ತಾಗುತ್ತಿಲ್ಲ' ಎಂದು ಬಾಯಿಗೆ ಬಂದಂತೆ ಬಯ್ದೆ. ಪಾಪಣ್ಣ ಮಾಡಿದ್ದಲ್ಲವಂತೆ ಗದ್ದೆಗಳು. ಅವನಿಗೆ ಪಿತ್ರಾರ್ಜಿತವಾಗಿ ಬಂದುವಂತೆ. ಹಿಂದಿನ ಕಾಲದಲ್ಲಿ ಇಲ್ಲೆಲ್ಲಾ ಜಲ ಏಳುವಂತೆ ಮಳೆಯಾಗುತ್ತಿದ್ದುದರಿಂದಲೇ ಇಲ್ಲಿ ಗದ್ದೆ ಮಾಡಿದ್ದು. ಇಲ್ಲದಿದ್ದರೆ ನಮ್ಮ ಪೂರ್ವಿಕರು ಇಲ್ಯಾಕೆ ಗದ್ದೆ ಮಾಡುತ್ತಿದ್ದರು? ಎಂದು ಪಾಪಣ್ಣ ನನ್ನೆದುರು ಗೊಣಗಿದ.

'ಹಿಂದಿನ ಕಾಲದಲ್ಲಿಯಾದರೂ ಅಲ್ಲಿಗೆಲ್ಲಾ ಕೆಸರು ಮಾಡುವಷ್ಟು ಜಲ ಏಳುತ್ತಿತ್ತೇ' ಎಂದು ನನಗಂತೂ ಅನುಮಾನ. ಆದರೂ ಅಲ್ಲಿ ಗದ್ದೆ ಯಾರು ಮಾಡಿದರು? ಯಾಕೆ ಮಾಡಿದರು ಎನ್ನುವುದು ನನಗರ್ಥವಾಗದ ಸಂಗತಿ. ಬಹುಶಃ ಬೇರೇನನ್ನೋ ಬೆಳೆಯಲು ಮಾಡಿದ ನೆಲವನ್ನೇ ಸೋಮಾರಿ ಪಾಪಣ್ಣ ಗದ್ದೆ ಎಂದು ಕರೆದು ಅಲ್ಲಿಗೆ ನೀರಾಗುವವರೆಗೂ ಬೇಸಾಯದ ತೊಂದರೆ ತಗೊಳ್ಳದೆ ಓಡಾಡುತ್ತಿರಬಹುದು. ಮತ್ತೆ ಯಾರೋ ಒಬ್ಬರು ಹೇಳಿದರು, ಗೋರೂರು ಅಣೆಕಟ್ಟು ಆದನಂತರ ಈ ಜಾಗಗಳೆಲ್ಲಾ ಮುಳುಗಡೆಯಾಗುತ್ತೆ, ಆಗ ತನ್ನ ನೆಲವೂ ಮುಳುಗಡೆಯಾಗುತ್ತೆ, ಅದನ್ನು ಗದ್ದೆ ಎಂದು ಕರೆದು ಸರ್ಕಾರದಿಂದ ಹಣ ಪಡೆಯಲೆಂದು ಪಾಪಣ್ಣನ ಅಪ್ಪ ಅದನ್ನು ಗದ್ದೆ ಹಾಗೆ ಕಾಣುವಂತೆ ಮಾಡಿದ ಎಂದು. ಒಟ್ಟಿನಲ್ಲಿ ಈ ಗುಡ್ಡದ ನೆತ್ತಿಯ ಗದ್ದೆ ಕಟ್ಟಿಕೊಂಡ ಪಾಪಣ್ಣ ಮಳೆಗೆ ಶಾಪ ಹಾಕುತ್ತಾ ಓಡಾಡುವುದನ್ನು ಇಂದಿಗೂ ಬಿಟ್ಟಿಲ್ಲ.

ಪಾಪಣ್ಣ ನನಗೆ ಅವನ ಗದ್ದೆ ತೋರಿಸಿದವನೇ ಮತ್ತೆ ಲಗುಬಗೆಯಿಂದ ಹೊಳೆಕಡೆಗೆ ಓಡಿದ. ಉಕ್ಕಿದ ಹೊಳೆ ನೀರಿನಲ್ಲಿ ಮೀನು ಹಿಡಿಯಲು ಹೊರಟ ಅವರ ಗ್ಯಾಂಗಿಗೆ ಪಾಪಣ್ಣನ ಅಣ್ಣ ಮುದ್ದಪ್ಪನೇ ಲೀಡರು. ಮುದ್ದ ಎಂದು ಕರೆಯುತ್ತಿದ್ದ ಈತನನ್ನು ಜನ ಬೊದ್ದ ಎಂದೇ ಕರೆಯುತ್ತಿದ್ದರು. ನಮ್ಮೂರಿಗೆ ಬರುವ ಟೋಪಿ ಹಾಕುವವರಿಗೆ, ಕಳ್ಳರಿಗೆ, ಖದೀಮರಿಗೆ ಗಿಲೀಟು ಮಾಡುವವರಿಗೆ ಇವನು ಖಾಯಂ ಗಿರಾಕಿ. ಪ್ರತಿ ವರ್ಷವೂ ನೋಟು ದ್ವಿಗುಣಗೊಳಿಸುವವರಿಗೆ ಇವನು ಸಿಕ್ಕಿಕೊಂಡು ಕೂಡಿಟ್ಟ ಹಣ ಕಳೆದುಕೊಳ್ಳುವುದು ಇದ್ದೇ ಇದೆ. ಕೊಂಚ ದುಡ್ಡು ಸಿಕ್ಕಿದರೂ ಇವನು ನೋಟು ದ್ವಿಗುಣಗೊಳಿಸುವವರು ಯಾರಾದರೂ ಇದ್ದಾರೆಯೇ ಎಂದು ಎಲ್ಲಾ ಸಂತೆಗಳನ್ನು ಹುಡುಕಿಕೊಂಡು

ಹೊರಡುತ್ತಾನೆ. ಒಂದು ಸಾರಿ ದುಡ್ಡು ಕಳೆದುಕೊಂಡಾಗ ನನಗೆ ಸಿಕ್ಕಿದ. 'ಪ್ರತಿಸಾರಿಯೂ ಇವರು ಮೋಸ ಮಾಡುತ್ತಾರೆ ಎಂದು ಗೊತ್ತಿದ್ದೂ ಯಾಕೆ ದುಡ್ಡು ಕಳೆದುಕೊಳ್ಳುತ್ತೀಯೋ' ಎಂದು ಕೇಳಿದೆ. ಆದರೆ ಆ ಖದೀಮರು ಹೊಸ ತಂತ್ರ ಹೂಡಿ ಇವನನ್ನು ಮರಳು ಮಾಡುತ್ತಾರೆಂದು ನನಗೆ ಗೊತ್ತಿರಲಿಲ್ಲ.

ಈ ಸಾರಿ ಇವರು ಅಸಲಿ ಅಸಾಮಿಗಳೋ, ನಕಲಿ ಅಸಾಮಿಗಳೋ ತಿಳಿದ ನಂತರವೇ ಮಡ್ಡು ಕೊಡಬೇಕೆಂದು ಮೊದ್ದ ಎಚ್ಚರ ವಹಿಸಿದನಂತೆ. ಆದರೆ ಮೊದ್ದ ದುಡ್ಡು ಕಳೆದುಕೊಂಡ ಹಳೆ ಕತೆಗಳನ್ನೆಲ್ಲಾ ಕೇಳಿದ ಆ ಖದೀಮರು ತಮ್ಮ ದಂಧೆಗೆ ಈ ರೀತಿ ನಕಲಿ ಅಸಾಮಿಗಳೆಲ್ಲಾ ನುಗ್ಗಿ ತಮ್ಮ ಕೆಲಸಕ್ಕೆ ಕಳಂಕ ತರುತ್ತಿರುವುದು ನಿಜವೆಂದು ಒಪ್ಪಿಕೊಂಡರಂತೆ. ಅಂಥವರನೇಕರು ಪೋಲಿಸರ ಕೈಗೆ ಸಿಕ್ಕಿ ಬೀಳುತ್ತಿರುವುದನ್ನು ಅವರೂ ಓದಿದ್ದಾರಂತೆ. ಆದರೆ ಅವರು ಮಾತ್ರ ಆ ರೀತಿ ನಕಲಿ ವ್ಯವಹಾರದವರಲ್ಲವಂತೆ. ಅವರು ಖಾತ್ರಿಯಾಗಿ ನೋಟು ದ್ವಿಗುಣಗೊಳಿಸಿಕೊಡುವುದರಿಂದಲೇ ಅವರ ಮೇಲೆ ಈವರೆಗೂ ಯಾವ ಪುಕಾರು ಇಲ್ಲ. ಪೋಲೀಸರಿಗೂ ಅವರ ಮೇಲೆ ಯಾರೂ ದೂರು ಕೊಟ್ಟಿಲ್ಲ ಎಂದು ಮುದ್ದಣ್ಣನಿಗೆ ಮರುಳು ಮಾಡಿ ಮುದ್ದಣ್ಣನ ಬಳಿ ಇದ್ದ ಇಪ್ಪತ್ತು ರೂಪಾಯಿಯನ್ನು ತೆಗೆದುಕೊಂಡು 'ನಾಳೆ ಇದೇ ಹೊತ್ತಿನಲ್ಲಿ ಇದೇ ಜಾಗಕ್ಕೆ ಬಾ; ಎಂದು ಹೇಳಿಕಳಿಸಿ ಅವರು ಜಾಗ ಖಾಲಿ ಮಾಡಿದರಂತೆ. ಮೊದ್ದ ಒಂದಲ್ಲ ಒಂದು ದಿನ ನಿಜವಾಗಿಯೂ ತಾನು ಒಬ್ಬ ನೋಟು ದ್ವಿಗುಣವಿದ್ಯಾಪಾರಂಗತನನ್ನು ಸಂಧಿಸುವುದಾಗಿ ನಂಬಿದ್ದಾನೆ. ಆದ್ದರಿಂದ ಎಷ್ಟು ಸಾರಿ ಮೋಸ ಹೋದರೂ ಎದೆಗುಂದದೆ ದುಡ್ಡು ಸಿಕ್ಕ ಕೂಡಲೇ ಆತ ಮರಳಿ ಯತ್ನಿಸುವುದನ್ನು ಬಿಡುವುದೇ ಇಲ್ಲ. ನಮ್ಮೂರಿನ ಅನೇಕ ಶ್ರೀಮಂತರು ಇಂಥವರಿಂದಲೇ ಶ್ರೀಮಂತರಾಗಿರುವುದೆಂದು ಈತನ ನಂಬಿಕೆ.

ಮುದ್ದ ಮೀನು ಹಿಡಿಯಲು ಹೇಮಾವತಿ ಹೊಳೆಗೆ ಬಿದ್ದಿರುವುದಕ್ಕೂ ಇಂಥದೇ ಒಂದು ನಂಬಿಕೆ ಕಾರಣ. ಮುದ್ದ ಗಾಳಕ್ಕೆ ಚಿಕ್ಕ ಮೀನೊಂದನ್ನು ಚುಚ್ಚಿ ಹೊಳೆಗೆ ಎಸೆದಿದ್ದನಂತೆ. ಆ ಚಿಕ್ಕ ಮೀನನ್ನು ಇನ್ನೊಂದು ದೊಡ್ಡ ಮೀನು ನುಂಗಿತು. ಯಾರೋ ಹೇಳಿದರಂತೆ. ಈ ಮೀನನ್ನು ಹಾಕಿ ಗಾಳ ಎಸೆ, ಇನ್ನೂ ದೊಡ್ಡ ಮೀನು ನುಂಗುತ್ತೆ,

ಎಂದು. ಈ ರೀತಿಯ ತರ್ಕ ಮುದ್ದನಿಗೆ ಒಪ್ಪಿಗೆಯಾದ್ದರಿಂದ ಮುದ್ದ ಮಳೆಯಲ್ಲೇ ಆ ಸಿಕ್ಕಿದ ದೊಡ್ಡ ಮೀನನ್ನು ಗಾಳಕ್ಕೆ ಹಾಕಿ ಎಸೆದನನು ದಾರ ಹಿಡಿದುಕೊಂಡು ಹೊಳೆದಂಡೆಯಲ್ಲಿ ಮಳೆಗೆ ಲೆಕ್ಕಿಸದೆ ದಿನಗಟ್ಟಲೆ ಕುಳಿತಿದ್ದನಂತೆ. ಆಗೊಮ್ಮೆ ದಾರ ಬಲವಾಗಿ ಜಗ್ಗಿದಂತಾಗಿ ಗಾಳ ತುಂಡಾಗಿ ಹೋಯ್ತು, ದಾರ ಮೀನು ಎರಡನ್ನೂ ಕಳೆದುಕೊಂಡ ಮುದ್ದ ಬುದ್ದಿ ಕಲಿತುಕೊಳ್ಳುವುದರ ಬದಲು ಆಜೀವಪರ್ಯಂತ ಭ್ರಮೆಗೆ ಸಿಕ್ಕಿಕೊಂಡ.

ಬೇಸಿಗೆಯಲ್ಲಿ ಮೊಳಕಾಲು ಸಹ ಮುಳುಗದಷ್ಟು ತೆಳ್ಳಗೆ ಹರಿಯುವ ಹೇಮಾವತಿ ನದಿಯಲ್ಲಿ ತಿಮಿಂಗಿಲದಷ್ಟು ದೊಡ್ಡ ಮೀನೊಂದಿದೆ. ಎಂಬ ಭ್ರಮೆಯಲ್ಲಿ ಬಾವಿ ಹಗ್ಗದಷ್ಟು ಬಲವಾದ ದಾರಕ್ಕೆ ಕೊಕ್ಕೆಯಂಥ ದೊಡ್ಡ ಗಾಳ ಕಟ್ಟಿಕೊಂಡು ಪ್ರತಿ ಮಳೆಗಾಲದಲ್ಲೂ ನದಿದಂಡೆಯಲ್ಲಿ ಕುಳಿತಿರುತ್ತಾನೆ. ದಾರಿಯಲ್ಲಿ ಹೋಗುವವರು ಬರುವವರಿಗೆಲ್ಲಾ ತನಗೆ ಹಿಂದೊಮ್ಮೆ ದಾರ ಎಳೆದು ತುಂಡು ಮಾಡಿದ ಭಯಂಕರ ಮೀನಿನ ಕತೆ ಹೇಳುತ್ತಾನೆ. ಅವರೂ ಈ ಹೊಳೆಯಲ್ಲಿ ತಾವು ನೋಡಿದ ದೊಡ್ಡ ದೊಡ್ಡ ಮೀನುಗಳ ಕತೆಗಳನ್ನು ಒಂದಕ್ಕೆರಡು ಮಾಡಿ ಹೇಳಿ ಮುದ್ದನಿಗೆ ರೋಮಾಂಚನವನ್ನುಂಟು ಮಾಡುತ್ತಾರೆ.

ಬರಿಯ ಕತೆ ಹೇಳಿ ದಾರಿಹೋಕರು ತೊಲಗಿದ್ದರೆ ಮುದ್ದನಿಗೆ ತೊಂದರೆ ಇರಲಿಲ್ಲ. ಆದರೆ ಅವರು ಮುದ್ದನ ದಾರವನ್ನು ಎಂದೋ ಎಳೆದ ಅದೃಶ್ಯ ಮೀನಿಗೆ ಇಷ್ಟವಾಗಬಹುದಾದ ಅನೇಕ ವಿಚಿತ್ರ ತಿಂಡಿಗಳನ್ನು ಗಾಳಕ್ಕೆ ಹಾಕಲು ಅವನಿಗೆ ಸಲಹೆ ಮಾಡುತ್ತಾರೆ. ಕೆಲವರು ಹೋಟಲಿನಲ್ಲಿ ಸಿಗುವ ಬಾಳೇಕಾಯಿ ಬೋಂಡ ಹಾಕಲು ಹೇಳುತ್ತಾರೆ. ಕೆಲವರು ತುಳಸೀ ಎಲೆಯನ್ನೂ ರಾಗಿ ಹಿಟ್ಟನ್ನೂ ಕಲಸಿ ಉಂಡೆ ಮಾಡಿ ಹಾಕೆನ್ನುತ್ತಾರೆ. ಕೆಲವರು ಯಾವ ಯಾವುದೋ ವಿಚಿತ್ರ ಕ್ರಿಮಿಕೀಟಗಳನ್ನು ಹೇಳುತ್ತಾರೆ. ಕೆಲವರು ಬ್ರೆಡ್ಡು, ಕೆಲವರು ಬನ್ನು, ಕೆಲವರು ಇಡ್ಲಿ ಮತ್ತು ಮೈದಾ ಮಿಕ್ಸ್ ಮಾಡು ಎಂದು ಹೀಗೆ ನೂರಾರು ತರ, ಇದನ್ನೆಲ್ಲಾ ಕೇಳಿ ಕೇಳಿ ಮುದ್ದನ ತಲೆ ಎಷ್ಟು ಕೆಟ್ಟಿದೆ ಎಂದರೆ ಅವನು ತನ್ನ ಹೆಂಡತಿ ಮಕ್ಕಳನ್ನು ಬಿಟ್ಟು ಮಿಕ್ಕುದನ್ನೆಲ್ಲಾ ಗಾಳಕ್ಕೆ ಸಿಕ್ಕಿಸಿ ಹೊಳೆಗೆ ಎಸೆದಿದ್ದಾನೆ. ಇವನ ಅಸಾಧ್ಯ ಬುದ್ದಿ ದೆಸೆಯಿಂದ ಮನೆ ಎಲ್ಲಾ ಪಾಪರ್ ಆಗಿ ಹೆಂಡತಿ ಮಕ್ಕಳು ತಾವಾಗಿಯೇ ಹೊಳೆಗೆ ಹಾರಬೇಕಾದ ಪರಿಸ್ಥಿತಿ ಹತ್ತಿರಾಗುತ್ತಿದೆ.

ಮುದ್ದ 'ಹೇಮಾವತಿ ಹೊಳೆಯಲ್ಲಿ ಪ್ರವಾಹ ಈ ಸಾರಿ ಸಾಲಲಿಲ್ಲ. ಅದಕ್ಕೆ ದೊಡ್ಡ ಮೀನುಗಳು ಕೆಳಗಡೆ ಅಣೆಕಟ್ಟೆಯಿಂದ ಮೇಲೆ ಬರುತ್ತಿಲ್ಲ' ಎಂದು ಹೇಳುತ್ತಾನೆ. ತಮ್ಮ ಗುಡ್ಡದ ನೆತ್ತಿನ ಮೇಲೆ ಗದ್ದೆ ಮಾಡಿ ನೀರಾಗಲಿಲ್ಲ ಎಂದು ಸೋಮಾರಿಯಾಗಿ ತಿರುಗಿದರೆ, ಅಣ್ಣ ನದಿಯಲ್ಲಿ ಪ್ರವಾಹ ಸಾಲಲಿಲ್ಲ ಎಂದು ದೊಡ್ಡ ಮೀನಿಗಾಗಿ ಕಾಯುತ್ತಾನೆ. ನನಗನ್ನಿಸುತ್ತೆ ಈ ಇಬ್ಬರಿಗೂ ವಾಸ್ತವ ಎಷ್ಟೊಂದು ಕಠೋರವಾಗಿದೆ ಎಂದರೆ ಅದನ್ನು ರಿಪೇರಿ ಮಾಡಲು ಅಸಾಧ್ಯವಾಗಿ ಇಬ್ಬರೂ ಹಗಲುಗನಸಿನ ಭ್ರಮೆಯಲ್ಲಿ ಮುಳುಗಿದ್ದಾರೆಂದು. ಮುದ್ದನಿಗೆ ಕುಳಿತುಕೊಂಡು ಕನಸು ಕಾಣಲು ಒಂದು ಕಾರಣಬೇಕಷ್ಟೆ. ಅದಕ್ಕೇ ನೀರಿನ ಅದೃಶ್ಯ ವಲಯದೊಳಕ್ಕೆ ಗಾಳ ಎಸೆದು ದಾರ ಹಿಡಿದುಕೊಂಡು ದಂಡೆಯ ಮೇಲೆ ಕುಳಿತುಕೊಳ್ಳುತ್ತಾನೆ. ತಕ್ಷಣ ಅವನ ತಲೆಯೊಳಗೆ ಸುಂದರ ಕನಸುಗಳ ಸಾಲು ಮೆರವಣಿಗೆ ಶುರುವಾಗುತ್ತೆ. ಅವನು ನೋಟು ದ್ವಿಗುಣಗೊಳಿಸುವವರನ್ನು ಹುಡುಕಿಕೊಂಡು ತಿರುಗುವುದೂ ಇದಕ್ಕೇ. ಒಂದು ಸಾರಿ ಮುದ್ದ ಗಾಳಕ್ಕೆ ಚುಚ್ಚಿ ಎಸೆದ ಮೀನು ಹೊಳೆಯಲ್ಲಿ ಇನ್ನೂ ಮುಳುಗದೇ ತೇಲುತ್ತಿರುವಾಗ ಕೊಕ್ಕರೆ ಕಚ್ಚಿಕೊಂಡು ದಾರದ ಸಮೇತ ಪಕ್ಕದ ಮರದ ಮೇಲೆ ಇಟ್ಟಿತ್ತು. ದಾರಿಹೋಕರು ಅದನ್ನು ನೋಡಿ ಮುದ್ದನಿಗೆ ನೀನು ಎಸೆದ ದಾರ ಎದುರು ದಡದ ಮರದ ಮೇಲೆ ಸಿಕ್ಕಿಕೊಂಡಿದೆ ಎಂದು ಎಚ್ಚರಿಸಿದಾಗ 'ಇರಲಿ ಬಿಡಿ, ಈ ಕಡೆ ತುದಿ ನನ್ನ ಕೈಯಲ್ಲೇ ಇದೆಯಲ್ಲ', ಎಂದು ಗಮನಿಸಿಯೂ ಗಮನಿಸದವನಂತೆ ಸುಮ್ಮನೆ ಕುಳಿತೇ ಇದ್ದನಂತೆ.

ಒಂದು ಮಳೆಗಾಲದಲ್ಲಿ ಪಾಪಣ್ಣ, ಮುದ್ದಪ್ಪ ಇಬ್ಬರೂ ಒಂದು ಗುದ್ದಲಿ ಹಿಡಿದು ಹೊರಟಿದ್ದನ್ನು ನೋಡಿದೆ. ಓಹೋ ಕೊನೆಗೂ ಇವರಿಗೆ ಬುದ್ದಿ ಬಂತು. ಬೇಸಾಯಕ್ಕೆ ಹೊರಟಿದ್ದಾರೆ ಎಂದು ಅನ್ನಿಸಿತು. ಅವರನ್ನು 'ಇದೇನು ಗುದ್ದಲಿ ಹಿಡಿದು ಹೊರಟಿದ್ದೀರಲ್ಲಾ?' ಎಂದು ಕೇಳಿದಾಗ ಸರಿಯಾಗಿ ಉತ್ತರಿಸದೆ ತಮ್ಮ ಜೊತೆ ಬನ್ನಿ ತಮಾಷೆ ತೋರಿಸುತ್ತೇವೆ ಎಂದರು.

ಪಾಪಣ್ಣನ ಗದ್ದೆ ಬಳಿ ಕಾಡು ಇಲಿಗಳ ದೊಡ್ಡ ಬಿಲ ಒಂದಿತ್ತು. ಅಣ್ಣ ತಮ್ಮ ಇಬ್ಬರೂ ಸೇರಿ ಗುಡ್ಡದ ಮೇಲಿಂದ ಬರುವ ಮಳೆ ನೀರಿಗೆ ಚಿಕ್ಕದೊಂದು ಕಾಲುವೆ ತೋಡಿ ಅದನ್ನು

ಇಲಿ ಬಿಲದ ಬಾಯಿಗೆ ಬಿಟ್ಟರು. ಮಳೆ ಬರುವಾಗ ಗುಡ್ಡದಿಂದ ಇಳಿಯುವ ನೀರು ಕಾಲುವೆಯಲ್ಲಿ ಸೇರಿ ಇಲಿಯ ಬಿಲದೊಳಗೆ ನುಗ್ಗುತ್ತದೆ. ಬಿಲ ನೀರು ತುಂಬಿಕೊಂಡಾಗ ಒದ್ದೆ ಮುದ್ದೆಯಾದ ಇಲಿಗಳು ಅದರೊಳಗಿಂದ ಒಂದೊಂದಾಗಿ ಹೊರಬರುತ್ತವಂತೆ. ಆ ಕಾಡಿನ ಇಲಿಗಳನ್ನು ಸಾಯಿಸಿ ಚೀಲಕ್ಕೆ ತುಂಬಿಕೊಂಡು ಅಣ್ಣ ತಮ್ಮ ಇಬ್ಬರೂ ಕೊನೆಗೆ ಪಾಲು ಮಾಡಿಕೊಳ್ಳುತ್ತಿದ್ದರು. ಒಂದೊಂದು ಬಿಲದಲ್ಲಿ ನಲವತ್ತು ಐವತ್ತು ಇಲಿಗಳು ಸೇರಿಕೊಂಡಿರುತ್ತವೆಂದು ಹೇಳಿದರು. ಸುಳ್ಳೋ ನಿಜವೋ ಗೊತ್ತಿಲ್ಲ. ನಾನು ಅವರೊಡನೆ ಹೋದ ದಿನವಂತೂ ಅಂಥ ಜೋರು ಮಳೆಯೇ ಬರಲಿಲ್ಲ. ಹಾಗಾಗಿ ಗುಡ್ಡದಿಂದ ಇಳಿಯುವ ನೀರು ಎಷ್ಟು ಹೋದರೂ ಬಿಲ ಕುಡಿಯತೊಡಗಿತು. ಅಣ್ಣ ತಮ್ಮ ಇಬ್ಬರೂ ಮತ್ತೆ ಯಥಾಪ್ರಕಾರ ಮಳೆಗೆ ಶಾಪಹಾಕುತ್ತಾ ಜೋರು ಮಳೆ ಬರುವುದನ್ನೇ ಕಾಯುತ್ತ ಅಲ್ಲೇ ಕುಳಿತರು. ಮನುಷ್ಯ ಮಾತ್ರರಿಗೆ ಮೀರಿದ ಇವರ ಆಶಾವಾದ ಮತ್ತು ತಾಳ್ಮೆಗಳನ್ನು ನೋಡಿ ಆಶ್ಚರ್ಯಪಡುತ್ತಾ ನಾನು ಅರ್ಧಕ್ಕೇ ಎದ್ದು ಬಂದೆ.

ಈ ಮಳೆಗಾಲದ ನೆನಪುಗಳನ್ನೂ ಹೀಗೆ ಹೇಳುತ್ತಾ ಹೋದರೆ ಅದೊಂದು ದೊಡ್ಡ ಕಾದಂಬರಿಯೇ ಆದೀತು. ಏಕೆಂದರೆ ನಮ್ಮೂರಲ್ಲಿ ಮಳೆ ಹಿಡಿಯಿತೆಂದರೆ ಸುರಿಯುತ್ತಲೇ ಇರುತ್ತದೆ. ಅದರ ಅಜಸ್ರ ಧಾರೆಯಲ್ಲಿ ಉಕ್ಕುವ ನೆನಪುಗಳಿಗೆ ಕೊನೆ ಎಲ್ಲಿ?

* * *

**ಕೆ.ಪಿ. ಪೂರ್ಣಚಂದ್ರತೇಜಸ್ವಿ** : ನವೋದಯದ ನಂತರ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಚಿಂತನಶೀಲ, ವಿಚಾರವಂತ, ವೈಜ್ಞಾನಿಕ ಬರಹಗಾರರೆಂದು ಗುರುತಿಸಲ್ಪಟ್ಟವರು. ಇವರು 8.9.1938 ರಂದು ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯಲ್ಲಿ ಜನಿಸಿದರು. ತಂದೆ–ಕೆ.ವಿ.ಪುಟ್ಟಪ್ಪ ತಾಯಿ–ಹೇಮಾವತಮ್ಮ. ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡದಲ್ಲಿ ಎಂ.ಎ ಪದವಿ ಪಡೆದ ಇವರು ಕೃಷಿಕ್ಷೇತ್ರವನ್ನು ಆಯ್ಕೆ ಮಾಡಿಕೊಂಡರು.

ತೇಜಸ್ವಿಯವರು ತಮ್ಮ ಬರವಣಿಗೆಯನ್ನು– ಕವಿತೆ, ಕಾದಂಬರಿ, ನಾಟಕ, ಕಥೆ, ವೈಜ್ಞಾನಿಕ ಬರಹ ಹೀಗೆ ನಾನಾ ಪ್ರಕಾರಗಳಲ್ಲಿ ಅಬಿವ್ಯಕ್ತಿಸಿದ್ದಾರೆ. 'ಬೃಹನ್ನಳೆ ಸೋಮುವಿನ

ಸ್ವಗತಲಹರಿ ಮತ್ತು ಇತರ ಕಥೆಗಳು ಇವರ ಕವನ ಸಂಗ್ರಹ, ಹುಲಿಯೂರಿನ ಸರಹದ್ದು (1962), ಮತ್ತು ಅಬಚೂರಿನ ಪೋಸ್ಟಾಫೀಸು(1971), ಎರಡೂ ಕಥಾಸಂಕಲನಗಳು. ಯಮಳ ಪ್ರಶ್ನೆ(1964), ಇವರು ಬರೆದ ಏಕೈಕ(ಏಕಾಂತ) ನಾಟಕ, ವ್ಯಕ್ತಿ ವಿಶಿಷ್ಠ ಸಿದ್ಧಾಂತ (1964), ಇದು ಇವರ ವೈಚಾರಿಕ ಪ್ರಬಂಧಗಳ ಸಂಗ್ರಹ. ಸ್ವರೂಪ ಎಂಬ ನೀಳ್ಗತೆಯನ್ನೂ ನಿಗೂಡಮನುಷ್ಯರು(1976) ಎಂಬ ದೀರ್ಘಕಥೆಯನ್ನೂ ಬರೆದಿದ್ದಾರೆ. ಇವರ ಪ್ರಸಿದ್ಧ ಕಾದಂಬರಿಗಳು ಕರ್ವಾಲೋ(1980), ಮತ್ತು ಚಿದಂಬರ ರಹಸ್ಯ(1985), ಜುಗಾರಿಕ್ರಾಸ್, ಪರಿಸರದ ಕಥೆಗಳು, ಅಲೆಮಾರಿಯ ಅಂಡಮಾನ್, ಫ್ಲೈಯಿಂಗ್‌ಸಾಸರ್ಸ್, ಬರ್ಡ್ಸ್ ಆಫ್ ಸೌತ್ ಇಂಡಿಯಾ,–ಇವರ ಕೆಲವು ಮಹತ್ವದ ಕೃತಿಗಳು.

ಇವರ ಕಥೆ ಅಬಚೂರಿನ ಪೋಸ್ಟಾಫೀಸು ಚಲನ ಚಿತ್ರವಾಗಿ 1973ರ ಅತ್ಯುತ್ತಮ ಪ್ರಾಂತೀಯ ಚಿತ್ರಪ್ರಶಸ್ತಿ ಪಡೆದಿದೆ. ತಬರನ ಕಥೆಗೆ 1986ರಲ್ಲಿ ಸ್ವರ್ಣಕಮಲ ಪ್ರಶಸ್ತಿ ಲಬಿಸಿದೆ. ಕುಬಿ ಮತ್ತು ಇಯಾಲ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ದೊರೆತಿದೆ. ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿಗಳನ್ನು ಗಳಿಸಿರುವ ಇವರು ಕನ್ನಡದ ಮಹತ್ವದ ಬರಹಗಾರರಲ್ಲಿ ಒಬ್ಬರಾಗಿದ್ದಾರೆ.

**ಪದಗಳ ಅರ್ಥ :** ವಾಕ್ಸು–ಮಾತು, ದೂಸರ–ಮತ್ತೊಂದು, ಇನ್ನೊಂದು.
ಸಿಲುಬು–ಕಡೆಯುವುದು, ತೀಡಿ–ಉಜ್ಜಿ, ಗುಡಾಣ–ಗಟ್ಟಿಯಾದ ದೊಡ್ಡ ಮಡಕೆ.

# 3. ಸ್ನೇಹಕ್ಕೆ ಯಾವ ಸರಹದ್ದು

**–ನೇಮಿಚಂದ್ರ**

ಮೊನ್ನೆ ಅಂಚೆಯಲ್ಲಿ ಒಂದು ಪುಸ್ತಕ ಬಂದಿತು. 'ಬಾಂಬ್ ವಿರೋಧೀ ಪಾಕಿಸ್ತಾನಿ ಕವಿತೆಗಳು'. ಸರಜೂ ಕಾಟ್ಕರ್ ಅನುವಾದಿಸಿದ ಪುಸ್ತಕ. ತೆರೆದೊಡನೆ ಕವಿತೆಗ್ಯಾವ ಸರಹದ್ದು?' ಎಂದು ಆರಂಭವಾದ ಪುಟದಲ್ಲಿ ಲೇಖಕರು ಒಂದು ಘಟನೆಯನ್ನು ವಿವರಿಸಿದ್ದರು. ಮ್ಯಾಂಚೆಸ್ಟರಿನಲ್ಲಿ ತಮ್ಮ ಮನೆಗೊಂದು ಫೋನ್ ಮಾಡಲು ಹುಚ್ಚರಂತೆ ಅಲೆದ ಘಟನೆಯದು. ಬೆಂಗಳೂರು ಬಿಟ್ಟು ನಾಲ್ಕು ದಿನಗಳಾದರೂ ಮನೆಗೆ ಫೋನ್ ಮಾಡಲು ಆಗಿರಲಿಲ್ಲ. ಫೋನ್ ಕಾರ್ಡಿಗೆ ಪರದಾಡುತ್ತಿರುವಾಗ ಎದುರಿಗೆ ಒಂದು ಅಂಗಡಿ ಕಂಡಿತ್ತು. ಒಳನುಗ್ಗಿ ನನ್ನಲ್ಲಿ ಕಾರ್ಡ್ ಇಲ್ಲ, ಹಣ ಕೊಡುತ್ತೇನೆ. ಭಾರತಕ್ಕೆ ಕನೆಕ್ಟ್ ಮಾಡಿ' ಕೇಳಿಕೊಂಡರು. ದುಗುಡ ತುಂಬಿದ ಇವರ ಮುಖವನ್ನು ಕಂಡ ಆ ಮಾಲೀಕ ತನ್ನ ಸ್ವಂತ ಕಾರ್ಡ್ ಉಪಯೋಗಿಸಿ ಬೆಳಗಾವಿಗೆ ಕನೆಕ್ಟ್ ಮಾಡಿದ. ಫೋನ್ ಸಂಭಾಷಣೆ ಮುಗಿದ ಅನಂತರ 'ಹಣವೆಷ್ಟು?' ಎಂದು ಕೇಳಿದರೆ ಆತ ತೆಗೆದು ಕೊಳ್ಳಲಿಲ್ಲ. ನಾನು ಪಾಕಿಸ್ತಾನದವ, 25 ವರ್ಷಗಳ ಹಿಂದೆ ಇಲ್ಲಿ ಬಂದು ವ್ಯಾಪಾರ ಆರಂಭಿಸಿದೆ. ನೀವು ನಮ್ಮ ಭಾಯಿಗಳು. ನಿಮ್ಮಿಂದ ಹಣವನ್ನು ಹೇಗೆ ಪಡೆಯಲಿ?' ಎಂದ ಆತನ ಮಾತುಗಳಿಗೆ ದಿಙ್ಮೂಢರಾದರೂ ಆತನ ಭಾವನೆಗಳ ಬಗ್ಗೆ ಖುಷಿಪಟ್ಟರು. ಅದು ಕೆಲವು ಪೌಂಡ್ಸ್ ಉಳಿಸಿದ ಖುಷಿಯಲ್ಲ. ಎರಡು ಮನಸ್ಸುಗಳು ಕೂಡಿದ ಖುಷಿ.

ಇಂತಹುದೇ ಅನುಭವ ನಮಗಾಗಿತ್ತು. ಆರು ವರ್ಷಗಳ ಹಿಂದೆ ನಾನು ಮತ್ತು ಹೇಮಲತಾ ಮಹಿಷಿಯವರು ಬ್ರಾಂಟೆಯ ನೆಲವಾದ ಯಾರ್ಕ್‌ಶೈರ್‌ಗೆ ಹೋದ ಸಮಯ. ಇಡೀ ದಿನ 'ವುದರಿಂಗ್ ಹೈಟ್ಸ್'ನ ಉತ್ಕಟ ಕ್ಷಣಗಳನ್ನು ನೆನಪಿಸಿದ ಬೋಡು ಬೆಟ್ಟಗಳಲ್ಲಿ ಅಲೆದೆವು. ಸಂಜೆಯಾಗಿತ್ತು, ಹಿಂದಿರುಗಬೇಕಿತ್ತು. ಬ್ರಾಂಟೆಯ ಹಾವರ್ತನಿಂದ ಹೊರಟು, ಟಾಡ್ ಮಾರ್ಡನ್ ಎಂಬಲ್ಲಿಗೆ ಹೇಗೋ ತಲುಪಿದವರು, ಇಲ್ಲಿ ಇಳಿದಾಗ ನೋಡುತ್ತೇವೆ ಜನರೇ ಇಲ್ಲದ ನಿರ್ಜನ ನಗರಿ. ಭಾನುವಾರವಾದ ಕಾರಣ ಬಸ್ಸುಗಳು ನಿಂತು ಹೋಗಿವೆಯೆಂದು ತಿಳಿದುಬಂತು. ಟ್ಯಾಕ್ಸಿ ಮಾಡದೆ ವಿಧಿ ಇರಲಿಲ್ಲ. ಒಂದು ಟ್ಯಾಕ್ಸಿ

ಕಾಣಿಸಿತು. ಭಾರತೀಯನಂತೆ ಕಂಡ ಮನುಷ್ಯನನ್ನು ನೋಡಿ ಹಿಂದಿಯಲ್ಲಿ ಮಾತನಾಡ ತೊಡಗಿದೆ. ಆತ ಹಿಂದಿ ಭಾಷೆಯನ್ನು ಕೇಳಿ ಪರಮಾನಂದದಿಂದ 'ಬೇರೆಯವರಿಗಾದರೆ ಹೆಚ್ಚಾಗುತ್ತೆ, ರಾಟನ್‌ಸ್ಟಾಲ್ ಸಾಕಷ್ಟು ದೂರವಿದೆ. ಆದರೆ ನೀವು ನಮ್ಮವರು, ಹನ್ನೆರಡು ಪೌಂಡಿನಲ್ಲಿ ಬರುತ್ತೇನೆ' ಎಂದ. ಹತ್ತಿ ಕುಳಿತುಬಿಟ್ಟೆವು. ಭಾನುವಾರದ ಏಕಾಂತದ ಹಾದಿ. ಅಷ್ಟು ದೂರ ಬಂದಂತೆ ನೀವು ಭಾರತದ ಯಾವ ಭಾಗದವರು? ಎಂದು ಕೇಳಿದೆ. ನಾನು ಭಾರತೀಯನಲ್ಲ, ಪಾಕಿಸ್ತಾನದವ ಎಂದಾಗ ಒಂದು ಕ್ಷಣ ಈ ಪರದೇಶದ ಅಪರಿಚಿತ ಹಾದಿಯಲ್ಲಿ ಎದೆಯಲ್ಲಿ ಕಸಕ್ ಎಂದದ್ದು ನಿಜ. ದೇಶ–ಸರಹದ್ದು–ಯುದ್ಧ–ಆತಂಕವಾದಗಳು, ಮನುಷ್ಯ ಮನುಷ್ಯರ ನಡುವೆ ಅದೆಂಥಾ ಅಪನಂಬುಗೆಯ ಗೋಡೆ ಎಬ್ಬಿಸಿಬಿಡುತ್ತವೆ ! ಆದರೆ ಆ ಅನಿಸಿಕೆ ಅರೆಕ್ಷಣದ್ದು. ಮರುಕ್ಷಣ ಮಾತಿಗೆ ತೊಡಗಿದ ನಾವು ಹಾದಿಯುದ್ದಕ್ಕೂ ಬಿಡುವಿಲ್ಲದಂತೆ ಹರಟುತ್ತಾ ಬಂದೆವು. ಆತ ತನ್ನ ದೇಶದ ಬಗ್ಗೆ ಅಪಾರ ಮಮಕಾರದಿಂದ ಮಾತನಾಡಿದ. 'ಭಾರತ ಪಾಕಿಸ್ತಾನ ಒಂದಾಗಬೇಕು' ಎಂದು ಘೋಷಿಸಿದ. ರಾಟನ್‌ಸ್ಟಾಲ್‌ನಲ್ಲಿ ಇಳಿದಾಗ ನಮ್ಮಿಂದ ಕೇವಲ ಹತ್ತು ಪೌಂಡು ತೆಗೆದುಕೊಂಡು 'ಇಷ್ಟು ಸಾಕು...' ಎಂದ. ನನ್ನ ಆಟೋಗ್ರಾಫ್ ಪುಸ್ತಕ ಹೊರತೆಗೆದು ಕೈಗಿಟ್ಟೆ 'ಅಕ್ಬರ್ ಮೆಹ್ಮದ್, ಟ್ಯಾಕ್ಸಿ ಡ್ರೈವರ್, ಟಾಡ್ ಮಾರ್ಡನ್, ಆಲ್ ದಿ ಬೆಸ್ಟ್ ಇಂಡಿಯಾ' ಎಂದು ಬರೆದು ಸಹಿ ಹಾಕಿದ. ಕಿತ್ತಾಡುತ್ತಿರುವ ಎರಡು ದೇಶಗಳು, ರಾಜಕಾರಣಿಗಳು ಎಬ್ಬಿಸಿ ನಿಲ್ಲಿಸಿರುವ ಗೋಡೆಗಳು. ಆದರೆ ಎಲ್ಲ ಸರಹದ್ದುಗಳನ್ನು ಮೀರಿ ಜನರ ಪ್ರೀತಿ ಕೈಚಾಚುತ್ತದೆ. ಒಡೆದು ಆಳುವ ಪ್ರಭುತ್ವದ ಎದುರು ಒಂದಾಗುವ ಕನಸು ಕಾಣುತ್ತದೆ.

ಕಳೆದ ವರ್ಷ ರಂಜಾನ್ ಹಬ್ಬದ ದಿನಗಳಲ್ಲಿ ಒಂದು ಘಟನೆ ನಡೆಯಿತು. ಒಂದು ಸಂಜೆ ಮನೆಗೆ ಹೊರಟಂತೆ ಆಟೋ ಹಿಡಿದಿದ್ದೆ. ಸೂರ್ಯ ಮುಳುಗುತ್ತಿದ್ದ ಹೊತ್ತು. ಡ್ರೈವರ್ ಮಸೀದಿಯ ಬಳಿಗೆ ಬಂದಾಗ 'ಒಂದೇ ನಿಮಿಷ...' ಎಂದು ಹೇಳಿ ರಸ್ತೆಯ ಬದಿಯಲ್ಲಿ ನೂಕು ಗಾಡಿಯಲ್ಲಿದ್ದ ಅದೇನೋ ಖರ್ಜೂರದಂತಹ ತುಂಡುಗಳನ್ನು ಕೊಂಡು ಅರೆ ಕ್ಷಣ ಪ್ರಾರ್ಥಿಸಿ ಬಾಯಿಗೆ ಹಾಕಿಕೊಂಡ. ಆಗಲೇ ಆತ ಮುಸ್ಲಿಮನೆಂದೂ ರಂಜಾನ್ ಉಪವಾಸದಲ್ಲಿದ್ದು, ಉಪವಾಸ ಮುರಿಯುತ್ತಿರುವ ರೀತಿ ಇದಿರಬೇಕೆಂದು ನನಗೆ

ಅರ್ಥವಾಗಿತ್ತು ನಾನು ಮನೆಗೆ ಹೊರಟಿದ್ದೆ, ಅವಸರವೇನೂ ಇರಲಿಲ್ಲ. "ನಾನು ಐದು ನಿಮಿಷ ಕಾಯುತ್ತೇನೆ. ನೀವೇನಾದರೂ ತಿನ್ನುವುದಿದ್ದರೆ ತಿನ್ನೀಪ್ಪಾ ಬೆಳಗಿನಿಂದ ಉಪವಾಸವಿರಬೇಕು..." ಕಳಕಳಿಯಿಂದ ಹೇಳಿದೆ. ಅಷ್ಟೆ ನಾನು ಹೇಳಿದ ಮಾತು. ಆತನೇನೂ ಐದು ನಿಮಿಷ ನಿಲ್ಲಿಸಿ ನನ್ನನ್ನು ಕಾಯಿಸಲಿಲ್ಲ. ಆದರೆ ತಟ್ಟನೆ ಬಲು ಹುರುಪಿನಿಂದ ಆಟೋ ಓಡಿಸಿದ. "ನಿಮ್ಮಲ್ಲೂ ಉಪವಾಸ. ಮಾಡುವ ಪದ್ಧತಿ ಇದೆಯಲ್ಲ, ಶಿವರಾತ್ರಿಯಂದು..." ನಮ್ಮ ನಡುವಿನ ಸಮಾನ ಅಂಶಗಳನ್ನು ಎತ್ತಿ ಕೇಳಿದ. ಉತ್ತರಿಸುತ್ತಾ ನಡೆದೆ. ಅಲ್ಲಿಂದ ವಿಜಯನಗರದವರೆಗೂ ಮಾತನಾಡುತ್ತಲೇ ಬಂದ. ಮೀಟರ್ 31 ರೂಪಾಯಿ ತೋರಿಸುತ್ತಿತ್ತು. ಒಂದು ರೂಪಾಯಿ ಚಿಲ್ಲರೆಗಾಗಿ ಪರದಾಡಿದೆ. ಇರಲಿ ಬಿಡಿ ಮೇಡಂ, ಥ್ಯಾಂಕ್ಸ್... ಎಂದು ಆಟೋ ಓಡಿಸಿದ. ಹಣ ಬಿಟ್ಟಿದ್ದು ಆತ. ನನಗೇಕೆ ಥ್ಯಾಂಕ್ಸ್ ಅಂದುಕೊಂಡರೂ ಮನಸ್ಸಿನಲ್ಲಿ ಹೂವರಳಿದಂಥಾ ಭಾವ. ನಾನೇನೂ ಮಾಡಿರಲಿಲ್ಲ. ಬಹುಶಃ ನನ್ನ ಆ ಒಂದು ಸಾಲು ಅವನ ಹಸಿವಿನ ಬಗ್ಗೆ ಕಳಕಳಿಯನ್ನು, ಅವನ ಧರ್ಮದ ಬಗ್ಗೆ ನನಗಿದ್ದ ಗೌರವವನ್ನು ಹೊರಹಾಕಿತ್ತು. ಅಷ್ಟು ಸಾಕಿತ್ತು, ಮನುಷ್ಯ ಮನುಷ್ಯರ ನಡುವೆ ಸ್ನೇಹದ ಸೇತುವೆ ಕೈಚಾಚಿತ್ತು.

ಆದರೆ ಮೊನ್ನೆ ರಂಜಾನ್ ದಿನವೇ ನಡೆದ ಘಟನೆ ಮನಸ್ಸಿಗೆ ತೀರಾ ಬೇಸರ ತಂದಿತು. ದಿನವೂ ಬೆಳಗ್ಗೆ ಕಾರ್ಖಾನೆಗೆ ಹೊರಟಂತೆ ನಮ್ಮ ಕಾರು ಪಾಳ್ಯವೊಂದರ ಮೂಲಕವೇ ಹಾಯುತ್ತದೆ. ಅಲ್ಲಿ ಅತಿಕಿರಿದಾದ ಗಲ್ಲಿಗಳು, ಮುಸ್ಲಿಮರೇ ಹೆಚ್ಚಿರುವ ಒತ್ತೊತ್ತಾದ ಬಡತನದ ವಠಾರಗಳು, ಅಂಗಡಿಗಳು, ಮನೆಗಳು, ಪಾಳ್ಯದ ಒಂದು ಗಲ್ಲಿಯಲ್ಲಿ ನಮ್ಮ ಕಾರು ಬಲಕ್ಕೆ ತಿರುಗಲಿತ್ತು. ನಿಧಾನವಾಗಿಯೇ ಸಿಗ್ನಲ್ ತೋರಿಸುತ್ತಲೇ ನಮ್ಮ ಡ್ರೈವರ್ ತಿರುಗಿಸುತ್ತಿದ್ದರು. ಹಿಂದಿನಿಂದ ಸ್ಕೂಟರ್ ಮೇಲೆ ವೇಗವಾಗಿ ಬಂದ ಮೂವರು ಯುವಕರು, ಕಾರು ನೇರ ಹೋಗುತ್ತದೆ ಎಂದುಕೊಂಡು ವೇಗ ತಗ್ಗಿಸದೆ ಬಂದು, ಕಾರಿಗೆ ಡಿಕ್ಕಿ ಹೊಡೆದರು. ನಮ್ಮ ಡ್ರೈವರ್ ಇಳಿದು ಮೊದಲು ಸರಿಯಾಗಿಯೇ ಮಾತನಾಡಿದ. "ಅಲ್ಲಪ್ಪ ಸಿಗ್ನಲ್ ಹಾಕಿಕೊಂಡು ಬರ್ತಾ ಇದ್ದೇನೆ. ಹೀಗೆ ನುಗ್ಗುವುದೆ?" ಆ ಹುಡುಗರಿಗೆ ಕೊಂಚ ಪೆಟ್ಟಾಗಿತ್ತು. ಅಷ್ಟರಲ್ಲಾಗಲೇ ಸಾಕಷ್ಟು ಜನ ಜಮಾಯಿಸಿಬಿಟ್ಟಿದ್ದರು. 'ಹುಡುಗರದೇ ತಪ್ಪು' ಎಂದು ಅರಿವಾಗಿತ್ತು.

'ನೋಡಿಕೊಂಡು ಬರುವುದಲ್ಲವೆ?' ಅವರಿಗೂ ಬುದ್ಧಿ ಹೇಳುತ್ತಿದ್ದರು. 'ಇದೀಗ ಡ್ರೈವರ್ ಕಾರಿಗೆ ಡ್ಯಾಮೇಜ್ ಆಗಿದೆ. ಸಾವಿರದೈನೂರಾದರೂ ಆಗುತ್ತೆ ಕೊಡಿಸಿ' ಎಂದ. 'ಸಾವಿರದೈನೂರು ಎಲ್ಲಿಂದ ತರುತ್ತಾರೆ ಹೋಗಪ್ಪ, ಏನು ಮಾಡೋಕೆ ಆಗುತ್ತೆ. ಹೀಗೆ ಆಗುತ್ತೆ' ಎಂದು ಅವರಲ್ಲಿ ಹಿರಿಯನೊಬ್ಬ ಹೇಳುತ್ತಿದ್ದಂತೆ ನಮ್ಮ ಡ್ರೈವರ್ ರೇಗಿಬಿಟ್ಟರು. ನೀವೆಲ್ಲ ಒಂದೇ ಇದ್ದೀರಾ ಅದಕ್ಕೆ ಹೇಳ್ತಿರಾ, ನಮ್ಮ ತಪ್ಪಿದ್ದರೆ ಸುಮ್ಮನೆ ಬಿಟ್ ಬಿಡ್ತಾ ಇದ್ರಾ...?' ಇಲ್ಲಿಯವರೆಗೂ ಅದೊಂದು ಅಪಘಾತ ಮಾತ್ರವಾಗಿತ್ತು. ತಪ್ಪು ಯಾರದು. ಡ್ಯಾಮೇಜಸ್ ಎಷ್ಟು ಎಂಬುದಷ್ಟೇ ಚರ್ಚೆಯಲ್ಲಿತ್ತು. ಡ್ರೈವರ್ ಬಾಯಿಂದ ಹೊರಬಿದ್ದ ಈ ಒಂದು ಮಾತಿನಿಂದ ನೀವೆಲ್ಲ ಮುಸ್ಲಿಮರು ಅದಕ್ಕೇ ಒಂದಾಗಿ ನಿಂತಿದ್ದೀರ, ನಾವು ಹಿಂದುಗಳು... ಎಂಬ ಭಾವ ಹರಿದುಬಂದು ಒಂದೇ ಸಾಲಿನಲ್ಲಿ ಅವರ ಮತ್ತು ನಮ್ಮ ನಡುವೆ ಧರ್ಮದ ಗೋಡೆಯನ್ನು ಎತ್ತಿ ನಿಲ್ಲಿಸಿತ್ತು. ಡ್ರೈವರನ್ನು ತಡೆದು 'ಏನು ಹೇಳ್ತಾ ಇದ್ದೀರಾ. ನೀವು ಹೇಳ್ತಾ ಇರೋದು ಸರಿ ಇಲ್ಲ. ಡ್ಯಾಮೇಜಸ್ ಬೇಕಿದ್ದರೆ ಕೇಳಿ. ಆದರೆ ಕೇಳುವ ರೀತಿ ಇದು ಸರಿಯಲ್ಲ...' ಎಂದು ನಾನೂ. ಕಾರಲ್ಲಿ ಕುಳಿತ ನಮ್ಮ ಹಿರಿಯ ಅಧಿಕಾರಿಗಳೂ ಡ್ರೈವರನ್ನು ಸಮಾಧಾನ ಮಾಡಿ ಪರಿಸ್ಥಿತಿ ಪ್ರಕೋಪಕ್ಕೆ ಹೋಗುವ ಮೊದಲು. ಈ ಸಣ್ಣ ಕಿಡಿ, ಗಲಭೆಯಾಗಿ ಹೊತ್ತಿ ಉರಿಯದಂತೆ ಅಲ್ಲಿಂದ ಕಾರನ್ನು ಹೊರಡಿಸಿದೆವು.

ಎಂದೋ ಯಾರೋ ನೆಟ್ಟ ಗುಮಾನಿಗಳನ್ನು, ಪೂರ್ವಗ್ರಹಗಳನ್ನು, ಹಬೆಯಾಡುವ ಅನುಮಾನಗಳನ್ನು ಎದೆಯಲ್ಲಿ ಹೊತ್ತು ತಿರುಗುತ್ತೇವೆ. ಒಂದೇ ಒಂದು ಸಾಲಿನಲ್ಲಿ ನಾವು ಬೇರೆ, ನೀವು ಬೇರೆ' ಎಂದು ನಡುವೆ ಅಡ್ಡಗೋಡೆಗಳನ್ನು ಎಬ್ಬಿಸಿ ನಿಲ್ಲಿಸುತ್ತೇವೆ. ಒಂದು ಮಾತು, ಒಂದು ಸಣ್ಣ ಕ್ರಿಯೆ, ಸ್ನೇಹದ ತಂಪನ್ನು ಹರಿಸಬಲ್ಲದು. ಧರ್ಮ, ದೇವರುಗಳನ್ನು ನಡುವೆ ತಾರದೆಯೂ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು. ಬದುಕು ಭರವಸೆಯನ್ನು ಬೇಡುತ್ತದೆ. ಪರಸ್ಪರರ ಮೇಲಿನ ನಂಬುಗೆ, ಭರವಸೆಯಲ್ಲಿ ಬದುಕಿದೆ.

* * *

**ನೇಮಿಚಂದ್ರ** : ಕತೆಗಾರ್ತಿ, ಅಂಕಣಗಾರ್ತಿ, ತಂತ್ರಜ್ಞೆ ನೇಮಿಚಂದ್ರರು ಹುಟ್ಟಿದ್ದು 16.7.1959 ಚಿತ್ರದುರ್ಗದಲ್ಲಿ. ತಂದೆ ಪ್ರೊ. ಜಿ. ಗುಂಡಣ್ಣ, ತಾಯಿ ತಿಮ್ಮಕ್ಕ. ಪ್ರಾರಂಭಿಕ ಶಿಕ್ಷಣ ತುಮಕೂರು, ಮೈಸೂರು. ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜನಿಯರಿಂಗ್‌ನಿಂದ ಬಿ.ಇ. ಪದವಿ. ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಿಂದ ಎಂ.ಎಸ್. ಪದವಿ. ಉದ್ಯೋಗಕ್ಕಾಗಿ ಸೇರಿದ್ದು ಎಚ್.ಎ.ಎಲ್. ಕಾರ್ಖಾನೆ. ಹೆಲಿಕಾಪ್ಟರ್ ಡಿಸೈನ್ ಬ್ಯೂರೊದಲ್ಲಿ ಮುಖ್ಯ ವ್ಯವಸ್ಥಾಪಕಿಯಾಗಿ ಕಾರ್ಯನಿರ್ವಹಣೆ. ಪ್ರವೃತ್ತಿಯಲ್ಲಿ ಸಾಹಿತ್ಯ, ಪ್ರವಾಸಾಸಕ್ತೆ. ಕರ್ನಾಟಕ ಲೇಖಕಿಯರ ಸಂಘದ ಕಾರ್ಯದರ್ಶಿಯಾಗಿ, 'ಅಚಲಾ' ಮಹಿಳಾ ಅಧ್ಯಯನ ಮಾಸಪತ್ರಿಕೆಯ ಸಂಪಾದಕೀಯ ಮಂಡಲಿಯ ಸದಸ್ಯೆಯಾಗಿ, ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, 'ನೆರವು' ಹಿತರಕ್ಷಣಾ ವೇದಿಕೆಗಳ ನಿಕಟ ಸಂಪರ್ಕ ಮತ್ತು ಒಡನಾಟ. ವಿಜ್ಞಾನ, ಸಾಹಿತ್ಯ, ಮಹಿಳಾ ಅಧ್ಯಯನ ಕುರಿತಂತೆ ಹಲವಾರು ಲೇಖನಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಿತ. ಪ್ರಕಟಿತ ಕೃತಿಗಳು, ಕಥಾಸಂಕಲನ–ನಮ್ಮ ಕನಸುಗಳಲ್ಲಿ ನೀವಿದ್ದೀರಿ, ಮತ್ತೆ ಬರೆದ ಕಥೆಗಳು, ಒಂದು ಶ್ಯಾಮಲ ಸಂಜೆ, ನೇಮಿಚಂದ್ರರ ಕಥೆಗಳು (ಇಲ್ಲಿಯವರೆಗಿನ) ಮುಂತಾದುವು. ಸಂವೇದನಾ ಸೂಕ್ಷ್ಮತೆ, ಸಂಯಮ, ಮನಸ್ಸಿನ ವ್ಯಾಪಾರಗಳ ವಿಶ್ಲೇಷಣೆಯಿಂದ ಕೂಡಿದ ಕಥೆಗಳು. ನೋವಿಗದ್ದಿದ ಕುಂಚ (ಪ್ರಸಿದ್ಧ ಚಿತ್ರಕಾರ ವ್ಯಾನ್‌ಗೊ), ಬೆಳಕಿಗೊಂದು ಕಿರಣ (ಮೇರಿಕ್ಯೂರಿ), ಥಾಮಸ್ ಆಲ್ವಾ ಎಡಿಸನ್, ನಿಮ್ಮ ಮನೆಗೊಂದು ಕಂಪ್ಯೂಟರ್, ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್, ನನ್ನ ಕಥೆ…ನಮ್ಮ ಕಥೆ, ಒಂದು ಕನಸಿನ ಪಯಣ, ಪೆರುವಿನ ಪವಿತ್ರ ಕಣಿವೆಯಲ್ಲಿ, ಬದುಕು ಬದಲಿಸಬಹುದು ಮುಂತಾದ ಇಪ್ಪತ್ತು ಕೃತಿ ಪ್ರಕಟಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಸಂದೇಶ ಪ್ರಶಸ್ತಿ ದೊರೆತಿದೆ.

# ಎರಡನೇ ಚತುರ್ಮಾಸ

## ವಾಣಿಜ್ಯ ವಿಶ್ಲೇಷಣಾ ಸಂಪದ–2

ಎರಡನೆಯ ಸೆಮಿಸ್ಟರ್ ವಿದ್ಯಾರ್ಥಿಗಳು ಪಠ್ಯಕ್ಕೆ ಅಳವಡಿಸಿದ ನಾಟಕ ಮತ್ತು ಕಾದಂಬರಿ ಕೃತಿಗಳನ್ನು ಕೊಂಡು ಓದುವುದು.

**1. ನಾಟಕ ಸಾಹಿತ್ಯ:**

ಮಂಟೇಸ್ವಾಮಿಯ ಕಥಾಪ್ರಸಂಗ : ಎಚ್.ಎಸ್. ಶಿವಪ್ರಕಾಶ್

**2. ಕಾದಂಬರಿ ಸಾಹಿತ್ಯ:**

ಎಳೆ : ಅನುಪಮಾ ನಿರಂಜನ

## 1. ನಾಟಕ ಸಾಹಿತ್ಯ:

### ಮಂಟೇಸ್ವಾಮಿಯ ಕಥಾಪ್ರಸಂಗ : ಎಚ್.ಎಸ್. ಶಿವಪ್ರಕಾಶ್

ವರ್ತಮಾನದ ಸಾಮಾಜಿಕ ತಲ್ಲಣಗಳನ್ನು ಒಳಹೊಕ್ಕು ನೋಡುವ ಮೂಲಕ ಅಲ್ಲಿ ಅವಿತಿರಬಹುದಾದ ನೆಲಮೂಲದ ಸಾಂಸ್ಕೃತಿಕ ಬೇರುಗಳನ್ನು ಶೋಧಿಸುವ ಹಾದಿಯಲ್ಲಿ ರಂಗಭೂಮಿ ತನ್ನದೇ ಆದ ವಿಶಿಷ್ಟ ಮಾರ್ಗಗಳನ್ನು ಅನುಸರಿಸುತ್ತಾ ಬಂದಿದೆ. ಮಾನವ ಚರಿತ್ರೆಯ ಆದಿಮ ಕಾಲದಿಂದ ಇವತ್ತಿನ ಡಿಜಿಟಲ್ ಯುಗದವರೆಗೂ ವಿಸ್ತರಿಸುವ ಮನುಜ ಸಮಾಜದ ಹೆಜ್ಜೆಗಳು ಪ್ರತಿಯೊಂದು ಕಾಲಘಟ್ಟದಲ್ಲೂ ತನ್ನದೇ ಆದ ವಿಶಿಷ್ಟ ಗುರುತುಗಳನ್ನು ಮೂಡಿಸುವುದನ್ನು ಇತಿಹಾಸದುದ್ದಕ್ಕೂ ಗಮನಿಸಬಹುದು. ಪುರಾಣ, ಐತಿಹ್ಯ, ದಾಖಲಿತ ಚರಿತ್ರೆ, ಮೌಖಿಕ–ಜನಪದ ಪರಂಪರೆ ಈ ಹಲವು ಆಯಾಮಗಳಲ್ಲಿ ಆಧುನಿಕ ಜಗತ್ತಿಗೆ ಮುಖಾಮುಖಿಯಾಗುವ ಪ್ರಾಚೀನ ಅಥವಾ ಮಧ್ಯಕಾಲೀನ ಸಮಾಜ ನಮ್ಮ ನಡುವೆ ಜಿಜ್ಞಾಸೆಗಳನ್ನು ಸೃಷ್ಟಿಸುವಂತೆಯೇ ಹಲವು ಜಟಿಲ ಸವಾಲುಗಳನ್ನೂ ತಂದಿರಿಸುತ್ತದೆ. ಮಾನವ ಸಮಾಜ ಮುನ್ನಡೆಯ ಹಾದಿಯಲ್ಲಿ ಹಿಂತಿರುಗಿ ನೋಡುವಾಗಲೆಲ್ಲಾ ಈ ಸವಾಲುಗಳೊಡನೆ ಅನುಸಂಧಾನ ಮಾಡುತ್ತಾ ತನ್ನ ಮೂಲ ಸಾಂಸ್ಕೃತಿಕ ಬೇರುಗಳನ್ನು ಮರುಶೋಧ ಮಾಡುತ್ತಾ ಸಾಗುತ್ತದೆ.

ಈ ಮರುಶೋಧದ ಪ್ರಕ್ರಿಯೆಗೆ ಒಂದು ವಿಶಿಷ್ಟ, ವಿಭಿನ್ನ ಆಯಾಮವನ್ನು ನೀಡುವ ಕ್ಷಮತೆ ಹಾಗೂ ಬೌದ್ಧಿಕ ಸ್ವಾಯತ್ತತೆ ರಂಗಭೂಮಿಗೆ ಇರುವುದರಿಂದಲೇ ಈ ಸಾಂಸ್ಕೃತಿಕ ಪ್ರಕಾರವು ಅತ್ಯಾಧುನಿಕ ತಂತ್ರಜ್ಞಾನಗಳ ಅವಿಷ್ಕಾರದ ನಡುವೆಯೂ ತನ್ನ ಅಂತಃಸತ್ವವನ್ನು ಉಳಿಸಿಕೊಂಡುಬಂದಿದೆ. ನಾಟಕಕಾರರು ಪುರಾಣ ಮತ್ತು ಐತಿಹ್ಯಗಳನ್ನು ಆಧುನಿಕ ನೆಲೆಯಲ್ಲಿ ನಿಂತು ಅರ್ಥೈಸಿಕೊಳ್ಳುತ್ತಾ, ಪೌರಾಣಿಕ ಕಥನ ಹಾಗೂ ಐತಿಹ್ಯಗಳನ್ನು ಮರುಕಟ್ಟುವ ಪ್ರಯತ್ನ ಮಾಡಿದ್ದಾರೆ. ಹಾಗೆಯೇ ಜನಪದೀಯ ನೆಲೆಯಲ್ಲಿ ಅಪಾರ ಜನಸ್ತೋಮದ ಶ್ರದ್ಧಾನಂಬಿಕೆಗಳಿಗೆ ಪಾತ್ರವಾಗುವ ಅನೇಕ ಪರಂಪರೆಗಳು ಮೌಖಿಕವಾಗಿಯೇ ಪೀಳಿಗೆಯಿಂದ ಪೀಳಿಗೆಗೆ ಹರಿಯುತ್ತಾ ಸ್ಥಾಪಿತ ಶಿಷ್ಟ ಪರಂಪರೆಗೆ

ಮುಖಾಮುಖಿಯಾಗುತ್ತಾ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡುಬಂದಿವೆ. ಅಂತಹ ಒಂದು ಜನಪದೀಯ ಪರಂಪರೆ ಕರ್ನಾಟಕದ ಉತ್ತರದಿಂದ ದಕ್ಷಿಣದವರೆಗೂ ವಿಸ್ತರಿಸಿರುವ ಮಂಟೇಸ್ವಾಮಿ ಕಾವ್ಯಗಳಲ್ಲಿ ಕಾಣಬಹುದು.

**ಮಂಟೇಸ್ವಾಮಿ ಪರಂಪರೆಯ ಹಾದಿ :**

ಕರ್ನಾಟಕದ ಮಹತ್ವದ ಮೌಖಿಕ ಮಹಾಕಾವ್ಯಗಳಲ್ಲೊಂದಾದ ಮಂಟೇಸ್ವಾಮಿ ಕಾವ್ಯವನ್ನು ದಕ್ಷಿಣ ಕರ್ನಾಟಕದ ಮಂಡ್ಯ, ಮೈಸೂರು, ರಾಮನಗರ, ಚಾಮರಾಜನಗರ ಹಾಗೂ ಬೆಂಗಳೂರು ಪ್ರದೇಶಗಳಲ್ಲಿ ಜೀವಂತವಾಗಿರಿಸಿರುವುದು ವೃತ್ತಿಪರ ಗಾಯಕರಾದ ನೀಲಗಾರ ಸಮುದಾಯ. 15ನೇ ಶತಮಾನದಲ್ಲಿ ಇದ್ದನೆಂದು ಹೇಳಲಾಗುವ ಮಂಟೆಸ್ವಾಮಿಯ ಸುತ್ತ ಹೆಣೆಯಲಾಗಿರುವ ಅನೇಕ ದಂತಕಥೆಗಳು ಹಲವು ಆಯಾಮಗಳಲ್ಲಿ, ವಿಭಿನ್ನ ಸ್ವರೂಪಗಳಲ್ಲಿ ಜನಮಾನಸದಲ್ಲಿ ಬೇರೂರಿದ್ದು , ಈ ಭಾಗದ ಜನರಲ್ಲಿ ಸಾಂಸ್ಕೃತಿಕವಾಗಿ ತನ್ನದೇ ಆದ ಅಸ್ತಿತ್ವವನ್ನು ಉಳಿಸಿಕೊಂಡಿದೆ. 12ನೆಯ ಶತಮಾನದ ಅಲ್ಲಮನಿಗೆ ಸಮಾನವಾಗಿ ಕಾಣಲ್ಪಡುವ ಮಂಟೇಸ್ವಾಮಿಯ ಪರಂಪರೆ ತಳಸಮುದಾಯದ ನಡುವೆ ತನ್ನದೇ ಆದ ಭಾವುಕ, ಆಧ್ಯಾತ್ಮಿಕ, ಸಾಂಸ್ಕೃತಿಕ, ಆಚರಣಾತ್ಮಕ ನೆಲೆಗಳಲ್ಲಿ ತಳವೂರಿದೆ. ಹಾಗಾಗಿ ಈ ಪರಂಪರೆಯನ್ನು ಜನಸಾಮಾನ್ಯರ ಮುಂದೆ ಪ್ರಸ್ತುತಪಡಿಸುವ ಸಂದರ್ಭದಲ್ಲಿ ಸಾಹಿತ್ಯ ಮತ್ತು ರಂಗಭೂಮಿ ತನ್ನದೇ ಆದ ಸ್ವಾಯತ್ತ ಅಭಿವ್ಯಕ್ತಿಯನ್ನು ಬಳಸಿಕೊಳ್ಳುತ್ತದೆ. ಇಲ್ಲಿ ಕಂಡುಬರುವ ಸೃಜನಶೀಲ ಪ್ರಯತ್ನಗಳೂ ಸಹ ಮೂಲ ಕಥಾವಸ್ತುವಿನ ಚೌಕಟ್ಟಿನೊಳಗೇ ಕೆಲವು ಇತಿಮಿತಿಗಳೊಡನೆ ಹೊರಹೊಮ್ಮುತ್ತವೆ.

ಇಂತಹುದೇ ಒಂದು ಸಾಹಿತ್ಯಕ ಅಭಿವ್ಯಕ್ತಿಯನ್ನು ಎಚ್. ಎಸ್. ಶಿವಪ್ರಕಾಶ್ ಅವರ 'ಮಂಟೇಸ್ವಾಮಿ ಕಥಾಪ್ರಸಂಗ' ನಾಟಕ ಸಂಕಲನದಲ್ಲಿ ಕಾಣಬಹುದು. ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಸಾಂಸ್ಕೃತಿಕ ವಲಯದಲ್ಲಿ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡಿರುವ ಈ ಕೃತಿಯನ್ನು ಕನ್ನಡ ರಂಗಭೂಮಿಯ ಒಂದು ಮೈಲಿಗಲ್ಲು ಎಂದೇ ಭಾವಿಸಲಾಗುತ್ತದೆ. ಆಧುನಿಕ ಜಗತ್ತಿನೊಡನೆ ನಿರಂತರ ಸಂಘರ್ಷದಲ್ಲಿರುವ ಕೆಳಸ್ತರದ ಜನಸಾಮಾನ್ಯರು

21ನೆಯ ಶತಮಾನದ ಡಿಜಿಟಲ್ ಯುಗದೊಡನೆ ಮುಖಾಮುಖಿಯಾಗುತ್ತಿರುವಾಗ, ಈ ಜನಪದೀಯ ಪರಂಪರೆಯ ಕಥನಗಳು ಒಂದು ನೆಲೆಯಲ್ಲಿ ಆತ್ಮವಿಶ್ವಾಸವನ್ನು ತುಂಬುತ್ತದೆ. ನವ ಉದಾರವಾದಿ ಬಂಡವಾಳಶಾಹಿಯು ತನ್ನ ಆಧುನೀಕರಣ ಪ್ರಕ್ರಿಯೆಯಲ್ಲಿ ಎಲ್ಲಾ ಸ್ಥಳೀಯ ಸಂಸ್ಕೃತಿಗಳನ್ನು ಆಪೋಷನ ತೆಗೆದುಕೊಳ್ಳುವುದೇ ಅಲ್ಲದೆ ಸಾಂಪ್ರದಾಯಿಕವಾಗಿ ಭಾರತದ ಪ್ರಾಚೀನ ವೈದಿಕಶಾಹಿ ಹಾಗೂ ಪುರೋಹಿತಶಾಹಿ ಸಂಹಿತೆಗಳನ್ನು ಮರುಸ್ಥಾಪಿಸಲು ಯತ್ನಿಸುತ್ತಿರುವ ಈ ಹೊತ್ತಿನಲ್ಲಿ, ನೆಲಸಂಸ್ಕೃತಿಗೆ ಇಂಬು ಕೊಡುವ ಇಂತಹ ಕಾವ್ಯಪರಂಪರೆಗಳು ಮಹತ್ವ ಪಡೆಯುತ್ತವೆ.

ಮಂಟೇಸ್ವಾಮಿಯ ಕಥನದಲ್ಲಿ ಪವಾಡಗಳು, ಪುನರ್ಜನ್ಮದ ಕಲ್ಪನೆಗಳು, ಕರ್ಮ ಸಿದ್ಧಾಂತದ ಎಳೆಗಳು ಮತ್ತು ಅತೀತಗಳ ಪರಿಕಲ್ಪನೆಗಳೂ ಢಾಳಾಗಿ ಕಾಣಸಿಗುತ್ತವೆ.

**ಕಥಾಹಂದರದ ವಿಸ್ತಾರ**

ಬೂಟಾಟಿಕೆಯ ಭಕ್ತಿಯನ್ನು ಅಣಕಿಸುವ ಮೂಲಕ ಶಿಷ್ಟ ಸಂಪ್ರದಾಯದ , ವೈದಿಕಶಾಹಿಯ ಸಾಂಸ್ಕೃತಿಕ ನೆಲೆಗಳನ್ನು ಧಿಕ್ಕರಿಸುವ ಮಂಟೇಸ್ವಾಮಿಯ ಕಥನದ ಹಾದಿಯಲ್ಲಿ ಅದೇ ವೈದಿಕಶಾಹಿಯು ಬಲವಾಗಿ ಪ್ರತಿಪಾದಿಸುವ ಕಾಲಜ್ಞಾನ, ಮರುಜನ್ಮ ಹಾಗೂ ಮಹಾತ್ಮನ ಅವತಾರಗಳಂತಹ ಜಟಿಲ ವಿಚಾರಗಳೂ ಕಾಣಸಿಗುತ್ತವೆ. ಕಲ್ಯಾಣವನ್ನು ತೊರೆಯುವ ಮುನ್ನ ಸಮಾಜದಲ್ಲಿ ಅಂತರ್ಗತವಾಗಿರುವ ಡಾಂಬಿಕತೆಯನ್ನು ತಿರಸ್ಕರಿಸಿ ಭಕ್ತಿಯ ಮತ್ತೊಂದು ಆಯಾಮವನ್ನು ನೈಜ ಲಿಂಗವನ್ನು ಪಡೆಯುವ ಮೂಲಕ ಐಕ್ಯವಾಗುವ ಮಂಟೇಸ್ವಾಮಿ ಕಲ್ಯಾಣದ ಭವಿಷ್ಯವನ್ನು ನುಡಿಯುತ್ತಲೇ ಬಸವಣ್ಣ ಹಾಗೂ ನೀಲಾಂಬಿಕೆಯರ ಗೌರವಾದರಗಳಿಗೆ ಪಾತ್ರನಾಗಿ ತನ್ನ ಪಯಣವನ್ನು ಆರಂಭಿಸುತ್ತಾನೆ. ದಕ್ಷಿಣದ ಕಡೆಗೆ ಸಾಗುವ ಮಂಟೇಸ್ವಾಮಿ ಕಾಡುಗಣ್ಣ ರಾಚಪ್ಪ ಮತ್ತು ಮಹಾತಾಯಿಯೊಂದಿಗೆ ಸಾಗುತ್ತಾನೆ. ಪಯಣದ ಹಾದಿಯಲ್ಲಿ ಮಂಟೇಸ್ವಾಮಿಯ ಮಡಿಲಿಗೆ ದಕ್ಕುವ ಪ್ರತಿಯೊಂದು ಜೀವವೂ ಒಂದೊಂದು ಸಮುದಾಯವನ್ನು ಪ್ರತಿನಿಧಿಸುತ್ತಾ ಹೋಗುತ್ತದೆ. ರಾಚಪ್ಪಾಜಿ, ತೋಪಿನ ದೊಡ್ಡಮ್ಮ, ಚೆನ್ನಾಜಮ್ಮ ಮತ್ತು

ಸಿದ್ಧಪ್ಪಾಜಿ ಮಂಟೇಸ್ವಾಮಿಯ ಅನುಯಾಯಿಗಳಾಗಿ. ಬಸವಯ್ಯ ಎಂಬಾತ ಮರುಜನ್ಮ ಪಡೆದು ಕೆಂಪಣ್ಣನಾಗಿ ಕೊನೆಗೆ ಸಿದ್ಧಪ್ಪಾಜಿಯಾಗಿ ಕಾಣಿಸಿಕೊಳ್ಳುತ್ತಾನೆ.

ಪಾಂಚಾಲ ರಾಜರ ದುರಾಡಳಿತ, ಹಣದಾಸೆಯ ವಿರುದ್ಧ ಸೆಣಸಾಡುವ ಸಿದ್ಧಪ್ಪಾಜಿಯ ಕಥೆಯಲ್ಲಿ ಸಾಂಪ್ರದಾಯಿಕ ಸಮಾಜ ನಾಗರಿಕತೆಯತ್ತ ಹೊರಳುತ್ತಿರುವುದನ್ನು ಕಬ್ಬಿಣದ ದಾನ ಕೇಳುವ ಮೂಲಕ ಸಾಂಕೇತಿಕವಾಗಿ ಪ್ರತಿನಿಧಿಸಲಾಗಿದೆ. ಉತ್ಪಾದನಾ ಸಂಬಂಧಗಳು ಹೊಸ ದಿಕ್ಕಿಗೆ ತೆರೆದುಕೊಳ್ಳಲು ನೆರವಾಗುವ ಕಬ್ಬಿಣದ ಬಳಕೆ ಮತ್ತು ತದನಂತರದಲ್ಲಿ ರೂಪುಗೊಳ್ಳುವ ಸಮಾಜದಲ್ಲಿ ಇದ್ದಿರಬಹುದಾದ ಸಾಮಾಜಿಕ ಕ್ಷೋಭೆ, ಪರಸ್ಪರ ಕದನದಲ್ಲಿ ತೊಡಗಿ ಮೇಲುಗೈ ಸಾಧಿಸಲೆತ್ನಿಸುವ ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಗಳಾಗಿ ಪಾಂಚಾಲ ರಾಜರ ಪಾತ್ರ ಕಾಣಿಸಿಕೊಳ್ಳುತ್ತದೆ. ಇವರ ಗರ್ವಭಂಗದ ಸನ್ನಿವೇಶಗಳು ನಾಟಕಕ್ಕೆ ಹೊಸ ಹೊಳಹು ನೀಡುತ್ತದೆ. ಮನುಷ್ಯ ತನ್ನ ಅಭ್ಯುದಯದ ಹಾದಿಯಲ್ಲಿ ತಾನೇ ಸೃಷ್ಟಿಸಿಕೊಂಡ ವೇದ, ಶಾಸ್ತ್ರ ಹಾಗೂ ಪುರಾಣಗಳ ಅಂಧಾಚರಣೆ ಭವಿಷ್ಯದ ಪೀಳಿಗೆಗೆ ಮಾರಕವಾಗುವ ಸಂಭವವನ್ನೂ ಮಂಟೇಸ್ವಾಮಿಯ ಕಥನದ ಮೂಲಕ ಬಿಂಬಿಸಲಾಗುತ್ತದೆ. ಈ ಮೌಢ್ಯಗಳನ್ನು ತೊಡೆದುಹಾಕಿ ಸಾಮಾಜಿಕ ಚಿಂತನೆಗಳ ಮೂಲಕ ಪ್ರಕೃತಿಯೊಡನೆ ಕೂಡಿ ಬಾಳಬೇಕಾದ ಅವಶ್ಯಕತೆಯನ್ನು ಈ ಕಥಾ ಹಂದರ ಸೂಚ್ಯವಾಗಿ ಹೇಳಲಿಚ್ಚಿಸುತ್ತದೆ.

ತನ್ನ ಸುದೀರ್ಘ ಪಯಣದ ಹಾದಿಯಲ್ಲಿ ಜ್ಯೋತಿ ಸ್ವರೂಪವಾಗಿ, ಹಂತಹಂತವಾಗಿ ಪರಂಜ್ಯೋತಿಯಾಗಿ ರೂಪುಗೊಂಡು ಅಂತಿಮವಾಗಿ ಪರಂಜ್ಯೋತಿ ಲಿಂಗಯ್ಯನಾಗಿ ಅಸಂಖ್ಯಾತ ಶಿಷ್ಯಕೋಟಿಯನ್ನು ಪಡೆಯುವ ಮಂಟೇಸ್ವಾಮಿ ಹಲವು ಪವಾಡಗಳ ಮೂಲಕ ಸಮಾಜದ ಓರೆಕೋರೆಗಳನ್ನು ಪ್ರತಿರೋಧಿಸುತ್ತಾ ಶಿಷ್ಟ ಪರಂಪರೆಯ ಸಾಂಸ್ಕೃತಿಕ ನೆಲೆಗಳನ್ನು ಪ್ರಶ್ನಿಸುತ್ತಾ ತಳಸಮಾಜದ ಸಾಂಸ್ಕೃತಿಕ ಸೂಕ್ಷ್ಮತೆಗಳನ್ನು ಬಿಂಬಿಸುವ ಒಂದು ಸಾಂಸ್ಕೃತಿಕ ಶಕ್ತಿಯಾಗಿ ಪರ್ಯವಸಾನ ಹೊಂದುವುದು ಇಡೀ ಕಥಾವಸ್ತುವಿನ ಒಳಾರ್ಥ. ಕೆಳಸ್ತರದ ವರ್ಗವೊಂದರ ಪ್ರತಿನಿಧಿಯಾಗಿ ಮಂಟೇಸ್ವಾಮಿಯ ಸುತ್ತ ಹಬ್ಬಿಕೊಂಡಿರುವ ದಂತಕಥೆಗಳು, ಪವಾಡಗಳ ಕಥನಗಳು, ಪುನರ್ಜನ್ಮದ ಕಥನಗಳು ಇಂದಿಗೂ ನಮ್ಮ

ನಡುವೆ ಇರುವ ಇದೇ ಪಂಥದ ಗುಡ್ಡರ ಸಂಪ್ರದಾಯಗಳಲ್ಲಿ ಕಾಣಸಿಗುತ್ತವೆ. ಸ್ಥಾಪಿತ ಪಟ್ಟಭದ್ರ ಸಂಸ್ಕೃತಿಗೆ ಪ್ರತಿರೋಧದ ನೆಲೆಯಲ್ಲಿ ಕೆಳವರ್ಗಗಳನ್ನು ಪ್ರತಿನಿಧಿಸುವ ಸಾಂಸ್ಕೃತಿಕ ಅಸ್ಮಿತೆಯಾಗಿ ಮಂಟೇಸ್ವಾಮಿ ಇಂದಿಗೂ ಸಹ ಈ ಪ್ರದೇಶದ ಜನಗಳಲ್ಲಿ ಗೌರವಾದರಗಳಿಗೆ ಪಾತ್ರನಾಗಿರುವುದು ವಿಶೇಷ. ಮಂಟೇಸ್ವಾಮಿ ಭಕ್ತರಾದ ನೀಲಗಾರರು ತಮ್ಮ ಗಾಯನದ ಮೂಲಕ ಈ ಪರಂಪರೆಯನ್ನು ಜನಮಾನಸದ ನಡುವೆ ಜೀವಂತವಾಗಿರಿಸಿದ್ದಾರೆ.

## 2. ಕಾದಂಬರಿ ಸಾಹಿತ್ಯ:

# ಎಳೆ : ಅನುಪಮಾ ನಿರಂಜನ

ನಮ್ಮ ಇಂದಿನ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಕೇಳಿ ಬರುವ ಕೆಲವೇ ಕೆಲವು ಪ್ರಮುಖ ಸಾಹಿತಿಗಳ ಹೆಸರುಗಳಲ್ಲಿ ಡಾ. ಅನುಪಮಾ ನಿರಂಜನರದ್ದು ಒಂದು ದೊಡ್ಡ ಹೆಸರು. ವೃತ್ತಿಯಿಂದ, ಪ್ರವೃತ್ತಿಯಿಂದ ಕನ್ನಡ ಸಾಹಿತ್ಯಕ್ಕೆ ಇವರು ಕೊಟ್ಟ ದೇಣಿಗೆ ಹಿರಿದಾದುದು. ಮುವ್ವತ್ತು ವರುಷಗಳ ಸುದೀರ್ಘ ಶ್ರಮದಿಂದ ವೈಜ್ಞಾನಿಕ ಸಾಹಿತ್ಯವನ್ನೂ ಗಂಭೀರ ವೈಚಾರಿಕ ಸಾಹಿತ್ಯವನ್ನೂ, ಜನಪ್ರಿಯ ಸಾಹಿತ್ಯವನ್ನೂ ಸಿರಿಗೊಳಿಸಿದ ಶ್ರೇಯಸ್ಸು ಡಾ. ಅನುಪಮಾ ಅವರಿಗೆ ಸಲ್ಲುತ್ತದೆ, ಕಥೆಗಾರರಾಗಿ, ಕಾದಂಬರಿಕಾರರಾಗಿ, ವೈಜ್ಞಾನಿಕ ವಿಷಯಗಳ ಅಂಕಣಕಾರರಾಗಿ ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಉನ್ನತ ಸ್ಥಾನ ಅವರದಾಗಿದೆ.

ಕೇವಲ ಕಥೆಗಾಗಿ ಕಥೆ, ಕಾದಂಬರಿಗಾಗಿ ಕಾದಂಬರಿ ಬರೆಯುತ್ತಿರುವ ಅನೇಕ ಲೇಖಕರ, ಲೇಖಕಿಯರ ಮಧ್ಯೆ ಡಾ. ಅನುಪಮಾ ಅವರ ಎಲ್ಲ ಬರಹಗಳು ವಿಶಿಷ್ಟ ವಿಭಿನ್ನತೆಯಿಂದ ಎದ್ದು ನಿಲ್ಲುತ್ತವೆ; ಹೊಸ ಧೋರಣೆ, ಹೊಸ ಕಾಳಜಿಗಳನ್ನು ಪ್ರತಿ ಬಿಂಬಿಸುತ್ತವೆ. ಬರವಣಿಗೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಬರೆಯುತ್ತಿರುವ ಅನುಪಮಾ ಅವರು ಜನತೆಗೆ, ಸಮಾಜಕ್ಕೆ ಏನನ್ನಾದರೂ ಕೊಡಲೇಬೇಕೆನ್ನುವ ಚಿಂತನೆಗೆ ತಮ್ಮನ್ನು ಒಡ್ಡಿಕೊಂಡಿದ್ದಾರೆ. ಯಾವುದೇ ವಿಷಯವನ್ನು ಆಯ್ಕೆ ಮಾಡಿಕೊಂಡರೂ ಆ ವಿಷಯದಲ್ಲಿನ ಆಳಕ್ಕೆ ಇಳಿದ ಅಧ್ಯಯನದ ಫಲಶ್ರುತಿಯನ್ನು ಇವರ ಬರವಣಿಗೆ ಯಲ್ಲಿ ನಿಚ್ಚಳವಾಗಿ ಗುರುತಿಸಬಹುದಾಗಿದೆ. ಸಮಾಜಕ್ಕೆ ಉಪಯುಕ್ತವಾದುದೇನನ್ನಾದರೂ ಕೊಡಬೇಕೆಂಬ ತೀವ್ರ ಹಂಬಲ ಅವರ ಎಲ್ಲಾ ಬರವಣಿಗೆಯಲ್ಲಿನ ಮೂಲ ಸ್ರೋತವಾಗಿದೆ.

'ಎಳೆ' ತನ್ನ ಕಥಾವಸ್ತುವಿನ ವಿಶಿಷ್ಟತೆಯಿಂದ ಪರಿಗಣಿಸಲ್ಪಡುವ ಕಾದಂಬರಿಗಳಲ್ಲಿ ಡಾ.ಅನುಪಮಾ ಅವರ ಒಂದು ಉತ್ತಮ ಕಾದಂಬರಿಯಾಗಿದೆ. ನೂಲಿನಳೆಯನ್ನು ಬಿಡಿಸುವ, ಅವುಗಳನ್ನು ಸೂಕ್ಷ್ಮವಾಗಿ ಸೇರಿಸಿ ನೇಯ್ದು ಬಣ್ಣಬಣ್ಣದ ಬಟ್ಟೆಗಳನ್ನು

ತಯಾರಿಸುವ ಮಾನವನ ಬದುಕಿಗೆ 'ಎಳೆ'ಯನ್ನು ಸಾಂಕೇತಿಸುವ ಕಾದಂಬರಿ ಗಾರ್ತಿಯ ಆಲೋಚನಾ ವಿಧಾನ, ಅದನ್ನು ಕಾದಂಬರಿಯ ಉದ್ದಕ್ಕೂ ಧ್ವನಿಸುವ ರೀತಿ ಮನೋಜ್ಞವಾದುದು.

ಬಲ್ಲಿದ ಬಡವನನ್ನು, ವಿದ್ಯಾವಂತ ಅವಿದ್ಯಾವಂತನನ್ನು, ಗಂಡು ಹೆಣ್ಣನ್ನು, ಮೇಲ್ಜಾತಿಯವನು ಕೀಳ್ಜಾತಿಯವನನ್ನು ಶೋಷಿಸುವ ಜ್ವಲಂತ ನಿದರ್ಶನಗಳು ಬೇಕಾದಷ್ಟು ದೊರೆಯುತ್ತವೆ. ಆದರೆ ಒಂದೇ ಜನಾಂಗದ, ಒಂದೇ ಜಾತಿ ಪಂಗಡಗಳಿಗೆ ಸೇರಿದವರಲ್ಲಿಯೂ ಈ ಶೋಷಣೆ ಹೇಗೆ ನಡೆಯುತ್ತದೆ ಎನ್ನುವ ಸೂಕ್ಷ್ಮ 'ಎಳೆ'ಗಳನ್ನು ಬಿಡಿಸುವ ಕುಸುರಿಗೆಲಸ ಈ ಕಾದಂಬರಿಯಲ್ಲಿದೆ. ಅಲ್ಪಸಂಖ್ಯಾತ, ಹಿಂದುಳಿದ ಕೋಮಿಗೆ ಸಂಬಂಧಿಸಿದ ಒಂದು ಜನಾಂಗದ ವಿಭಿನ್ನ ವ್ಯಕ್ತಿತ್ವದ ವ್ಯಕ್ತಿಗಳನ್ನು ಅವರ ಆಚಾರ–ವಿಚಾರ, ನಡೆ–ನುಡಿ, ನಂಬಿಕೆ–ಮೂಢನಂಬಿಕೆ, ಕಂದಾಚಾರ, ತಿಳುವಳಿಕೆಗಳನ್ನು ಪರಿಚಯಿಸುವುದು, ಆ ಮೂಲಕ ಆ ಸಮಾಜದಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸುವುದು, ಬದುಕನ್ನು ತಿದ್ದಿಕೊಳ್ಳುವ, ನೇರ್ಪಡಿಸಿಕೊಳ್ಳುವ ಸೂಚನೆ ಕೊಡುವುದು, ಹಳೆಯ ತಲೆಮಾರಿನಿಂದ ಹೊಸ ತಲೆಮಾರಿಗೆ ಸಮಾಜ ಮುಂದುವರಿಯಲು ಬೇಕಾದ ಸೂಚನೆ ಕೊಡುವ ಅಂಶಗಳು ಕಾದಂಬರಿಯಲ್ಲಿ ಸ್ಫುಟವಾಗಿ ನಿರೂಪಿತವಾಗಿವೆ.

ಯಾವುದೇ ಜಾತಿ, ಯಾವುದೇ ಕೋಮು. ಯಾವುದೇ ಜನಾಂಗದ ವ್ಯಕ್ತಿ, ಆತ ಶ್ರೀಮಂತನಾಗಿದ್ದರೆ, ಸಿರಿವಂತನಾಗುವ ಅತೀವ ಬಯಕೆ ಇದ್ದರೆ, ಅವನು ಎಲ್ಲರನ್ನೂ ಶೋಷಿಸುವಂತೆ ತನ್ನ ಜನಾಂಗ, ತನ್ನ ಬಂಧುಗಳನ್ನೇ ಇಲ್ಲವೇ ತನ್ನ ಕುಟುಂಬದ ವ್ಯಕ್ತಿಗಳನ್ನೇ ಶೋಷಿಸುತ್ತಾನೆ. ಇದು ಇತಿಹಾಸ ಸಾರಿರುವ ಸತ್ಯಸಂಗತಿ. ಈ ಕಾದಂಬರಿ ಇದನ್ನು ಸಾರುತ್ತದೆ. ಜೊತೆಯಲ್ಲಿಯೇ ಇಂಥ ಶೋಷಣೆ ತಪ್ಪಬೇಕು ಎನ್ನುವ ಕಳಕಳಿಯ ಕಣ್ಣೆರೆಯುವಿಕೆ ಈ ಕಾದಂಬರಿಯ ಮುಖ್ಯ ಧ್ಯೆಯವಾಗಿದೆ.

ನೇಕಾರ ಜನಾಂಗಕ್ಕೆ ಸೇರಿದ ಶ್ರೀಮಂತನೊಬ್ಬ ತನ್ನ ಜನಾಂಗದ ಬಂಧುಗಳನ್ನೇ ಶೋಷಿಸುವ ಚಿತ್ರ ಇಲ್ಲಿ ಪ್ರಮುಖವಾದರೂ ವಿಧವೆಗೆ ಮರುಮದುವೆ ಮಾಡಿಸುವ ಅಂತರಜಾತಿಯ ವಿವಾಹ ನೆರವೇರಿಸುವ, ಅಂಗವಿಕಲನಿಗೆ ಮದುವೆ ಮಾಡಿಸುವ, ಬಡವ

ಶ್ರೀಮಂತರ ನಡುವೆ ಸೌಹಾರ್ದ ಸಂಬಂಧ ಕಲ್ಪಿಸುವ, ಕಾರ್ಮಿಕ ಸಂಘವನ್ನು ಸ್ಥಾಪಿಸುವ – ಇಂಥ ಅನೇಕ ಹೊಸ ಸಂಗತಿಗಳ ಕ್ಷಕಿರಣಗಳು ಈ ಕಾದಂಬರಿಯಲ್ಲಿವೆ.

ಕಥಾನಾಯಕ ವಿಚಾರವಂತನಾದ ರಂಗದಾಸನು, ಪ್ರಶ್ನೆ ಹಾಕಿಕೊಳ್ಳುವ ಅನಂತರ ಅವುಗಳಿಗೆ ಉತ್ತರ ಹುಡುಕುವುದರ ಮೂಲಕ ವಿಷಯಗಳಿಗೆ ವಿವರಣೆ ನೀಡುತ್ತಾನೆ. ಕಥೆಯ ಪ್ರತಿನಾಯಕನಂತಿರುವ ಉಗ್ರಪ್ಪ, ಹೆಸರಿನಲ್ಲಿರುವ ವಾಚ್ಯವನ್ನು ಗುರುತಿಸಿಯೂ, ಎಲ್ಲ ಕಥೆಯ ಖಳನಾಯಕನಂತೆಯೇ ಕ್ರೂರ ಸ್ವಭಾವದವನಾಗಿ ಕಾಣುತ್ತಾನೆ.

ಒಂದು ಹಳ್ಳಿಯ, ಒಂದು ಜನಾಂಗದ ಅತ್ಯಂತ ಸೂಕ್ಷ್ಮ ಸ್ತರಗಳನ್ನು ವಿಶ್ಲೇಷಿಸುವಲ್ಲಿ, ಆ ವಿವರದ ಅಚ್ಚುಕಟ್ಟು ನಿರೂಪಣೆಯಲ್ಲಿ ಕಾದಂಬರಿಗಾರ್ತಿ ಯಶಸ್ವಿ ಯಾಗಿದ್ದಾರೆ. ಒಂದು ಜನಾಂಗದ ಸಮಗ್ರ ಚಿತ್ರ, ಬದಲಾಗುತ್ತಿರುವ ಸಾಮಾಜಿಕ ನಡವಳಿಕೆ, ಸಂಪ್ರದಾಯ ನಂಬಿಕೆಗಳ ಸಂಘರ್ಷ, ನವೋದಯದ ಒಂದು ಸಂಕ್ರಮಣ– ಇವೆಲ್ಲ ಇಲ್ಲಿ ಸಮರ್ಥ ರೀತಿಯಲ್ಲಿ ದಾಖಲಾಗಿವೆ.

ಈ ಕಾದಂಬರಿಯಲ್ಲಿನ ಅನೇಕ ಸಾಮಾಜಿಕ ನಂಬಿಕೆಗಳಿಗೆ ರಂಗದಾಸನ ವಿಶ್ಲೇಷಣೆ ಕಾದಂಬರಿಗಾರ್ತಿಯ ವಿಶ್ಲೇಷಣೆಯೇ ಆಗಿದೆ. ಎಲ್ಲವನ್ನೂ ಬೆದಕುವ ಕೆದಕುವ, ಪ್ರಶ್ನಿಸಿಕೊಳ್ಳುವ ಹಂತದಲ್ಲಿಯೇ ನಿಲ್ಲದೆ ಅವುಗಳ ಮೂಲ ಹುಡುಕಿ ಹಿಂದಿನ, ಇಂದಿನ ಮುಂದಿನ ನಿಲುವುಗಳನ್ನು ಅರ್ಥ ಮಾಡಿಕೊಳ್ಳುವ ಪ್ರಾಮಾಣಿಕ ಯತ್ನ ಕಾದಂಬರಿಯ ಮತ್ತೊಂದು ಪ್ರಮುಖ ಗುಣ.

ಮುನೇಶ್ವರನ ಗುಡಿಯ ಚಿತ್ರ, ಆ ದೇವರಲ್ಲಿದ್ದ ಜನರ ಭಕ್ತಿ, ಪೂಜೆ, ಬಲಿಪೂಜೆ ಹಿಂದೆ ಆದಿವಾಸಿಗಳು ಗಂಡಸು ಹೆಂಗಸರನ್ನು ಬಲಿಕೊಡುತ್ತಿದ್ದ ರೀತಿ, ಬಲಿ–ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗದೆ ಫಿಲಿಪೈನ್ಸ್ ಮೊದಲಾದ ದೇಶದಲ್ಲಿ ಮನುಷ್ಯನನ್ನು ಬೇಟೆಯಾಡಿ ಗದ್ದೆ–ತೋಟಗಳಿಗೆ ಬಲಿ ಕೊಡುತ್ತಿದ್ದ ಬಗ್ಗೆ; ಈ ವಿಷಯಗಳಿಗೆ ಇಲ್ಲಿ ಸಾಕಷ್ಟು ಮಾಹಿತಿ ದೊರೆಯುತ್ತದೆ. ಇಲ್ಲೆಲ್ಲಾ ಇತಿಹಾಸ ಕಣ್ಣಿಟ್ಟಿದೆ.

ಈ ಕಾದಂಬರಿಯಲ್ಲಿ ಪೌರಾಣಿಕ ವಿಷಯಗಳ ವಿಶ್ಲೇಷಣೆಯೂ ಸಾಕಷ್ಟು ನಡೆದಿದೆ. ಮದುವೆಯ ಶಾಸ್ತ್ರ, ಸಂಪ್ರದಾಯ ಆಚರಣೆಗಳ ವಿವರಗಳ ಜೊತೆಯಲ್ಲಿಯೇ ಹನುಮಶೆಟ್ಟಿ

ಕೊಡುವ ನೇಕಾರರ ಒಳಪಂಗಡಗಳ ಇತಿಹಾಸ ಕುತೂಹಲ ಆಶ್ಚರ್ಯ ಭರಿತವಾಗಿದೆ. ಇದೇ ಸಂದರ್ಭದಲ್ಲಿ, ಇಲ್ಲಿ ಬರುವ ಭಾಗವತರದು ಒಂದು ಸ್ವಾರಸ್ಯಕರ ಪಾತ್ರ, ಜನತೆಯ ಅಜ್ಞತೆಯನ್ನು ತನ್ನ ವೃತ್ತಿಲಾಭಕ್ಕೆ ಬಳಸಿಕೊಳ್ಳುವ ರೀತಿ ಸ್ವಾರಸ್ಯಕರವಾಗಿದೆ. ನೇಕಾರ ವಂಶದ ಮೂಲಪುರುಷ ದೇವಲನ ಜನನ, ಆತ ದೇವಾನುದೇವತೆಗಳಿಗೆ ವಸ್ತ್ರ ತಯಾರಿಸಿದ್ದು, ದೇವ–ದಾನವರ ಯುದ್ಧ, ದೇವ, ದೇವಲ ಮುನಿಗೆ ಚೌಡೇಶ್ವರಿ ಸಹಾಯ ಮಾಡಿದ ಪರಿ, ಅಂದಿನಿಂದ ಆ ಜನಾಂಗದ ದೇವತೆಯಾಗಿ ಚೌಡೇಶ್ವರಿ ಪೂಜೆಗೊಳ್ಳುತ್ತಿರುವ ರೀತಿ – ಈ ವಿವರಣೆಯೆಲ್ಲಾ ತುಂಬ ಸಹಜವಾಗಿ ಜನಸಾಮಾನ್ಯರು ನಂಬುವಂತೆ ವಿಸ್ತಾರಗೊಂಡಿದೆ.

ಪೌರಾಣಿಕವೆನ್ನಬಹುದಾದ ಈ ಕಥೆಗಳನ್ನೆಲ್ಲಾ ಎಷ್ಟು ನಂಬಬಹುದು ಎನ್ನುವ ಪ್ರಶ್ನೆ ಕೆಲವರಲ್ಲಾದರೂ ಮೂಡಬಹುದು. ಅದಕ್ಕೆ ಭಾಗವತರು ಕೊಡುವ ಉತ್ತರವೇ ಸರಿಯಾದುದು. "ಇಲ್ಲಿ ನಂಬುವ ಬಿಡುವ ಪ್ರಶ್ನೆಯೇ ಇಲ್ಲ. ನಮ್ಮ ಜನಕ್ಕೆ ಇಂಥ ಕಪೋಲಕಲ್ಪಿತ ಕಥೆಗಳು ಬೇಕು. ಆದ್ದರಿಂದ ಹೇಳೀನಿ. ಇದರ ಜೊತೆಗೆ ನನ್ನ ಕಲ್ಪನೆಯೂ ಒಂದಿಷ್ಟು ಸೇರುತ್ತೆ. ಹೊಟ್ಟೆಪಾಡಿಗೆ ಮಾಡಿದರೂ ತಪ್ಪಲ್ಲ ಸ್ವಾಮಿ". ಇಂಥ ಅನೇಕ ಕಪೋಲಕಲ್ಪಿತ ಕಥೆಗಳ ಆಗರವೇ ನಮ್ಮ ಪೌರಾಣಿಕಾಂಶಗಳಾಗಿವೆ ಎಂಬ ವ್ಯಂಗ್ಯವನ್ನು ಡಾ. ಅನುಪಮಾ ಅವರು ಚೆನ್ನಾಗಿ ವಿಶದೀಕರಿಸಿದ್ದಾರೆ. ಕೇಳುವ, ನಂಬುವ ಜನ ಇರುವವರೆಗೂ ಭಾಗವತರಂಥ ಹೇಳುವ ಜನರೂ ಇರುತ್ತಾರೆ.

ಡಾ. ಅನುಪಮಾ ಅವರು ಕನ್ನಡ ಸಾಹಿತ್ಯದ ಕೆಲವು ಸ್ವಾರಸ್ಯಕರ ತುಣುಕುಗಳನ್ನು ಕಾದಂಬರಿಯ ನೇಯ್ಗೆಯಲ್ಲಿ ತಂದು ಕೂಡಿಸಿರುವುದು ಕಥೆಯ ಚೌಕಟ್ಟಿಗೆ ಹೆಚ್ಚಿನ ಮಹತ್ವ ತಂದಿದೆ. ಹೊಸ ತಂತ್ರ ಇಲ್ಲಿ ತಲೆ ಹಾಕಿದೆ. ನಾಗವರ್ಮನ ಕಾದಂಬರಿಯಲ್ಲಿ ಬರುವ ಪುಂಡರೀಕ ಮಹಾಶ್ವೇತೆಯರ ಪವಿತ್ರ ಪ್ರೇಮದ ಸಂಕೇತ, ಕಡೆಯಲ್ಲಿ ಕಥಾನಾಯಕ ರಂಗದಾಸ, ನಾಯಕಿ ಗಿರಿಜೆಯನ್ನು ಒಂದುಗೂಡಿಸುವಲ್ಲಿ ಸಫಲವಾಗಿದೆ.

ದೇವಲ ಋಷಿಯ ಕಥೆ, ಚೌಡೇಶ್ವರಿಯ ಕಥೆಯನ್ನು ಹೇಳುವಲ್ಲಿ, ಹಿನ್ನೆಲೆಯಾಗಿ ಅಲ್ಲಲ್ಲಿ ಜೇಡರ ದಾಸಿಮಯ್ಯನ ವಚನಗಳನ್ನು ಹಾಡುವಲ್ಲಿ, ನೇಕಾರ ಜನಾಂಗ;

ಜನಾಂಗದ ಒಬ್ಬ ವಚನಕಾರನಿಗೆ, ಅದರಲ್ಲಿಯೂ ವಚನಕಾರರಲ್ಲಿ ಆದ್ಯನಾದವನಿಗೆ ಕಾದಂಬರಿಗಾರ್ತಿ ಸಲ್ಲಿಸಿರುವ ಒಂದು ಪ್ರಾಮಾಣಿಕ ಗೌರವವೂ ಆಗಿದೆ ; ಜೊತೆಗೆ ವಚನ ಸಾಹಿತ್ಯದಲ್ಲಿನ ಅವರ ಅಭಿರುಚಿಯೂ ವ್ಯಕ್ತವಾಗಿದೆ.

ಸಾಂಬಶಿವನ್ ಪ್ರಾಧ್ಯಾಪಕ ಪಾತ್ರಕ್ಕೆ ಒಂದು ಉದಾಹರಣೆಯಾದಂತೆ ಮುದ್ದು ಸ್ವಾಮಿ, ಗಂಗಾಧರ – ವಿಭಿನ್ನ ಸ್ವಭಾವಗಳ ಪಾತ್ರಗಳಾಗಿದ್ದಾರೆ. ಗಿರಿಜೆಯ ಮಾನಸಿಕ ಪರಿವರ್ತನೆ ಕಾದಂಬರಿಯ ಮುಖ್ಯ ಆಶಯಗಳಲ್ಲಿ ಒಂದಾಗಿದೆ. ಪರಾವಲಂಬಿ ಅಬಲೆ ಹೆಣ್ಣು ಸ್ವತಂತ್ರಳಾಗಿ ಸಬಲೆಯಾಗುವ ಬದಲಾವಣೆ ಬಹಳ ಮುಖ್ಯವಾದ ಒಂದು ಪರಿವರ್ತನೆ. ಬದಲಾದ ಸಮಾಜ, ವ್ಯಕ್ತಿಗಳಿಗೆ ಸಂಕೇತವಾಗಿ ಆಕೆ ನಿಲ್ಲುತ್ತಾಳೆ. ವ್ಯಕ್ತಿಗಳು ಬದಲಾಗುವ ವ್ಯವಸ್ಥೆಗೆ ಕ್ರಮೇಣ ಹೊಂದಿಕೊಳ್ಳಬೇಕಾದ ಸೂಚನೆಗಳು ಕಾದಂಬರಿಯಲ್ಲಿ ಹೆಚ್ಚಾಗಿ ಕಾಣುತ್ತವೆ.

ಶೋಷಿತರ ಪರವಾಗಿ ಹುಟ್ಟುವ ಕಾರ್ಮಿಕ ಸಂಘ, ಕಾರ್ಮಿಕರಲ್ಲಿ ಆಧುನಿಕ ಆಶಾಭಾವನೆಯ ಪರಿಸರ ನಿರ್ಮಾಣ ಮಾಡಿದೆ. ಉಗ್ರಪ್ಪನಂಥವರೂ ಈ ಪರಿಸರಕ್ಕೆ ಮಣಿಯಲೇಬೇಕಾದ ಅನಿವಾರ್ಯತೆಯ ಚಿತ್ರ, ಇಂದಿನ ಸಮಾಜದಲ್ಲಿನ ಅನ್ಯಾಯ ದಬ್ಬಾಳಿಕೆಯನ್ನು ಹತ್ತಿಕ್ಕಲೇಬೇಕು ಎನ್ನುವ ಛಲದ ಹೋರಾಟಕ್ಕೆ, ಹೋರಾಟದ ಜಯಕ್ಕೆ ಒಂದು ದೃಷ್ಟಾಂತವಾಗಿದೆ.

ಗ್ರಾಮೀಣ ಜನರ ಭಾಷೆಯನ್ನು ಸಹಜವಾಗಿ ಬಳಸಿರುವುದರಿಂದ ಆ ಪಾತ್ರಗಳಿಗೆ ನೈಜತೆ ಮೂಡಿದೆ. ಗಿರಿಜೆಯ ಮದುವೆ, ಅರಸಪ್ಪ ಕೈ ಕಳೆದುಕೊಳ್ಳುವುದು, ಕಾರ್ಮಿಕ ಸಂಘದ ಸ್ಥಾಪನೆ, ಹೋರಾಟ, ಗಿರಿಜೆಯ ಮಾನಸಿಕ ಪರಿವರ್ತನೆ, ಗಂಗಾಧರನ ಮದುವೆಯ ವಿಷಯದಲ್ಲಿ ಉಗ್ರಪ್ಪ ತಳೆಯುವ ಭಾವನೆ – ಇವೆಲ್ಲ ಮಹತ್ವದ ಘಟ್ಟ ಗಳಾಗಿ ಹೊಸ ತಿರುವು ಪಡೆದು ಕಾದಂಬರಿಯ ಬೆಳವಣಿಗೆಯಲ್ಲಿ ಸಹಾಯಕವಾಗಿವೆ.

ಸಮಾಜಶಾಸ್ತ್ರದ ಸಂಗತಿ, ಜನಾಂಗದ ಆಚರಣೆ, ಸಾಹಿತ್ಯಕ ವಿಚಾರಧಾರೆ, ಮುಗ್ಧ ಜನರ ನಿಸ್ಸಹಾಯಕತೆ, ಕಾರ್ಮಿಕರ ಹೋರಾಟ ಈ ವಿಚಾರಧಾರೆಗಳು ಕಾದಂಬರಿಗೆ ಹೊಸ ಆಯಾಮವನ್ನು ತಂದುಕೊಟ್ಟಿವೆ.

ರಂಗದಾಸನ ವಿಚಾರವಂತಿಕೆ, ಉಗ್ರಪ್ಪನ ದಾಷ್ಟಿಕತೆ, ಮುದ್ದುಸ್ವಾಮಿಯ ಕ್ರೌರ್ಯ, ಮೂಡಲಯ್ಯನ ಲಂಪಟತನ, ಗಂಗಾಧರನ ಸ್ವಾರ್ಥ, ಸೂರಮ್ಮನ ಅಸಹಾಯಕತೆ, ಗಿರಿಜೆಯ ಪ್ರೇಮನಿಷ್ಠೆ, ಭಾಗವತನ ಚಾಕಚಕ್ಯತೆ, ಸಾಂಬಶಿವರ ಸರಳತೆ, ತಿಮ್ಮಪ್ಪನ ಪ್ರಚಾರಪ್ರಿಯತೆ; ಈ ವಿಭಿನ್ನ ವ್ಯಕ್ತಿಗಳ ವಿಶಿಷ್ಟ ಗುಣಗಳಿಂದ ಕಾದಂಬರಿ ಸಮಗ್ರ ವೈವಿಧ್ಯತೆಯ ಸತ್ವ ಪಡೆದಿದೆ. ಡಾ. ಅನುಪಮಾ ಅವರ ಸಾಹಿತ್ಯ ಕೃತಿಗಳಲ್ಲಿ 'ಎಳೆ' ವೈಚಾರಿಕ ನೆಲೆಗಟ್ಟಿನ ಒಂದು ಉತ್ತಮ ಕಾದಂಬರಿಯಾಗಿದೆ.

## ಬಿ.ಡಿ.ಎ. ಮೊದಲನೆಯ ಸೆಮಿಸ್ಟರ್, ಕನ್ನಡ ಭಾಷಾ ಪಠ್ಯ ಪುಸ್ತಕ

ವಾಣಿಜ್ಯ ವಿಶ್ಲೇಷಣಾ ಸಂಪದ–1

## ಪ್ರಶ್ನೆಪತ್ರಿಕೆಯ ಸ್ವರೂಪ:

I. ಎರಡು ಅಂಕಗಳ ಎಂಟು ಪ್ರಶ್ನೆಗಳನ್ನು ಕೊಟ್ಟು 5 ಪ್ರಶ್ನೆಗಳಿಗೆ ಉತ್ತರಿಸಬೇಕು; 5*2=10

(ಮೊದಲ ಸೆಮಿಸ್ಟರ್‌ಗೆ ಕವಿತೆಗಳಿಂದ 4 ಪ್ರಶ್ನೆಗಳು, ಕಥೆಗಳಿಂದ 2 ಪ್ರಶ್ನೆಗಳು, ಲೇಖನಗಳಿಂದ 2 ಪ್ರಶ್ನೆಗಳು)

(ಎರಡನೇ ಸೆಮಿಸ್ಟರ್ ಗೆ ನಾಟಕದಿಂದ 4 ಪ್ರಶ್ನೆಗಳು, ಕಾದಂಬರಿಯಿಂದ 4 ಪ್ರಶ್ನೆಗಳು)

II. ಐದು ಅಂಕಗಳ ಎಂಟು ಪ್ರಶ್ನೆಗಳನ್ನು ಕೊಟ್ಟು 6 ಪ್ರಶ್ನೆಗಳಿಗೆ ಉತ್ತರಿಸಬೇಕು. 6*5=30

(ಮೊದಲ ಸೆಮಿಸ್ಟರ್ ಗೆ ಕವಿತೆಗಳಿಂದ 4 ಪ್ರಶ್ನೆಗಳು, ಕಥೆಗಳಿಂದ 2 ಪ್ರಶ್ನೆಗಳು, ಲೇಖನಗಳಿಂದ 2 ಪ್ರಶ್ನೆಗಳು )

(ಎರಡನೇ ಸೆಮಿಸ್ಟರ್ ಗೆ ನಾಟಕದಿಂದ 4 ಪ್ರಶ್ನೆಗಳನ್ನು, ಕಾದಂಬರಿಯಿಂದ 4 ಪ್ರಶ್ನೆಗಳನ್ನು ಕೊಡಬೇಕು)

III. ಹತ್ತು ಅಂಕಗಳ 6 ಪ್ರಶ್ನೆಗಳನ್ನು ಕೊಟ್ಟು 4 ಪ್ರಶ್ನೆಗಳಿಗೆ ಉತ್ತರಿಸಬೇಕು. 4*10=40

(ಮೊದಲ ಸೆಮಿಸ್ಟರ್ ಗೆ ಕವಿತೆಗಳಿಂದ 3 ಪ್ರಶ್ನೆಗಳು, ಕಥೆಗಳಿಂದ 2 ಪ್ರಶ್ನೆಗಳು, ಲೇಖನದಿಂದ 1 ಪ್ರಶ್ನೆ ಕೊಡಬೇಕು.)

(ಎರಡನೇ ಸೆಮಿಸ್ಟರ್ ಗೆ ನಾಟಕದಿಂದ 3 ಪ್ರಶ್ನೆಗಳನ್ನು, ಕಾದಂಬರಿಯಿಂದ 3ಪ್ರಶ್ನೆಗಳನ್ನು ಕೊಡಬೇಕು.)

* * * * * * *

# ಸಂಪಾದಕ ಮಂಡಳಿ


**ಪ್ರಧಾನ ಸಂಪಾದಕರು**

ಡಾ. ಎಂ.ಜಿ. ಮಂಜುನಾಥ್

ಪ್ರಾಧ್ಯಾಪಕರು,

ಹಾಸನ ವಿಶ್ವವಿದ್ಯಾಲಯ, ಹಾಸನ.

**ಸಂಪಾದಕರು**

**ಡಾ. ರುದ್ರೇಶ ಅದರಂಗಿ**

ಸಹಪ್ರಾಧ್ಯಾಪಕರು

ಸರಕಾರಿ ಕಲಾ ಕಾಲೇಜು, ಬೆಂಗಳೂರು.

**ಡಾ. ಶೀಲವಂತ ಸಂಜೀವಕುಮಾರ್**

ಮುಖ್ಯಸ್ಥರು, ಕನ್ನಡ ವಿಭಾಗ

ಶ್ರೀ ಜಗದ್ಗುರು ರೇಣ್ಕಾಕಚಾರ್ಯ ವಿಜ್ಞಾನ, ಕಲಾ ಮತ್ತು ವಾಣಿಜ್ಯ

ಮಹಾವಿದ್ಯಾಲಯ, ಬೆಂಗಳೂರು. 09

**ಡಾ. ಪ್ರೇಮಾವತಿ ಎಸ್.ಕೆ.**

ಸಹಪ್ರಾಧ್ಯಾಪಕರು

ಆರ್.ಸಿ. ಕಾಲೇಜು, ಬೆಂಗಳೂರು.

**ಡಾ. ಆರ್. ವಾದಿರಾಜು**

ಸಹಾಯಕ ಪ್ರಾಧ್ಯಾಪಕರು

ವಿಜಯಾ ಕಾಲೇಜು, ಬೆಂಗಳೂರು.

# ಬೆಂಗಳೂರು ನಗರ ವಿಶ್ವವಿದ್ಯಾಲಯ

## ಕನ್ನಡ ಸ್ನಾತಕ ಅಧ್ಯಯನ ಮಂಡಳಿ

**ಅಧ್ಯಕ್ಷರು:**

ಡಾ. ಎಂ.ಜಿ. ಮಂಜುನಾಥ್

ಪ್ರಾಧ್ಯಾಪಕರು,

ಹಾಸನ ವಿಶ್ವವಿದ್ಯಾಲಯ, ಹಾಸನ.

**ಸದಸ್ಯರು:**

**ಡಾ. ಎಸ್. ಮನೋನ್ಮನಿ**
ಪ್ರಾಧ್ಯಾಪಕರು, ಬಿಷಪ್‌ಕಾಟನ್ ಮಹಿಳಾ ಕಾಲೇಜು,
ಮಿಷನ್‌ರಸ್ತೆ, ಬೆಂಗಳೂರು.

**ಡಾ. ಸುವರ್ಣ ಸಂಗಣ್ಣ ಹುಡೇದ**
ಪ್ರಾಂಶುಪಾಲರು
ಹೆಚ್.ಕೆ.ಇ.ಎಸ್. ವೀರೇಂದ್ರ ಪಾಟೀಲ್ ಕಾಲೇಜು
ಸದಾಶಿವನಗರ, ಬೆಂಗಳೂರು.

**ಡಾ. ಎಸ್. ಗೀತಾ**
ಪ್ರಾಧ್ಯಾಪಕರು
ಸರ್ಕಾರಿ ಪ್ರಥಮದರ್ಜೆ ಕಾಲೇಜು
ಯಲಹಂಕ, ಬೆಂಗಳೂರು.

**ಪ್ರೊ. ಬೊಮ್ಮೇಗೌಡ**
ಪ್ರಾಧ್ಯಾಪಕರು,
ವಿ.ವಿ.ಪುರಂ ಕಲಾ ಮತ್ತು ವಾಣಿಜ್ಯ ಕಾಲೇಜು,
ವಿ.ವಿ.ಪುರಂ, ಬೆಂಗಳೂರು.

**ಡಾ. ಎಸ್.ಎಲ್. ಮಂಜುನಾಥ್**
ಪ್ರಾಧ್ಯಾಪಕರು,
ವಿಜಯಕಾಲೇಜು, ಜಯನಗರ ಬೆಂಗಳೂರು–560011.

**ಡಾ. ಕೆ.ವೈ. ನಾರಾಯಣಸ್ವಾಮಿ**
ಪ್ರಾಧ್ಯಾಪಕರು,
ಮಹಾರಾಣಿಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು.

**ಡಾ. ಬಿ.ಎಸ್. ಪೂರ್ಣಿಮ**
ಪ್ರಾಧ್ಯಾಪಕರು
ಸಂತಜೋಸೆಫ್ ವಿಶ್ವವಿದ್ಯಾಲಯ, ಬೆಂಗಳೂರು.

**ಡಾ. ಬೆಟ್ಟೆಗೌಡ**
ಪ್ರಾಧ್ಯಾಪಕರು
ಸರ್ಕಾರಿ ಪ್ರಥಮದರ್ಜೆ ಕಾಲೇಜು,
ಕುವೆಂಪು ನಗರ, ಮೈಸೂರು.

**ಡಾ. ಎನ್.ಆರ್. ಚಂದ್ರೇಗೌಡ**
ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ ಕರ್ನಾಟಕ
ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು